ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ

## (ಪರಿಷ್ಕೃತ – 2022)

©KTBS Not to be republished

೫

## ಐದನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ನಂ. ೪, ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ,
ಬೆಂಗಳೂರು – ೫೬೦೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

**ಡಾ॥ ನಾ. ದಾಮೋದರ ಶೆಟ್ಟಿ,** ನಿವೃತ್ತ ಪ್ರಾಧ್ಯಾಪಕರು, ಸಂತ ಎಲೋಶಿಯಸ್ ಕಾಲೇಜು, ಮಂಗಳೂರು.

**ಸದಸ್ಯರು :**

೧. **ಶ್ರೀ ವೀರೇಶ್‌ಕೌಲಗಿ,** ಸ.ಶಿ. ಸರ್ಕಾರಿ ಪ್ರೌಢಶಾಲೆ, ಹಿರೇಗೌಜ ಅಂಚೆ, ಚಿಕ್ಕಮಗಳೂರು ಜಿಲ್ಲೆ.

೨. **ಶ್ರೀ ರವಿಕುಮಾರ್,** ಸ.ಶಿ. ಸರ್ಕಾರಿ ಪ್ರೌಢಶಾಲೆ, ಎಸ್. ಮಾದಾಪುರ, ಕಡೂರು ತಾಲ್ಲೂಕು.

೩. **ಶ್ರೀಮತಿ ಕೆ.ಎನ್. ಕಲ್ಪನ,** ಸ.ಶಿ.ಸ.ಹಿ.ಪ್ರಾ. ಶಾಲೆ, ಪೇಟೆ, ಹೊಳೆನರಸೀಪುರ, ಹಾಸನ ಜಿಲ್ಲೆ.

೪. **ಶ್ರೀಮತಿ ರೋಹಿಣಿ ಎಸ್. ದಾನಿ,** ಸ.ಶಿ.ಸ.ಹಿ.ಪ್ರಾ. ಶಾಲೆ ರಬಕವಿ, ಜಮಖಂಡಿ ತಾ॥ ಬಾಗಲಕೋಟೆ ಜಿಲ್ಲೆ.

೫. **ಶ್ರೀ ಜೆ. ಸುರೇಶ್,** ಸಿ.ಆರ್.ಪಿ. ನಲ್ಲೂರು ಕ್ಲಸ್ಟರ್, ಶೃಂಗೇರಿ ತಾಲ್ಲೂಕು.

೬. **ಶ್ರೀ ಜಾನ್‌ಚಂದ್ರನ್,** ಚಿತ್ರಕಲಾ ಶಿಕ್ಷಕರು, ಸಂತ ಎಲೋಶಿಯನ್ ಪ್ರೌಢಶಾಲೆ, ಮಂಗಳೂರು.

**ಪರಿಶೀಲಕರು :**

**ಶ್ರೀ ಕಾ, ತ, ಚಿಕ್ಕಣ್ಣ,** ಜಂಟಿ ನಿರ್ದೇಶಕರು (ನಿವೃತ್ತ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

**ಸಂಪಾದಕೀಯ ಮಂಡಳಿ ಸದಸ್ಯರು :**

೧. **ಪ್ರೊ॥ ಸಾ.ಶಿ. ಮರುಳಯ್ಯ,** ಸಾಹಿತಿಗಳು, 'ರಾಗಿಣಿ' ಹಂಪಿನಗರ, ಬೆಂಗಳೂರು.

೨. **ಪ್ರೊ॥ ಅ.ರಾ. ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೩. **ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ.

**ಮುಖ್ಯ ಸಂಯೋಜಕರು :**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ,** ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

©KTBS
Not to be republished

# ಮುನ್ನುಡಿ

೨೦೦೫ ನೆಯ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೆಯ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ಅಧ್ಯಯನ, ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ. ◆ ಅಂತರ್ಗತ ವಿಧಾನ (Integrated Approach), ◆ ರಚನಾತ್ಮಕ ವಿಧಾನ (Constructive Approach), ಹಾಗೂ ◆ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕ ವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟುಮಾಡಿಕೊಳ್ಳುವಂತೆ ಮಾಡಬೇಕು.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

©KTBS Not to be republished

# ನಾಂದಿ

ಐದನೆಯ ತರಗತಿಯ ಕನ್ನಡ ಪ್ರಥಮ ಭಾಷೆಯನ್ನು ಅಭ್ಯಾಸ ಮಾಡುವ ಮಕ್ಕಳು ಯಾವ ಮಟ್ಟದ ಪಾಠಗಳನ್ನು ಓದಬೇಕು ಎಂಬುದರ ಬಗ್ಗೆ ಕರ್ನಾಟಕ ಸರಕಾರದ ಪಠ್ಯಪುಸ್ತಕ ರಚನಾ ಸಂಘವು ಕೊಟ್ಟ ಸ್ಥೂಲ ರೂಪುರೇಷೆಯನ್ನು ಆಧಾರವಾಗಿಟ್ಟುಕೊಂಡು ನಮ್ಮ ಸಮಿತಿಯು ಬಹಳ ಎಚ್ಚರಿಕೆಯಿಂದ ಈ ಪುಸ್ತಕವನ್ನು ಸಿದ್ಧಪಡಿಸಿದೆ. ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾದ ಪಾಠವನ್ನು ಆಯ್ಕೆ ಮಾಡುವ ಬಹುದೊಡ್ಡ ಕಸರತ್ತನ್ನು ನಿಭಾಯಿಸಿ, ಅದಕ್ಕೆ ಬೇಕಾದ ಅಭ್ಯಾಸ, ವ್ಯಾಕರಣ ಇತ್ಯಾದಿಗಳನ್ನು ಪೋಣಿಸಿ ಈ 'ಸಿರಿ ಕನ್ನಡ' ವನ್ನು ಸಿದ್ಧಪಡಿಸಿದ್ದೇವೆ.

ಹಾಗೆ ಸಿದ್ಧಪಡಿಸುವಾಗ ಸಾಮರ್ಥ್ಯದ ಜೊತೆಜೊತೆಗೇ ಬದುಕಿಗೆ ನೇರ ಸಂಬಂಧ ಪಡುವ ಮೌಲ್ಯಗಳನ್ನು ಅಳವಡಿಸಿದ್ದೇವೆ. ಸಮಾಜದಲ್ಲಿ ಅತ್ಯುತ್ತಮ ಪ್ರಜೆಯಾಗಿ ರೂಪುಗೊಳ್ಳುವುದಕ್ಕೆ ಸಂಬಂಧಪಡುವ ಅನೇಕ ಅಂಶಗಳು ಇಲ್ಲಿವೆ.

ಐದನೆಯ ತರಗತಿ ಎಂದರೆ ಮಕ್ಕಳ ಮನಸ್ಸು ಭಾಷೆಗೆ ಸರಿಯಾಗಿ ತೆರೆದುಕೊಳ್ಳುವ ಕಾಲವೆಂಬುದು ನಮ್ಮ ನಂಬಿಕೆ ಕನ್ನಡ ಪದಗಳು, ವಾಕ್ಯಗಳು ಒಟ್ಟಾರೆಯಾಗಿ ಕನ್ನಡಭಾಷೆ ಮಕ್ಕಳ ಮನಸ್ಸಿನಲ್ಲಿ ಅರಳುವ ಕಾಲ.

ಈ ಪಠ್ಯದಲ್ಲಿ ಪರಿಸರ ಸಂರಕ್ಷಣೆ ಇದೆ, ಶ್ರಮದಾನವಿದೆ, ದೇಶಪ್ರೇಮವಿದೆ, ತಾಳ್ಮೆಯ ಮಹತ್ವವಿದೆ, ಪುರಾಣದ ಅಭಿರುಚಿಯಿದೆ, ರೈತನ ದುಡಿಮೆಯಿದೆ, ಈ ರೀತಿ ಹತ್ತಾರು ಬಗೆಯ ವಸ್ತುಗಳು ಪಠ್ಯಪುಸ್ತಕಕ್ಕೆ ಬಹುಮುಖಿ ಆಯಾಮವನ್ನು ಒದಗಿಸಿಕೊಟ್ಟಿವೆ.

ಮಕ್ಕಳ ಸಾಮರ್ಥ್ಯದ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಪಾಠಗಳು ಸರಳತೆಯಿಂದ ಕ್ಲಿಷ್ಟತೆಯ ಕಡೆಗೆ ಸಾಗುವಂತೆ ಎಚ್ಚರ ವಹಿಸಲಾಗಿದೆ. ಪಠ್ಯದ ಮಹತ್ವವನ್ನೇ ಪೂರಕ ಪಠ್ಯಗಳಿಗೂ ನೀಡಿದ್ದೇವೆ ಎನ್ನಲಾಗುವುದಿಲ್ಲ. ಪೂರಕ ಪಾಠವೆಂದರೆ 'ಮುಂದುವರಿದ ಓದು' ಎಂದರ್ಥ. ಪಾಠ ಓದುವಾಗ ಒದಗಬಹುದಾದ ಕುತೂಹಲವನ್ನು ಅಲ್ಲಲ್ಲಿ ಕೊಟ್ಟಿರುವ ಪೂರಕ ಪಾಠಗಳು ತಣಿಸಬಹುದೆಂಬ ವಿಶ್ವಾಸ ನಮ್ಮದು. ಪರೀಕ್ಷೆಗೆ ಉತ್ತರಿಸದೆ ತಮ್ಮ ಖುಷಿಗೆ ಓದುವುದೆಂದರೆ ಮಕ್ಕಳಿಗೆ ಸಹಜವಾಗಿಯೇ ಪ್ರಿಯವೆನ್ನಿಸುತ್ತದೆ. ಪೂರಕಪಾಠವನ್ನು ಮಕ್ಕಳು ಓದಿರುವುದನ್ನು ಖಾತ್ರಿಪಡಿಸಲು ಆಯಾ ಪೂರಕ ಪಾಠಗಳ ಕೆಳಗೆ ಸರಳವಾದ ಕೆಲವು ಪ್ರಶ್ನೆಗಳನ್ನೂ ನೀಡಲಾಗಿದೆ. ಅಧ್ಯಾಪಕರು ಆ ಪ್ರಶ್ನೆಗಳನ್ನು ಕೇಳಿದರೆ ಮಕ್ಕಳು ಅವನ್ನು ಓದಿರುವುದು ಅಥವಾ ಓದದೇ ಇರುವುದು ಅರಿವಿಗೆ ಬರುತ್ತದೆ. ಮೇಲಾಗಿ ಸಣ್ಣದೊಂದು ಅಂಕ ಅವಕ್ಕೂ ಇದೆಯೆಂಬುದನ್ನು ವಿದ್ಯಾರ್ಥಿಗಳು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ವ್ಯಾಕರಣ ಮಾಹಿತಿ ಬಳಿಕ ಒಂದಷ್ಟು ಅಭ್ಯಾಸ ಭಾಗದ ಪ್ರಶ್ನೆಗಳನ್ನು ಇಲ್ಲಿ ನೀಡಲಾಗಿದೆ. ವಿದ್ಯಾರ್ಥಿಗಳು ಪ್ರತ್ಯೇಕವಾದ ಅಭ್ಯಾಸ ಪುಸ್ತಕದಲ್ಲಿ ಉತ್ತರ ಬರೆಯುವುದನ್ನು ರೂಢಿಸಿಕೊಳ್ಳಬೇಕು.

ವ್ಯಾಕರಣ ಭಾಗವನ್ನು ಬಹಳ ಸರಳಗೊಳಿಸಿದ್ದೇವೆ. ಐದನೆಯ ಕನ್ನಡ ಪ್ರಥಮ ಭಾಷೆಯ ಪಠ್ಯಪುಸ್ತಕವನ್ನು ಸಿದ್ಧಪಡಿಸುವ ಕೆಲಸದಲ್ಲಿ ಮನಸಾರೆ ಶ್ರಮಿಸಿದ ನನ್ನ ತಂಡದ ಎಲ್ಲ ಸದಸ್ಯರಿಗೂ ಪರಿಶೀಲಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ನನ್ನ ಮನದುಂಬಿದ ಪ್ರಣಾಮಗಳು.

ಈ ಹೊತ್ತಗೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ನಮ್ಮ ಸಮಿತಿಗೆ ಒಪ್ಪಿಸಿಕೊಟ್ಟ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಿಗೆ, ಉಪನಿರ್ದೇಶಕರಿಗೆ, ಸಂಯೋಜಕರಾದ ಪ್ರೊ. ಜಿ.ಎಸ್. ಮುಡಂಬಡಿತ್ತಾಯರವರಿಗೆ, ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ಪಾಂಡುರಂಗ ಮೊದಲಾದ ಎಲ್ಲರಿಗೂ ನನ್ನ ಹಾಗೂ ನಮ್ಮ ತಂಡದ ಗೌರವಪೂರ್ವಕ ನಮನಗಳು.

**ಡಾ. ನಾ. ದಾಮೋದರ ಶೆಟ್ಟಿ**
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ
ಐದನೆಯ ತರಗತಿ
ಕನ್ನಡ ಪ್ರಥಮ ಭಾಷೆ

©KTBS Not to be republished

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ)ಬೆಂಗಳೂರು–೮೫

### ಪರಿಷ್ಕರಣ ಸಮಿತಿ

**ಅಧ್ಯಕ್ಷರು**

**ಡಾ. ರಾಜಪ್ಪ ದಳವಾಯಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

**ಸದಸ್ಯರು**

**ಡಾ. ಜಗನ್ನಾಥ್. ಹೆಬ್ಬಾಳೆ,** ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮದರ್ಜೆ ಕಾಲೇಜು, ಬೀದರ್

**ಶ್ರೀ ಅಲ್ಲಮಪ್ರಭು ಬೆಟ್ಟದೂರು,** ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

**ಶ್ರೀ ವಿ.ರಂಗಪ್ಪಯ್ಯಹೊಳ್ಳ,** ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

**ಶ್ರೀ ಬಿ. ರವೀಶ್‌ಕುಮಾರ್,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು–೬೧

**ಶ್ರೀ ತಮ್ಮಣ್ಣಗೌಡ ಹೆಚ್.ಸಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು.

**ಶ್ರೀಮತಿ ಸುಶೀಲ,** ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿಪೂರ್ವ ಕಾಲೇಜು, ಮದ್ದೂರು ತಾಲ್ಲೂಕು.

**ಶ್ರೀ ಬಸವರಾಜಪ್ಪ, ಎಂ,** ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸ.ಪ.ಪೂ. ಕಾಲೇಜು, ಹೊಸನಗರ ತಾ.

**ಶ್ರೀ ಎನ್.ಬಿ.ವೀರನಗೌಡ,** ಬಿ.ಆರ್.ಪಿ, ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

**ಕಲಾವಿದರು:**

**ಶ್ರೀ ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು.

### ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು–೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ , ಮೈಸೂರು–೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ, ಎಚ್.ಎಸ್.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು–೮೫

**ಶ್ರೀ ಕೆ. ಜಿ. ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು–೮೫

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು–೮೫

©KTBS Not to be republished

## ಪರಿಷ್ಕರಣೆ ಕುರಿತು.

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ

©KTBS Not to be republished

ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ, ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

©KTBS Not to be republished

(ಎಂ.ಪಿ. ಮಾದೇಗೌಡ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

(ಪ್ರೊ. ಬರಗೂರು ರಾಮಚಂದ್ರಪ್ಪ)
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭–೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾಗಿದ್ದ ಭಾಷಾ ಪಠ್ಯಗಳಲ್ಲಿ ನಮಗೆ ಅನೇಕ ಸಮಸ್ಯೆಗಳು ಕಂಡುಬಂದವು. ಅವುಗಳನ್ನು ಸರಿಪಡಿಸಲು ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಭಾಷಾಪಠ್ಯವು ಇರುವುದು ವಿದ್ಯಾರ್ಥಿಯಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಉತ್ತಮಪಡಿಸುವುದಕ್ಕೆ. ಭಾಷಾಪಠ್ಯಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಯಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು; ಆತನ ಭಾಷಾಪ್ರೌಢಿಮೆ ಗಣನಾತ್ಮಕವಾಗಿ ಹೆಚ್ಚಬೇಕು. ಓದುವ, ಆಲಿಸುವ, ಮಾತಾಡುವ ಮತ್ತು ಬರೆಯುವ ಸಾಮರ್ಥ್ಯಗಳು ಸುಧಾರಿಸಬೇಕು. ಸ್ವತಂತ್ರವಾಗಿ ವಿದ್ಯಾರ್ಥಿಯು ತನ್ನ ಅಭಿಪ್ರಾಯ, ಅನಿಸಿಕೆಗಳನ್ನು ಅತ್ಯಂತ ಶಕ್ತಿಶಾಲಿಯಾಗಿ ಹೇಳುವುದಕ್ಕೆ ಸಾಧ್ಯವಾಗಬೇಕು. ೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾದ ಪಠ್ಯಪುಸ್ತಕಗಳಲ್ಲಿ ಭಾಷೆಯ ಈ ಬಗೆಯ ಕಲಿಕೆಗೆ ಹಿನ್ನಡೆಯಾಗಿ ಕೇವಲ ಸಿದ್ಧಾಂತಪ್ರಚಾರವೇ ಮುನ್ನೆಲೆಗೆ ಬಂದಿದ್ದುದನ್ನು ಗಮನಿಸಿದೆವು. ಆ ಪಠ್ಯಗಳ ಮರುಪರಿಷ್ಕರಣೆಯ ಹೊತ್ತಿನಲ್ಲಿ ಈ ನಿಯಮಗಳನ್ನು ಹೇರಿಕೊಂಡೆವು: (೧) ಭಾಷಾಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕನ್ಯಾಯ, ಲಿಂಗಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಹಾಗಾಗಿ ಭಾಷೆಯ ವೈವಿಧ್ಯ ಹಾಗೂ ವಿಶೇಷಗಳನ್ನು ಹೆಚ್ಚು ಕಾಣಿಸುವ ಗದ್ಯ/ಪದ್ಯ ಭಾಗಗಳನ್ನು ಆರಿಸಿಕೊಳ್ಳಬೇಕು. (೨) ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತಪ್ರಚಾರಕ್ಕೆ ಅವಕಾಶವಾಗಬಾರದು. (೩) ಗ್ರಾಂಥಿಕ ಭಾಷೆಯಲ್ಲದೆ ಮೌಖಿಕ ಪರಂಪರೆಯ ಹಾಗೂ ಹಲವು ಪ್ರಕಾರದ ಸಾಹಿತ್ಯಗಳಿಗೆ ಅವಕಾಶ ಕೊಡಬೇಕು. (೪) ಬಳಸಿದ ಭಾಷೆ, ಭಾಷಾಸೊಗಡು, ಪ್ರತಿಪಾದಿಸಿರುವ ವಿಚಾರ, ಹೊಸ ಚಿಂತನೆಗಳನ್ನು ಹುಟ್ಟಿಸುವ ಸಾಧ್ಯತೆ, ಸಾಹಿತ್ಯ ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಎಲ್ಲ ಬಗೆಯಲ್ಲೂ

©KTBS Not to be republished

ಪಾಠಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು. (೫) ಕವಿ/ಲೇಖಕರ ಪುನರಾವರ್ತನೆಯನ್ನು ಕಡಿಮೆ ಮಾಡಿ ಹೊಸ ಕವಿ/ಲೇಖಕರ ಬರಹಗಳಿಗೆ ಅವಕಾಶ ಮಾಡಿಕೊಡಬೇಕು. (೬) ಭಾಷೆಯ ಸೊಬಗನ್ನು ಪರಿಚಯಿಸುವ ಭಾಗಗಳನ್ನು ಪ್ರತಿ ಅಧ್ಯಾಯದ ಜೊತೆ ಸೇರಿಸಬೇಕು.

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

©KTBS Not to be republished

**ಪುನರ್ ಪರಿಷ್ಕರಣಾ ಸಮಿತಿ**

**ಶ್ರೀ ರೋಹಿತ್ ಚಕ್ರತೀರ್ಥ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

**ಸದಸ್ಯರು :**

**ಡಾ. ರೋಹಿಣಾಕ್ಷ,** ಸಹಾಯಕ ಪ್ರಾಧ್ಯಾಪಕರು, ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಆಳಂದ ರಸ್ತೆ, ಕಲಬುರಗಿ.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಭಾಷಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು, ದಕ್ಷಿಣ ವಲಯ–೧.

**ಸಲಹೆಗಾರರು :**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

**ಶ್ರೀ ಕೆ.ಜಿ.ರಂಗಯ್ಯ** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ. ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

D7P1F4

# ಪರಿವಿಡಿ


| ಕ್ರ.ಸಂ. | ಪಾಠದ ಶೀರ್ಷಿಕೆಗಳು | ಕೃತಿಕಾರರು | ಪುಟ ಸಂಖ್ಯೆ |
|---|---|---|---|
| | **ಗದ್ಯ ಭಾಗ** | | |
| ೧. | ಒಟ್ಟಿಗೆ ಬಾಳುವ ಆನಂದ | ಜನಪದ ಕತೆ | ೦೧ |
| ೨. | ನದಿಯ ಅಳಲು | ಸಮಿತಿ ರಚನೆ | ೦೮ |
| ೩. | ನಮ್ಮ ಮಾತು ಕೇಳಿ | ಸಮಿತಿ ರಚನೆ | ೧೬ |
| ೪. | ಜೀವದ ಮೌಲ್ಯ | ಕಾನ್‌ಸ್ಟನ್ಸ್ ಜೆ ಫಾಸ್ಟರ್ | ೨೪ |
| ೫. | ಪಂಜರಶಾಲೆ | ಬಿ. ವಿ. ಕಾರಂತ | ೩೧ |
| ೬. | ನಾನು ಮತ್ತು ಹುಂಚಿಮರ | ಗುರುಸಿದ್ಧಯ್ಯ ಹುಚ್ಚಯ್ಯ ಹನ್ನೆರಡುಮಠ | ೩೯ |
| ೭. | ಮಲ್ಲಜ್ಜಿಯ ಮಳಿಗೆ | ಸಮಿತಿ ರಚನೆ | ೪೬ |
| ೮. | ಧೀರ ಸೇನಾನಿ | ಬಸವರಾಜ ಹದ್ಲಿ | ೫೪ |
| ೯ | ಸಂಗೊಳ್ಳಿ ರಾಯಣ್ಣ | ಎಚ್.ಎಸ್. ಸತ್ಯನಾರಾಯಣ | ೬೦ |
| | **ಪದ್ಯಭಾಗ** | | |
| ೧೦. | ಗಿಡಮರ | ಸತ್ಯಾನಂದ ಪಾತ್ರೋಟ | ೬೬ |
| ೧೧. | ಸ್ವಾತಂತ್ರ್ಯದ ಹಣತೆ | ಕೆ. ಎಸ್. ನಿಸಾರ್ ಅಹಮ್ಮದ್ | ೭೧ |
| ೧೨. | ವಚನಗಳು | ಬಸವಣ್ಣ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ | ೭೫ |
| ೧೩. | ಕನ್ನಡ ಕನ್ನಡ ಬರ್‍ರಿ ನಮ್ಮ ಸಂಗಡ | ಚಂದ್ರಶೇಖರ ಪಾಟೀಲ | ೮೧ |
| ೧೪. | ಕರಡಿ ಕುಣಿತ | ದ. ರಾ. ಬೇಂದ್ರೆ | ೮೬ |
| ೧೫. | ಬೇವು ಬೆಲ್ಲದೊಳಿಡಲೇನು ಫಲ | ಪುರಂದರದಾಸರು | ೯೩ |
| ೧೬. | ಮಗುವಿನ ಮೊರೆ | ಸಿದ್ದಯ್ಯ ಪುರಾಣಿಕ | ೯೮ |
| ೧೭. | ಮೂಡಲ ಮನೆ | ಚಂದ್ರಶೇಖರ ಕಂಬಾರ | ೧೦೨ |
| ೧೮. | ಭುವನೇಶ್ವರಿ | ಬಿ.ವಿ. ಸತ್ಯನಾರಾಯಣರಾವ್ | ೧೦೯ |
| | **ಪೂರಕ ಪಾಠಗಳು** | | |
| ೧. | ಪ್ರಾಮಾಣಿಕತೆ | ಸಮಿತಿ ರಚನೆ | ೧೧೬ |
| ೨. | ಮೆಚ್ಚಿನ ಗೊಂಬೆ | ಸಮಿತಿ ರಚನೆ | ೧೧೮ |
| ೩. | ಕಾಮನ ಬಿಲ್ಲು | ನಿಂಗಣ್ಣ ಕುಂಟಿ | ೧೨೧ |
| ೪. | ನನ್ನ ರಟ್ಟೆಯ ಬಲ | ಬುದ್ದಣ್ಣ ಹಿಂಗಮಿರೆ | ೧೨೩ |
| ೫. | ಹಿನ್ನುಡಿ | ದಿನಕರ ದೇಸಾಯಿ | ೧೨೫ |


©KTBS Not to be republished

## ಗದ್ಯ ಭಾಗ

G6U8L3

# ೧. ಒಟ್ಟಿಗೆ ಬಾಳುವ ಆನಂದ

**ಜನಪದ ಕಥೆ –**

**ಪ್ರವೇಶ :** 'ಒಗ್ಗಟ್ಟಿನಲ್ಲಿ ಬಲವಿದೆ'. ಎಲ್ಲರೂ ಒಟ್ಟಾಗಿ ಬಾಳಿದರೆ ಎಲ್ಲರೂ ಸುಖವಾಗಿ ಇರಬಹುದು. ನಮ್ಮ ನಮ್ಮ ನಡುವೆ ಇರುವ ದ್ವೇಷಾಸೂಯೆಗಳನ್ನು ಮರೆತು ಎಲ್ಲರನ್ನು ಪ್ರೀತಿಸುತ್ತಾ ಬಾಳಿದರೆ ನಮ್ಮ ಬದುಕು ಸುಖಮಯವಾಗಿರುತ್ತದೆ.

ಒಂದು ಹಳ್ಳಿ, ಅಲ್ಲಿ ರೈತನೊಬ್ಬನ ಹೊಲ ಇತ್ತು. ಅಲ್ಲಿ ಒಂದು ಬೇವಿನ ಮರವಿತ್ತು. ಹೇಗೋ ಏನೋ ಅದರ ಕೆಳಗೆ ಒಂದು ಗುಂಡನೆಯ ಕಲ್ಲು ಬಂದು ನಿಂತುಕೊಂಡಿತು. ಮರದ ಮೇಲೆ ಕುಳಿತುಕೊಳ್ಳುತ್ತಿದ್ದ ಹಕ್ಕಿಗಳ ಹಿಕ್ಕೆ ಕಲ್ಲಿನ ಮೇಲೆ ಬಿದ್ದು ಬಿದ್ದು, ಆ ಕಲ್ಲು ಬೆಳ್ಳಗಾಗಿ, ವಿಭೂತಿ ಬಳಿದಂತೆ ಕಾಣಿಸುತ್ತಿತ್ತು. ಇದರಿಂದಾಗಿ ಆ ಬಿಳಿಯ ಕಲ್ಲು ಎಲ್ಲರಿಗೂ ಅಮ್ಮನ ಕಲ್ಲಿನಂತೆ ಕಾಣಿಸುತ್ತಿತ್ತು. ಆದ್ದರಿಂದ, ಬೇವಿನ ಮರವನ್ನು ಜನ 'ಅಮ್ಮನ ಮರ' ಎಂದು ಕರೆಯುತ್ತಿದ್ದರು. ಆ ಕಲ್ಲು ಬೇವಿನ ಮರದ ಕೆಳಗಿದ್ದುದರಿಂದ ಅದಕ್ಕೆ 'ಅಮ್ಮನ ಕಲ್ಲು' ಎಂಬ ಹೆಸರು ರೂಢಿಗೆ ಬಂದಿತ್ತು. ಹೀಗೆ ಒಂದರಿಂದ ಇನ್ನೊಂದು ಹೆಸರು ಪಡೆದುಕೊಂಡು ಎರಡೂ ಸುಖವಾಗಿದ್ದವು. 'ಅಮ್ಮನ ಮರ', 'ಅಮ್ಮನ ಕಲ್ಲು' ಎಂದು ಊರಿನ ಜನಗಳು ಅವುಗಳ ತಂಟೆಗೆ ಹೋಗುತ್ತಿರಲಿಲ್ಲ.

©KTBS Not to be republished



ಒಂದು ಸಲ, ತನ್ನಿಂದ ಇನ್ನೊಂದು ಸುಖವಾಗಿದೆ ಎಂದು ಎರಡಕ್ಕೂ ಜಂಬ ಬಂತು. ಬೇವಿನ ಮರ "ನಾನು ಅಮ್ಮನ ಮರ, ನೀನು ನನ್ನ ಕೆಳಗಿರುವುದರಿಂದ ನಿನ್ನನ್ನು ಅಮ್ಮನ ಕಲ್ಲು, ಎಂದು ಜನ ಕರೆಯುತ್ತಾರೆ" ಎಂದು ಹೇಳಿತು. ಅದಕ್ಕೆ ಕಲ್ಲು "ನಾನು ಅಮ್ಮನ ಕಲ್ಲು, ನನ್ನ ಪಕ್ಕದಲ್ಲಿ ನೀನಿರುವುದರಿಂದ ನಿನ್ನನ್ನು ಅಮ್ಮನ ಮರ ಎಂದು ಕರೆಯುತ್ತಾರೆ" ಎಂದಿತು. ಹೀಗೆ ಎರಡೂ ಜಗಳ ಮಾಡಿದವು. ಕೊನೆಗೆ ಕಲ್ಲು ಕೋಪದಿಂದ ಉರುಳಿ ಉರುಳಿ ಬೇವಿನ ಮರದಿಂದ ದೂರ ಹೋಗಿ ನಿಂತಿತು. "ನಾನಿಲ್ಲದಿದ್ದರೆ ಮರವನ್ನು ಕಡಿದುಹಾಕುತ್ತಾರೆ" ಎಂದು ಕಲ್ಲು, "ನನ್ನ ಕೆಳಗಿರದಿದ್ದರೆ ಕಲ್ಲನ್ನು ಒಡೆದು ಹಾಕುತ್ತಾರೆ" ಎಂದು ಮರ-ಹೀಗೆ ಎರಡೂ ತಮ್ಮೊಳಗೆ ಆಲೋಚಿಸುತ್ತಿದ್ದವು.

ಒಂದು ದಿನ ಹೊಲವನ್ನು ಉಳಲಿಕ್ಕೆ ಆ ಹಳ್ಳಿಯ ರೈತ ತನ್ನ ಮಕ್ಕಳ ಜೊತೆ ಬಂದನು. ಅಮ್ಮನ ಕಲ್ಲು ಇಲ್ಲದ ಆ ಬೇವಿನ ಮರವನ್ನು ನೋಡಿ "ಇದನ್ನು ನಾಳೆ ಕಡಿಸಿ, ನೇಗಿಲು, ಚಕ್ರ ಮಾಡಿಸಿ" ಎಂದು ತನ್ನ ಮಕ್ಕಳಿಗೆ ಹೇಳಿದ. ಬೇವಿನ ಮರದಿಂದ ದೂರ ಬಿದ್ದಿದ್ದ ಕಲ್ಲನ್ನು ನೋಡಿ "ಈ ಕಲ್ಲನ್ನು ನಾಳೆ ಕಲ್ಲು ಒಡೆಯುವವರಿಂದ ಒಡೆಸಿದರೆ ನೇಗಿಲನ್ನು ಕಟ್ಟಿ ಉಳಲು ಬರುತ್ತದೆ" ಎಂದು ತನ್ನ ಮಕ್ಕಳಿಗೆ ಹೇಳಿದ. ಇದನ್ನು ಕೇಳಿ ಮರ ಮತ್ತು ಕಲ್ಲು ಎರಡೂ ಭಯದಿಂದ ನಡುಗಿದವು. ನಾವಿಬ್ಬರೂ ಒಬ್ಬರಿಂದ ಒಬ್ಬರು ದೂರವಾಗಿದ್ದರೆ ಜನರು ನಮ್ಮಿಬ್ಬರನ್ನು ನಾಶಮಾಡುತ್ತಾರೆ. ಆದ್ದರಿಂದ ನಾವಿಬ್ಬರೂ ಉಳಿಯುವುದಿಲ್ಲ ಎಂಬ ತಿಳಿವಳಿಕೆ ಮರ ಮತ್ತು ಕಲ್ಲಿಗೆ ಬಂದಿತು. ರೈತ ಮತ್ತು ರೈತನ ಮಕ್ಕಳು ಅತ್ತ ಹೋಗುವುದನ್ನೇ ಕಾದಿದ್ದು, ಕಲ್ಲು "ಬರಲಾ" ಎಂದು ಬೇವಿನ ಮರವನ್ನು ಕೇಳಿತು. ಮರ "ಬೇಗ ಬಾ" ಎಂದು ಕಲ್ಲಿಗೆ ಹೇಳಿತು. ತಾನು ಇನ್ನೊಂದರಿಂದ ಸುಖವಾಗಿರುವುದು ಎಂದು ಈಗ ಎರಡಕ್ಕೂ ತಿಳಿಯಿತು. ಬೇವಿನ ಮರ ಮತ್ತು ಕಲ್ಲು ಮತ್ತೆ ಸ್ನೇಹಿತರಾದವು.

ಮಾರನೆಯ ದಿನ ಮರಕಡಿಯುವವರು ಬಂದು ನೋಡಿದರು. ಕಲ್ಲು ಮರದ ಕೆಳಗೆ ಮೊದಲಿನಂತೆ ನಿಂತಿತ್ತು. ಅವರಿಗೆ ಮರ ಮತ್ತು ಕಲ್ಲಿನ ಬಗೆಗೆ ಭಯ-ಭಕ್ತಿ ಉಂಟಾಯಿತು. "ಇದು ಅಮ್ಮನ ಮರ, ಕಡಿಯುವುದು ಬೇಡ" ಎಂದು ಹೊರಟು ಹೋದರು. ಕಲ್ಲು ಒಡೆಯುವವರು ಬಂದು "ಇದು ಅಮ್ಮನ ಕಲ್ಲು, ಒಡೆಯುವುದು ಬೇಡ" ಎಂದು ಅವರೂ ಹೊರಟು ಹೋದರು.

ಬೇವಿನ ಮರ ಮತ್ತು ಕಲ್ಲು ಕಂಟಕದಿಂದ ಪಾರಾದವು. ಈಗ ಎರಡೂ ಸಹ ಯಾರ ಭಯವಿಲ್ಲದೆ ಸುಖವಾಗಿದ್ದವು.

ಹೀಗೆ ಎಲ್ಲರೂ ಒಟ್ಟಾಗಿ ಬಾಳಿದರೆ, ಎಲ್ಲರೂ ಸುಖವಾಗಿ ಇರಬಹುದು.

**ಕ್ಷೇತ್ರ** : ಮಾತನಾಡುವುದು.

**ಸಾಮರ್ಥ್ಯ** : ಪರಿಚಿತ ವಿಷಯಗಳ ಬಗ್ಗೆ ನಿರರ್ಗಳ ಮತ್ತು ಸಹಜವಾಗಿ ಮಾತನಾಡುವುದು.

©KTBS Not to be republished

**ಆಕರ ಕೃತಿ** : ಸಾಲು ಸಂಪಿಗೆ (ಜನಪದ ಕಥೆಗಳು)
**ಸಂಪಾದಕರು** : ಪ್ರೊ. ಕಾಳೇಗೌಡ ನಾಗವಾರ, ಜಿ. ವಿ. ಆನಂದಮೂರ್ತಿ

## ಪದಗಳ ಅರ್ಥ

ಕಂಟಕ – ಕೇಡು, ವಿಪತ್ತು
ಜಗಳ – ಕಲಹ
ಜಂಬ – ಗರ್ವ, ಒಣ ಆಡಂಬರ
ನೇಗಿಲು – ಭೂಮಿಯನ್ನು ಉಳುವ ಸಾಧನ
ರೈತ – ಬೇಸಾಯ ಮಾಡುವವನು,
ವಿಭೂತಿ – ಭಸ್ಮ, ಬೂದಿ
ಹಿಕ್ಕೆ – ಹಕ್ಕಿಗಳ ಮಲ

## ಅಭ್ಯಾಸ

©KTBS Not to be republished

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಗುಂಡನೆಯ ಕಲ್ಲು ಎಲ್ಲಿತ್ತು?
೨. ಬೇವಿನ ಮರವನ್ನು ಜನ ಏನೆಂದು ಕರೆಯುತ್ತಿದ್ದರು?
೩. ಕಲ್ಲು ಕೋಪದಿಂದ ಏನು ಮಾಡಿತು?
೪. ಮರ ಕಡಿಯುವವರು ಏನೆಂದು ಹೇಳಿ ಹೊರಟು ಹೋದರು?
೫. ಕಲ್ಲು ಹೊಡೆಯುವವರು ಏನೆಂದು ಹೇಳಿ ಹೊರಟು ಹೋದರು?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಜಂಬದಿಂದ ಬೇವಿನ ಮರ ಅಮ್ಮನ ಕಲ್ಲಿಗೆ ಏನೆಂದು ಹೇಳಿತು?
೨. ಜಂಬದಿಂದ ಅಮ್ಮನ ಕಲ್ಲು ಬೇವಿನ ಮರಕ್ಕೆ ಏನೆಂದು ಹೇಳಿತು?
೩. ಬೇರೆ ಬೇರೆಯಾಗಿದ್ದ ಬೇವಿನ ಮರ ಮತ್ತು ಕಲ್ಲನ್ನು ನೋಡಿ ರೈತನು ತನ್ನ ಮಕ್ಕಳಿಗೆ ಏನು ಹೇಳಿದನು?
೪. ಬೇವಿನ ಮರ ಮತ್ತು ಅಮ್ಮನ ಕಲ್ಲು ಮತ್ತೆ ಹೇಗೆ ಸ್ನೇಹಿತರಾದವು?

## ಇ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

೧. ಬೇವಿನ ಮರವನ್ನು ಜನ ____________ ಎಂದು ಕರೆಯುತ್ತಿದ್ದರು.

೨. ನಾವಿಬ್ಬರೂ ಒಬ್ಬರಿಂದ ಒಬ್ಬರು ____________ ಜನರು ನಮ್ಮಿಬ್ಬರನ್ನು ನಾಶಮಾಡುತ್ತಾರೆ.

೩. "ಇದು ಅಮ್ಮನ ಮರ ____________ ಬೇಡ" ಎಂದು ಹೊರಟುಹೋದರು.

೪. ಕಲ್ಲು ಒಡೆಯುವವರು ಬಂದು "ಇದು ಅಮ್ಮನ ಕಲ್ಲು, ____________ ಬೇಡ ಎಂದು ಅವರೂ ಹೊರಟುಹೋದರು.

೫. ಎಲ್ಲರು ____________ ಬಾಳಿದರೆ, ಎಲ್ಲರು ____________ ಇರಬಹುದು.

# ವ್ಯಾಕರಣ ಮಾಹಿತಿ

## ಅ. ವರ್ಣಮಾಲೆ

ಕನ್ನಡದಲ್ಲಿ ಒಟ್ಟು ೪೯ ಅಕ್ಷರಗಳಿವೆ. ಇವುಗಳನ್ನು ವರ್ಣಗಳೆಂದು ಕರೆಯುತ್ತಾರೆ. ಈ ಅಕ್ಷರಗಳ ಕ್ರಮಬದ್ಧ ಜೋಡಣೆಗೆ 'ವರ್ಣಮಾಲೆ' ಅಥವಾ 'ಅಕ್ಷರಮಾಲೆ' ಎಂದು ಹೆಸರು.

**ವರ್ಣಮಾಲೆಯಲ್ಲಿ ಮೂರು ವಿಧಗಳು**

ಅ) ಸ್ವರಾಕ್ಷರಗಳು ಆ) ವ್ಯಂಜನಾಕ್ಷರಗಳು ಇ) ಯೋಗವಾಹಗಳು

©KTBS Not to be republished

## ಆ. ಸ್ವರಾಕ್ಷರಗಳು

ಸ್ವತಂತ್ರವಾಗಿ ಉಚ್ಚರಿಸಲಾಗುವ ಅಕ್ಷರಗಳು ಸ್ವರಾಕ್ಷರಗಳು.

ಒಟ್ಟು ಸ್ವರಾಕ್ಷರಗಳು ೧೩.

**ಸ್ವರಾಕ್ಷರಗಳಲ್ಲಿ ಎರಡು ವಿಧ.:** ೧) ಹ್ರಸ್ವಸ್ವರಗಳು ೨) ದೀರ್ಘಸ್ವರಗಳು

೧) ಹ್ರಸ್ವಸ್ವರ – ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲಾಗುವ (ಅ, ಇ, ಉ, ಋ, ಎ, ಒ.) ಅಕ್ಷರಗಳು ಹ್ರಸ್ವಸ್ವರಗಳು.

೨) ದೀರ್ಘಸ್ವರ – ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲಾಗುವ (ಆ, ಈ, ಊ, ಏ, ಐ, ಓ, ಔ) ಅಕ್ಷರಗಳು ದೀರ್ಘಸ್ವರಗಳು.

## ಇ. ವ್ಯಂಜನಾಕ್ಷರಗಳು

ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು ವ್ಯಂಜನಾಕ್ಷರಗಳು.

(ಉದಾ : ಕ್ + ಅ = ಕ ; ಚ್ + ಅ = ಚ) ಒಟ್ಟು ವ್ಯಂಜನಾಕ್ಷರಗಳು = ೩೪

**ವ್ಯಂಜನಾಕ್ಷರಗಳಲ್ಲಿ ಎರಡು ವಿಧ :**

೧) ವರ್ಗೀಯ ವ್ಯಂಜನಗಳು    ೨) ಅವರ್ಗೀಯ ವ್ಯಂಜನಗಳು

### ೧. ವರ್ಗೀಯ ವ್ಯಂಜನ ಕೋಷ್ಟಕ

| | | | | | | |
|---|---|---|---|---|---|---|
| **ಕ್ ವರ್ಗ** | ಕ್ | ಖ್ | ಗ್ | ಘ್ | ಙ್ | ೫ |
| **ಚ್ ವರ್ಗ** | ಚ್ | ಛ್ | ಜ್ | ಝ್ | ಞ್ | ೫ |
| **ಟ್ ವರ್ಗ** | ಟ್ | ಠ್ | ಡ್ | ಢ್ | ಣ್ | ೫ |
| **ತ್ ವರ್ಗ** | ತ್ | ಥ್ | ದ್ | ಧ್ | ನ್ | ೫ |
| **ಪ್ ವರ್ಗ** | ಪ್ | ಫ್ | ಬ್ | ಭ್ | ಮ್ | ೫ |
| | | | | | **ಒಟ್ಟು** | **೨೫** |

ಇವು ಉತ್ಪತ್ತಿಯಾಗುವ ಸ್ಥಾನಗಳಿಗೆ ಅನುಗುಣವಾಗಿ ವರ್ಗ ಮಾಡಿರುವುದರಿಂದ ವರ್ಗೀಯ ವ್ಯಂಜನಗಳು.

**ಅಲ್ಪಪ್ರಾಣಾಕ್ಷರಗಳು** = ಕಡಿಮೆ ಉಸಿರು ಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಅಲ್ಪಪ್ರಾಣಾಕ್ಷರಗಳು.

**ಉದಾ :** ಕ್, ಚ್, ಟ್, ತ್, ಪ್,
ಗ್, ಜ್, ಡ್, ದ್, ಬ್.

**ಮಹಾಪ್ರಾಣಾಕ್ಷರಗಳು** = ಹೆಚ್ಚು ಉಸಿರು ಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಮಹಾಪ್ರಾಣಾಕ್ಷರಗಳು.

**ಉದಾ :** ಖ್, ಛ್, ಠ್, ಥ್, ಫ್.
ಘ್, ಝ್, ಢ್, ಧ್, ಭ್.

**ಅನುನಾಸಿಕಾಕ್ಷರಗಳು** = ಮೂಗಿನ ಸಹಾಯದಿಂದ ಉಚ್ಚರಿಸಲಾಗುವ ವ್ಯಂಜನಗಳು ಅನುನಾಸಿಕಾಕ್ಷರಗಳು.

**ಉದಾ :** ಙ್, ಞ್, ಣ್, ನ್, ಮ್.

©KTBS Not to be republished

## ೨. ಅವರ್ಗೀಯ ವ್ಯಂಜನಗಳು

'ಯ್' ಕಾರದಿಂದ 'ಳ್' ಕಾರದವರೆಗಿನ ೯ ಅಕ್ಷರಗಳು ಅವರ್ಗೀಯ ವ್ಯಂಜನಗಳು.

**ಉದಾ :** ಯ್, ರ್, ಲ್, ವ್, ಶ್, ಷ್, ಸ್, ಹ್, ಳ್.

ಇವು ಉತ್ಪತ್ತಿಯಾಗುವ ಸ್ಥಾನಗಳು ಬೇರೆಬೇರೆಯಾಗಿರುವುದರಿಂದ, ಇವುಗಳನ್ನು ನಿರ್ದಿಷ್ಟವಾದ ವರ್ಗಗಳಲ್ಲಿ ಸೇರಿಸಿ ಹೇಳಲು ಬರುವುದಿಲ್ಲವಾದ್ದರಿಂದ ಇವನ್ನು ಅವರ್ಗೀಯ ವ್ಯಂಜನಗಳು ಎಂದು ಕರೆಯುವರು.

## ಈ. ಯೋಗವಾಹಗಳು

'ಯೋಗವಾಹ' ಎಂದರೆ 'ಜೊತೆಗೂಡಿ ಹೋಗು' ಎಂದರ್ಥ. ಇವು ಯಾವುದಾದರೂ ಒಂದು ಸ್ವರಾಕ್ಷರದ ಜೊತೆಗೆ ಕೂಡಿಕೊಂಡರೆ ಮಾತ್ರ ಉಚ್ಚರಿಸಲು ಸಾಧ್ಯವಾಗುತ್ತದೆ.

**ಯೋಗವಾಹಗಳಲ್ಲಿ ಎರಡು ವಿಧ:** ೧) ಅನುಸ್ವಾರ (ಂ) ೨) ವಿಸರ್ಗ (ಃ)

**ಉದಾ :** ಸಿಂಹ, ದುಃಖ

## ಭಾಷಾಭ್ಯಾಸ

## ಅ. ಬಿಟ್ಟ ಸ್ಥಳಗಳನ್ನು ಭರ್ತಿಮಾಡಿರಿ.

**ಕನ್ನಡ ವರ್ಣಮಾಲೆ**

**ಸ್ವರಾಕ್ಷರಗಳ ಸಂಖ್ಯೆ** | **ವ್ಯಂಜನಗಳ ಸಂಖ್ಯೆ** | **ಯೋಗವಾಹಗಳ ಸಂಖ್ಯೆ**

೧. ಹ್ರಸ್ವ ಸ್ವರಾಕ್ಷರಗಳು = ೬

೨. ದೀರ್ಘ ಸ್ವರಾಕ್ಷರಗಳು = ೭

©KTBS Not to be republished

## ಆ. ವ್ಯಂಜನಾಕ್ಷರಗಳ ಕೋಷ್ಟಕ ಪೂರ್ಣಗೊಳಿಸಿರಿ.

| ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ |
|---|---|---|---|---|
| ಕ್ | | | | ಙ್ |
| ಚ್ | | | | |
| ಟ್ | | ಡ್ | | |
| ತ್ | | | | |
| ಪ್ | ಫ್ | | | |

## ಇ. ಅವರ್ಗೀಯ ವ್ಯಂಜನಾಕ್ಷರಗಳ ಕೋಷ್ಟಕ ಪೂರ್ಣಗೊಳಿಸಿರಿ.

| | | | | | | | | |
|---|---|---|---|---|---|---|---|---|
| | ರ್ | | ವ್ | | ಸ್ | | ಳ್ |

©KTBS
Not to be republished

## ಈ. ಯೋಜನೆ

೧. ದಿನಪತ್ರಿಕೆಗಳಲ್ಲಿ ಬರುವ ನಾಲ್ಕು ಮಕ್ಕಳ ಕಥೆಗಳನ್ನು ಸಂಗ್ರಹಿಸಿ, ತೂಗುಪಟದಲ್ಲಿ ಅಂಟಿಸಿ.

## ಉ. ಓದಿಗೆ ಮನ್ನಣೆ

೧. ಗ್ರಂಥಾಲಯದಲ್ಲಿ ದೊರಕುವ ಪರಿಚಿತ ವಿಷಯಗಳ ಕುರಿತ ಕಥೆಗಳನ್ನು ಓದಿರಿ.

## ಊ. ಶುಭನುಡಿ

೧. ಸದ್ಗುಣಗಳಿರುವಲ್ಲಿ ಸದ್ಗತಿಯಿದೆ.
೨. ನಿಸ್ವಾರ್ಥ ಸೇವೆಗೆ ಅಗ್ರಪೂಜೆ.
೩. ಪರೋಪಕಾರವೇ ಪರಮ ಶ್ರೇಷ್ಠ ಗುಣ.


★★★★★

# ೨. ನದಿಯ ಅಳಲು

**ಸಮಿತಿ ರಚನೆ –**

Q3I7Z2

**ಪ್ರವೇಶ :** ನಾವು ಇಂದು ನೀರಿನ ಮೂಲಗಳಾದ ಕೆರೆ, ಬಾವಿ, ನದಿ ಮೊದಲಾದವುಗಳನ್ನು ಸರಿಯಾದ ರೀತಿಯಲ್ಲಿ ರಕ್ಷಿಸದೆ ಅವುಗಳನ್ನು ಕಲುಷಿತಗೊಳಿಸುತ್ತಿದ್ದೇವೆ. ಇದರಿಂದಾಗಿ ನಮ್ಮ ಬದುಕಿಗೆ ಸಂಚಕಾರ ಎದುರಾಗುತ್ತಿದೆ. ನಮ್ಮ ಸುತ್ತಲಿನ ನೀರಿನ ಮೂಲಗಳನ್ನು ಶುದ್ಧವಾಗಿಡುವುದು ಅತ್ಯಗತ್ಯ.



*[ಶಾಲಾ ಮಕ್ಕಳು ಗುಂಪುಗುಂಪಾಗಿ ಸೇರಿದ್ದಾರೆ. ಎಲ್ಲರ ಮುಖದಲ್ಲೂ ಆತಂಕ. ಆಸ್ಪತ್ರೆಯಲ್ಲಿ ದಾಖಲಾಗಿರುವ ಸಹಪಾಠಿಗಳ ಆರೋಗ್ಯವನ್ನು ತಿಳಿಯುವ ತವಕ. ಮಕ್ಕಳು ತಮ್ಮ ತಮ್ಮಲ್ಲಿಯೇ ಸಂಭಾಷಿಸುತ್ತಿದ್ದಾರೆ.]*

ಕಲಾವತಿ : ಎಂಥ ಅನಾಹುತ ನಡೆದುಹೋಯಿತು! ನಮ್ಮ ಗೆಳೆಯ ಗೆಳತಿಯರಿಗೆ ಹೀಗೆ ಆಗಬಾರದಿತ್ತು.

ಸ್ನೇಹ : ಅವರಿಗೆ ಏನಾಯಿತು?

ಮನು : ಅಯ್ಯೋ! ನಿನಗೆ ತಿಳಿದಿಲ್ಲವೆ? ಈಜಲು ಹೋದ ಅವರೆಲ್ಲರೂ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಶಾಂತಲೆ : ಆಸ್ಪತ್ರೆಗೆ ದಾಖಲಾಗಲು ಅವರಿಗೆ ಏನಾಗಿತ್ತು?

ಸಲೀಮುಲ್ಲಾ : ನಿನ್ನೆ ಭಾನುವಾರ ಶಾಲೆಗೆ ರಜೆ ಇತ್ತಲ್ಲವೇ? ಅವರೆಲ್ಲರೂ ಬೆಳಗ್ಗೆ ಆಟವಾಡಲು ಹೋಗಿದ್ದರು. ಮಧ್ಯಾಹ್ನದವರೆಗೂ ಆಟವಾಡಿ ಅನಂತರ ಸೆಕೆಯನ್ನು ತಾಳಲಾರದೆ ಊರಿನ ಪಕ್ಕದ ನದಿಯಲ್ಲಿ ಸ್ನಾನ ಮಾಡಿದರು.

ಪರಿಣಾಮವಾಗಿ ಅವರ ಮೈಮೇಲೆಲ್ಲಾ ದಪ್ಪ ದಪ್ಪ ಗುಳ್ಳೆಗಳು ಎದ್ದು ವಿಪರೀತ ತುರಿಕೆ ಪ್ರಾರಂಭವಾಯಿತು. ನೋವು ತಾಳಲಾರದೆ ದಂಡೆಯಲ್ಲಿ ಬಿದ್ದು ಹೊರಳಾಡಿದರು. ಯಾರೋ ದಾರಿಹೋಕರು ನರಳಾಟ ಕಂಡು ಅವರನ್ನು ಎತ್ತಿಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿದರು. ಅವರ ಆರೋಗ್ಯ ತೀರ ಹದಗೆಟ್ಟಿತ್ತು.

(ಮಕ್ಕಳು ಆಸ್ಪತ್ರೆಗೆ ಬರುತ್ತಾರೆ. ವೈದ್ಯರು ಪರೀಕ್ಷಾ ಕೊಠಡಿಯಿಂದ ಹೊರಬರುತ್ತಾರೆ.)

ದಿಲೀಪ್ : ನಮ್ಮ ಗೆಳೆಯರ ಸ್ಥಿತಿ ಹೇಗಿದೆ ಡಾಕ್ಟರ್?

ವೈದ್ಯರು : ಇನ್ನೂ ಏನನ್ನು ಹೇಳುವಂತಿಲ್ಲ ಮಕ್ಕಳೆ! ಆದರೆ ಚಿಂತೆಗೆ ಕಾರಣವಿಲ್ಲ ಅಂತ ತೋರುತ್ತದೆ.

ರಮ್ಯ : ಅವರಿಗೆ ಏನಾಗಿತ್ತು ಡಾಕ್ಟರ್?

ವೈದ್ಯರು : ಅವರಿಗೆ ನದಿಯ ನೀರಿನ ಮಾಲಿನ್ಯದ ಸೋಂಕು ತಗುಲಿದೆ. ಪರಿಣಾಮವಾಗಿ ಇಡೀ ದೇಹದಲ್ಲಿ ಗುಳ್ಳೆಗಳೆದ್ದಿವೆ. ತುರಿಕೆ ತಡೆಯಲಾರದೆ ಮೂರ್ಛೆ ಹೋಗಿದ್ದಾರೆ.

ದೀಪಕ್ : ಅವರ ಜೀವಕ್ಕೆ ಏನೂ ಅಪಾಯವಿಲ್ಲ ತಾನೆ?

ವೈದ್ಯರು : ಚಿಂತಿಸಬೇಡಿ ಮಕ್ಕಳೆ, ಸಕಾಲದಲ್ಲಿ ಆಸ್ಪತ್ರೆಗೆ ಬಂದ ಕಾರಣ ಸೂಕ್ತ ಚಿಕಿತ್ಸೆ ನೀಡಿದ್ದೇನೆ.

ರೀಟಾ : ನಾವು ಅವರನ್ನು ನೋಡಬಹುದೇ?

ವೈದ್ಯರು : ಈಗ ಬೇಡ ಮಕ್ಕಳೆ, ಸಂಜೆ ಬನ್ನಿ.

(ವೈದ್ಯರು ಹೇಳಿದ ಮಾತುಗಳನ್ನು ಕೇಳಿದ ಮಕ್ಕಳು ನದಿಯ ದಂಡೆಗೆ ಬರುತ್ತಾರೆ.)

ಭವಾನಿ : ಈ ನದಿಯ ನೀರು ಎಷ್ಟೊಂದು ಕೊಳಕಾಗಿದೆ?

ಮಮತ : ಅಬ್ಬಾ! ಈ ಕೆಟ್ಟ ನೀರಿಗೆ ಅವರೇಕೆ ಇಳಿದರು?

ಸುಜಾತ : ಸೆಕೆ ತಡೆಯಲು ಆಗಲಿಲ್ಲವೋ ಏನೊ!

ಅಮಿತ್ : ಇದು ಮಲಿನಗೊಂಡ ನದಿ. ಇಂತಹ ನದಿಗಳು ಜೀವಸಂಕುಲಕ್ಕೆ ಅಪಾಯಕಾರಿ.

©KTBS Not to be republished



(ಮಕ್ಕಳೆಲ್ಲರು ನದಿಯ ಬಗ್ಗೆ ತಾತ್ಸಾರವಾಗಿ ಮಾತನಾಡುತ್ತ ಹೀಯಾಳಿಸತೊಡಗುತ್ತಾರೆ. ಇದ್ದಕ್ಕಿದ್ದಂತೆ ಕೊಳೆ, ಕೆಸರಿನಿಂದ ಕೂಡಿದ ಜಲದೇವತೆ ನೀರಿನ ಮಧ್ಯದಿಂದ ಧುತ್ತನೆ ಪ್ರತ್ಯಕ್ಷಳಾಗುತ್ತಾಳೆ. ಮಕ್ಕಳೆಲ್ಲ ಭಯಪಡುತ್ತಾರೆ.)

ಮಕ್ಕಳು : ಯಾರಿವಳು? ಎಷ್ಟು ಅಸಹ್ಯವಾಗಿದ್ದಾಳೆ?

ಜಲದೇವತೆ : ನಾನು ಜಲದೇವತೆ ಮಕ್ಕಳೆ.

ಮಕ್ಕಳು : ಛೀ! ಛೀ! ಜಲದೇವತೆ ಹೀಗಿರುತ್ತಾಳೆಯೆ? ನಿನ್ನನ್ನು ನೋಡಿದರೆ ನಮಗೆ ಅಸಹ್ಯವಾಗುತ್ತದೆ.

ಜಲದೇವತೆ : ಏಕೆ? ನಾನು ನಿಮಗೇನು ಮಾಡಿರುವೆ? ನೀವೇಕೆ ಅಸಹ್ಯ ಪಟ್ಟುಕೊಳ್ಳುತ್ತಿದ್ದೀರಿ? ನನ್ನಿಂದ ನೀವು ಹಲವು ಪ್ರಯೋಜನ ಪಡೆದಿಲ್ಲವೆ?

ರೆಹಮಾನ್ : ಎಲ್ಲಾ ಸರಿ. ಆದರೆ ಈಗ ನೀನು ಕಲುಷಿತಗೊಂಡಿರುವೆ. ನಿನ್ನ ನೀರನ್ನು ಕುಡಿಯಬಾರದಂತೆ, ನಿನ್ನಲ್ಲಿ ಸ್ನಾನ ಮಾಡಬಾರದಂತೆ. ವೈದ್ಯರೇ ನಮಗೆ ಈ ವಿಚಾರ ತಿಳಿಸಿದ್ದಾರೆ. ಅಲ್ಲದೆ ನಮ್ಮ ಗೆಳೆಯ, ಗೆಳತಿಯರು ನಿನ್ನಲ್ಲಿ ಸ್ನಾನ ಮಾಡಿ ಅಸ್ವಸ್ಥರಾಗಿ ಆಸ್ಪತ್ರೆಗೆ ಸೇರಿದ್ದಾರೆ.

ಜಲದೇವತೆ : ಮಕ್ಕಳೇ, ಇದಕ್ಕೆಲ್ಲ ಕಾರಣ ನಾನಲ್ಲ ನೀವೆ!

ರಘು : ನಾವೆ?

ಜಲದೇವತೆ : ನೀವು ಅಂದ್ರೆ–ನಿಮ್ಮವರು.

ಮನೋಹರ : ನಮ್ಮವರೇನು ಶುದ್ಧಳಾಗಿ ಹರಿಯಬಾರದೆಂದು ತಾಕೀತು ಮಾಡಿದ್ದಾರೆಯೇ? ನಿನ್ನ ನೀರಿನಿಂದ ನಮಗೀಗ ಉಳಿಗಾಲವಿಲ್ಲ.

©KTBS Not to be republished

ಜಲದೇವತೆ : ಇಲ್ಲ ಮಕ್ಕಳೇ, ನೀವು ನನ್ನ ಬಗ್ಗೆ ತಪ್ಪು ತಿಳಿದಿದ್ದೀರಿ. ನನ್ನ ಮಾತುಗಳನ್ನು ಕೇಳಿ. ಪರಿಶುದ್ಧಳಾಗಿ ಹರಿಯುವ ನನ್ನನ್ನು ಕಲುಷಿತಗೊಳಿಸಿದವರು ಮನುಷ್ಯರೇ. ಬಹಳ ಹಿಂದಿನಿಂದ ಇತ್ತೀಚಿನವರೆಗೂ ಮಾಲಿನ್ಯರಹಿತಳಾಗಿ ಹರಿಯುತ್ತಿದ್ದೆ. ಆಗ ಈ ಮನುಷ್ಯರು ನನ್ನ ನೀರನ್ನು ಕುಡಿಯುತ್ತಿದ್ದರು. ಆಹಾರ ತಯಾರಿಕೆಗೆ ಬಳಸುತ್ತಿದ್ದರು, ಬೇಸಾಯಕ್ಕೆ ಉಪಯೋಗಿಸುತ್ತಿದ್ದರು. ನನ್ನಲ್ಲಿ ಲೆಕ್ಕವಿಲ್ಲದಷ್ಟು ಜಲಚರ ಜೀವಿಗಳಿದ್ದು ಎಲ್ಲವೂ ಸಂತೋಷದಿಂದ ಇದ್ದವು. ಆದರೆ ಈಗ ನಾನು ಪರಿಶುದ್ಧಳಾಗಿಲ್ಲ. ನನ್ನನ್ನು ಮನುಷ್ಯರು ಮನಬಂದಂತೆ ಬಳಸುತ್ತಿದ್ದಾರೆ. ಅನೇಕ ಕಾರ್ಖಾನೆಗಳನ್ನು ನನ್ನ ದಂಡೆಯಲ್ಲಿ ಸ್ಥಾಪಿಸಿ ಅದರಿಂದ ಹೊರಬರುವ ರಾಸಾಯನಿಕ ಪದಾರ್ಥಗಳನ್ನು ಮತ್ತು ಕಸದ ರಾಶಿಗಳನ್ನು ನನ್ನೊಳಕ್ಕೆ ಎಸೆಯುತ್ತಿದ್ದಾರೆ. ಊರಿನ ಸಮಗ್ರ ಕೊಳಚೆ ನೀರನ್ನು ನನ್ನೊಳಕ್ಕೆ ಹರಿಯಬಿಟ್ಟಿದ್ದಾರೆ. ಇಷ್ಟೆಲ್ಲಾ ಶೋಷಣೆಗೆ ಬಲಿಯಾದ ನಾನು ಹೇಗೆ ಪರಿಶುದ್ಧಳಾಗಿ ಹರಿಯಲು ಸಾಧ್ಯ? ನೀವೇ ಯೋಚಿಸಿ ಮಕ್ಕಳೇ.

ಮಕ್ಕಳು : ನೀನು ಹೇಳುತ್ತಿರುವುದಾದರೂ ಏನು?

ಜಲದೇವತೆ : ನಾನು ಹೇಳುವುದಿಷ್ಟೇ: ಮನುಷ್ಯರು ಹೀಗೆಯೇ ಮಾಲಿನ್ಯ ಮಾಡುವುದನ್ನು ಮುಂದುವರಿಸಿದ್ದಾದರೆ ನಾನು 'ವಿಷಕನ್ಯೆ' ಎಂಬ ಪಟ್ಟ ಧರಿಸುವ ಕಾಲ ದೂರವಿಲ್ಲ. ನಾನು ಯಾರ ಬಳಿ ನನ್ನ ನೋವನ್ನು ಹೇಳಿಕೊಳ್ಳಲಿ?

ಮಕ್ಕಳು : *(ಚಿಂತಾಕ್ರಾಂತರಾಗಿ)* ದೇವತೆಯೇ, ನೀನು ಮತ್ತೆ ಮೊದಲಿನಂತಾಗಲು ಸಾಧ್ಯವಿಲ್ಲವೇ?

ಜಲದೇವತೆ : ಇದೆ ಮಕ್ಕಳೆ, ನನ್ನ ಮೇಲಾಗುತ್ತಿರುವ ದೌರ್ಜನ್ಯ ಸಂಪೂರ್ಣವಾಗಿ ನಿಲ್ಲಬೇಕು. ಎಲ್ಲರೂ ನನ್ನನ್ನು ಶುದ್ಧಗೊಳಿಸಲು ಶ್ರಮಿಸಬೇಕು. ನನ್ನಲ್ಲಿ ಯಾವುದೇ ಬಗೆಯ ಮಲಿನ ವಸ್ತು ಸೇರದಂತೆ ನೋಡಿಕೊಂಡರೆ ಮೊದಲಿನಂತೆಯೇ ಪರಿಶುದ್ಧಳಾಗಿ ಹರಿಯಬಲ್ಲೆ. ಹಾಗಾದರೆ ಈಗ ಹೇಳಿ ಮಕ್ಕಳೇ, ನನಗಾಗಿ ನೀವೇನು ಮಾಡಬಲ್ಲಿರಿ?

ಮಕ್ಕಳೆಲ್ಲ : ತಾಯಿ ನಾವೆಲ್ಲರೂ ನಿನ್ನ ಮಾಲಿನ್ಯ ತಡೆಯಲು ಶ್ರಮಿಸುತ್ತೇವೆ. ಇಂದಿನಿಂದಲೇ ಪಣತೊಟ್ಟು ನಿನ್ನನ್ನು ಪರಿಶುದ್ಧವಾಗಿಡಲು ಪ್ರಯತ್ನಿಸುತ್ತೇವೆ.

ಜಲದೇವತೆ : ಧನ್ಯ ಮಕ್ಕಳೆ, ಧನ್ಯ. *(ಅಂತರ್ಧಾನಳಾಗುವಳು.)*

*(ಮಕ್ಕಳು ತಮ್ಮ ಹೆತ್ತವರ ಹಾಗೂ ಊರವರ ಸಹಕಾರದೊಂದಿಗೆ ನದಿಯನ್ನು ಶುಚಿಯಾಗಿಡುವ ಜವಾಬ್ದಾರಿಯನ್ನು ವಹಿಸಿಕೊಂಡರು.)*

©KTBS Not to be republished

**ಕ್ಷೇತ್ರ** : ಆಲಿಸುವುದು.

**ಸಾಮರ್ಥ್ಯ** : ಸಂವಾದ, ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.

## ಪದಗಳ ಅರ್ಥ

ಅಂತರ್ಧಾನ – ಕಣ್ಮರೆಯಾಗು, ಮಾಯವಾಗು.

ಅನಾಹುತ – ತೊಂದರೆ, ಅಪಾಯ.

ಆತಂಕ – ಭಯ, ತಳಮಳ.

ಕೊಳಕು – ಮಲಿನ, ಗಲೀಜು.

ಗುಳ್ಳೆ – ಬೊಬ್ಬೆ, ಬೊಕ್ಕೆ.

ಚಿಕಿತ್ಸೆ – ಆರೈಕೆ, ಶುಶ್ರೂಷೆ.

ಚಿಂತೆ – ಯೋಚನೆ, ದುಃಖ.

ಜಲಚರ – ನೀರಿನಲ್ಲಿ ವಾಸಿಸುವ ಜೀವಿಗಳು.

ತವಕ – ಆತುರ, ತರಾತುರಿ.

ತಾಕೀತು – ಕಟ್ಟಪ್ಪಣೆ, ಎಚ್ಚರಿಕೆ.

ತುರಿಕೆ – ನವೆ, ಕೆರೆತ.

ದೌರ್ಜನ್ಯ – ದಬ್ಬಾಳಿಕೆ, ಹಿಂಸೆ.

ಧುತ್ತನೆ – ಏಕಾಏಕಿ, ಇದ್ದಕ್ಕಿದ್ದಂತೆ.

ಪಣತೊಡು – ದೃಢನಿರ್ಧಾರ ಕೈಗೊಳ್ಳು, ಪ್ರತಿಜ್ಞೆ ಮಾಡು.

ಮಾಲಿನ್ಯ ರಹಿತ – ಮಲಿನತೆಯಿಲ್ಲದ, ಕೊಳೆಯಿಲ್ಲದ.

ಮೂರ್ಛೆ – ಪ್ರಜ್ಞೆತಪ್ಪು, ಎಚ್ಚರತಪ್ಪು.

ವಿಷಕನ್ಯೆ – ಇಡೀ ದೇಹ ವಿಷದಿಂದ ಕೂಡಿದವಳು.

ಸಂಕುಲ – ಸಮೂಹ, ಗುಂಪು.

ಸೋಂಕು – ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ರೋಗ.

ಶೋಷಣೆ – ತುಳಿತ, ಹಿಂಸೆ.

©KTBS Not to be republished

# ಅಭ್ಯಾಸ

## ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

೧. ಯಾರಿಗೆ ಮಾಲಿನ್ಯದ ಸೋಂಕು ತಗುಲಿತು?

೨. ಗೆಳೆಯ ಗೆಳತಿಯರು ಎಲ್ಲಿ ಸ್ನಾನ ಮಾಡಿದರು?

೩. ಸ್ನಾನ ಮಾಡಿದವರನ್ನು ಆಸ್ಪತ್ರೆಗೆ ಸೇರಿಸಿದವರು ಯಾರು?

೪. ನದಿ ಮಧ್ಯದಿಂದ ಯಾರು ಧುತ್ತನೆ ಪ್ರತ್ಯಕ್ಷಳಾದಳು?

೫. ಮಕ್ಕಳು ಯಾರ ಸಹಕಾರದೊಂದಿಗೆ ನದಿ ಸ್ವಚ್ಛತೆಯ ಜವಾಬ್ದಾರಿಯನ್ನು ವಹಿಸಿಕೊಂಡರು?

## ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ

೧. ಮಕ್ಕಳು ಏಕೆ ನದಿಯಲ್ಲಿ ಸ್ನಾನ ಮಾಡಿದರು?

೨. ಸ್ನಾನದ ಬಳಿಕ ಮಕ್ಕಳು ಸ್ಥಿತಿ ಏನಾಗಿತ್ತು ?

೩. ರೆಹಮಾನ್ ಜಲದೇವತೆಗೆ ಏನೆಂದು ಹೇಳಿದ?

೪. ನದಿ ಶುದ್ಧವಾಗಿ ಹರಿಯುವಂತಾಗಲು ಏನು ಮಾಡಬಹುದು?

೫. ಜಲದೇವತೆ, 'ನನಗಾಗಿ ನೀವೇನು ಮಾಡಬಲ್ಲಿರಿ?' ಎಂದು ನಿಮ್ಮ ಬಳಿ ಕೇಳಿದರೆ ನಿಮ್ಮ ಉತ್ತರವೇನು?

©KTBS Not to be republished

## ಇ. ಕೊಟ್ಟಿರುವ ಪದಗಳಲ್ಲಿ ಸರಿಯಾದ ಉತ್ತರ ಆಯ್ಕೆ ಮಾಡಿ ಬರೆಯಿರಿ.

೧. ಮಕ್ಕಳ ಮೈಮೇಲೆಲ್ಲಾ ದಪ್ಪದಪ್ಪ ಗುಳ್ಳೆಗಳು ಎದ್ದು __________ ಪ್ರಾರಂಭವಾಯಿತು.

(೧. ನೋವು  ೨. ತುರಿಕೆ  ೩. ಸಂತೋಷ  ೪. ಆಸಕ್ತಿ)

೨. ಮಕ್ಕಳು ಬೆಳಗ್ಗೆ __________ ಹೋಗಿದ್ದರು.

(೧. ಸ್ನಾನಮಾಡಲು  ೨. ಕೆಲಸಮಾಡಲು  ೩. ಆಟವಾಡಲು  ೪. ಚಿತ್ರಬರೆಯಲು)

೩. ಮಲಿನ ನದಿಯು ಮನುಷ್ಯರ ಜೀವಕ್ಕೆ __________

(೧. ಉಪಕಾರಿ  ೨. ಸಹಕಾರಿ  ೩. ಅಪಾಯಕಾರಿ  ೪. ಆರೋಗ್ಯಕಾರಿ)

೪. ನನ್ನ ಮೇಲಾಗುತ್ತಿರುವ ಮನುಷ್ಯರ __________ ಸಂಪೂರ್ಣವಾಗಿ ನಿಲ್ಲಬೇಕು.

(೧. ಸೌಜನ್ಯ  ೨. ಕಾರುಣ್ಯ  ೩. ಪ್ರೀತಿ  ೪. ದೌರ್ಜನ್ಯ)

## ವ್ಯಾಕರಣ ಮಾಹಿತಿ

### ಅ. ಸಂಯುಕ್ತಾಕ್ಷರಗಳು

**ವ್ಯಂಜನಕ್ಕೆ ವ್ಯಂಜನ ಸೇರಿಕೊಂಡು (ಸ್ವರದ ಸಹಾಯದಿಂದ) ಉಂಟಾಗುವ ಅಕ್ಷರಕ್ಕೆ ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯುವರು.**

**ಸಂಯುಕ್ತಾಕ್ಷರಗಳಲ್ಲಿ ಎರಡು ವಿಭಾಗಗಳಿವೆ.**

೧) ಸಜಾತೀಯ ಸಂಯುಕ್ತಾಕ್ಷರಗಳು  ೨) ವಿಜಾತೀಯ ಸಂಯುಕ್ತಾಕ್ಷರಗಳು

ಒಂದೇ ಜಾತಿಯ ಎರಡು ವ್ಯಂಜನಗಳು (ಸ್ವರದ ಸಹಾಯದಿಂದ) ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು.

**ಉದಾ :–** ಅ + ಕ್ = ಕ , ಅ + ಕ್ + ಕ್ + ಅ = ಅಕ್ಕ. ಇಲ್ಲಿ ಕ್ + ಕ್ (+ಅ) ಇವು ಸಜಾತೀಯ ವ್ಯಂಜನಗಳಾಗಿದ್ದು, ಇವು ಒಂದಕ್ಕೊಂದು ಕೂಡಿ 'ಕ್ಕ' ಎಂಬ ಸಜಾತೀಯ ಸಂಯುಕ್ತಾಕ್ಷರವಾಗಿದೆ.

**ಉದಾ :–** ಅಪ್ಪ, ಅಮ್ಮ, ಅಣ್ಣ, ಅಕ್ಕರ, ಅಕ್ಕಪಕ್ಕ, ರಕ್ಕಸ ಇತ್ಯಾದಿ.

ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು (ಸ್ವರದ ಸಹಾಯದಿಂದ) ಒಂದಕ್ಕೊಂದು ಕೂಡಿಕೊಂಡು ಉಂಟಾಗುವ ಅಕ್ಷರವು ವಿಜಾತೀಯ ಸಂಯುಕ್ತಾಕ್ಷರವೆನಿಸುವುದು.

©KTBS
Not to be republished

**ಉದಾ :** ಭ್ + ಅ + ಕ್ + ತ್ + ಅ = ಭಕ್ತ. ಇಲ್ಲಿ ಕ್ + ತ್ (+ ಅ).ಇವು ವಿಜಾತೀಯ ಸಂಯುಕ್ತಾಕ್ಷರ ವ್ಯಂಜನಗಳಾಗಿದ್ದು, ಇವೆರಡು ಕೂಡಿ 'ಕ್ತ' ಎಂಬ ವಿಜಾತೀಯ ಸಂಯುಕ್ತಾಕ್ಷರವಾಗಿದೆ.

**ಉದಾ :–** ಚಕ್ರ, ಆಜ್ಞೆ, ಸ್ತ್ರೀ, ವಸ್ತ್ರ ಇತ್ಯಾದಿ.

## ಭಾಷಾಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

೧. ಸಂಯುಕ್ತಾಕ್ಷರಗಳು ಎಂದರೇನು ?

೨. ಕೆಳಗೆ ಕೊಟ್ಟಿರುವ ಸಂಯುಕ್ತಾಕ್ಷರಗಳನ್ನು ಸಜಾತೀಯ, ವಿಜಾತೀಯ ಸಂಯುಕ್ತಾಕ್ಷರಗಳನ್ನಾಗಿ ವಿಂಗಡಿಸಿ ಬರೆಯಿರಿ.

| | | | | | | | | | |
|---|---|---|---|---|---|---|---|---|---|
| ಕ್ಕ | ಪ್ತ | ಸ್ವ | ರ್ರ | ಜ್ಜ | ಸ್ವ | ಸ್ಥ | ರ್ಯ | ಡ್ಗ | ಮ್ಮ |

೩. ಐದು ಸಜಾತೀಯ ಹಾಗೂ ಐದು ವಿಜಾತೀಯ ಸಂಯುಕ್ತಾಕ್ಷರಗಳನ್ನು ಹೊಂದಿರುವ ಶಬ್ದಗಳನ್ನು ಬರೆಯಿರಿ.

## ಆ. ಯೋಜನೆ

೧. ನದಿಗಳ ಮಾಲಿನ್ಯವನ್ನು ತಡೆಗಟ್ಟುವ ಅಂಶಗಳನ್ನು ಪಟ್ಟಿಮಾಡಿ ಬರೆಯಿರಿ.

## ಇ. ಓದಿಗೆ ಮನ್ನಣೆ

೧. ನದಿಗಳ ಮಾಲಿನ್ಯ ಯಾವ ಕಾರಣಗಳಿಂದಾಗುತ್ತದೆ ಎಂಬುದನ್ನು ಓದಿ ತಿಳಿಯಿರಿ ಹಾಗೂ ಹಿರಿಯರಿಂದ ಕೇಳಿ ತಿಳಿಯಿರಿ.

೨. ದಿನಪತ್ರಿಕೆಯಲ್ಲಿ ಬರುವ ನದಿಗಳ ಮಾಲಿನ್ಯ ಕುರಿತಾದ ಲೇಖನಗಳನ್ನು ಓದಿ ತಿಳಿಯಿರಿ ಹಾಗೂ ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿರಿ.

## ಈ. ಶುಭನುಡಿ

೧. ಮಾಲಿನ್ಯರಹಿತ ನದಿ ಮನುಕುಲದ ಭದ್ರತೆಗೆ ಬುನಾದಿ.

೨. ಅಶುದ್ಧ ನೀರು ಅನಾರೋಗ್ಯಕ್ಕೆ ಆಹ್ವಾನ.

೩. ನೀರಿನಿಂದ ಉಸಿರು ನೀರಿನಿಂದ ಹಸಿರು.

©KTBS Not to be republished

★★★★★

# ೩. ನಮ್ಮ ಮಾತು ಕೇಳಿ

H1M2M3

**ಸಮಿತಿ ರಚನೆ –**

**ಪ್ರವೇಶ :** ಎಲ್ಲ ಜೀವಿಗಳಿಗೂ ಬದುಕಲು ಸಮಾನ ಹಕ್ಕಿದೆ. ಆದರೆ ಮನುಷ್ಯ ತನ್ನ ಸ್ವಾರ್ಥ ನಿಮಿತ್ತನಾಗಿ ಅದಕ್ಕೆ ಅವಕಾಶ ನೀಡುತ್ತಿಲ್ಲ. ಕೆಲವೊಮ್ಮೆ ಆತ ತನ್ನ ಶಾಂತಿ ನೆಮ್ಮದಿಗಳಿಗೆ ತಾನೇ ಅಡ್ಡಿಯಾಗುತ್ತಾನೆ. ಮನುಷ್ಯ ಮಾಡುತ್ತಿರುವ ಸಾಧುವಲ್ಲದ ಕಾರ್ಯಗಳನ್ನು ಪ್ರಾಣಿಗಳ ಮೂಲಕ ಹೇಳಿಸಿ, ಆ ಮೂಲಕ ಆತನನ್ನು ಯೋಚನೆಗೆ ಹಚ್ಚುವುದು ಇಲ್ಲಿನ ಆಶಯವಾಗಿದೆ.




ಒಂದಾನೊಂದು ಕಾಡು. ಅಲ್ಲಿ ಬಗೆಬಗೆಯ ಪ್ರಾಣಿಗಳು ವಾಸವಾಗಿದ್ದವು. ಆನೆಯು ಆ ಕಾಡಿನ ಅಧಿಪತಿಯಾಗಿತ್ತು. ಅದು ಆಗಾಗ ಸಭೆ ಕರೆದು ಅವುಗಳ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿತ್ತು. ಊರಿನಲ್ಲಿರುವ ಪ್ರಾಣಿಗಳೊಂದಿಗೂ ಸ್ನೇಹವನ್ನು ಬೆಳೆಸಿತ್ತು. ಅವುಗಳಿಗೂ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುತ್ತಿತ್ತು. ಉತ್ತಮ ನಾಯಕತ್ವ ಗುಣ ಹೊಂದಿರುವ ಆನೆಯು ಎಲ್ಲಾ ಪ್ರಾಣಿಗಳಿಂದಲೂ ಮೆಚ್ಚುಗೆಯನ್ನು ಗಳಿಸಿತ್ತು.

ಹೀಗೆಯೇ ಒಂದು ದಿನ ಸಭೆ ಕರೆದಿತ್ತು. ಎಲ್ಲ ಪ್ರಾಣಿಗಳು ಅಂದು ಮನುಷ್ಯರ ಮೇಲೆ ಬಹಳವಾಗಿ ದೂರು ಹೇಳುತ್ತಿದ್ದವು. ಮಾನವನಿಂದ ಆಗುತ್ತಿರುವ ತೊಂದರೆ ಹಾಗೂ ಪರಿಹಾರ ಕುರಿತು ಚರ್ಚಿಸಿದ್ದವು. ಮನುಷ್ಯನಿಗೆ ತಿಳಿಹೇಳಲು ಫಲಕದಲ್ಲಿ ವಿವರ ಬರೆದು ತರಲು ಆನೆಯು ಪ್ರಾಣಿಗಳಿಗೆ ಸೂಚನೆ ನೀಡಿತ್ತು. ಅದರಂತೆ ಪ್ರಾಣಿಗಳು ಈ ದಿನದ ಸಭೆಗೆ ಸಿದ್ಧವಾಗಿ ಬಂದಿದ್ದವು. ನಾಯಕನ ಸೂಚನೆಯಂತೆ ಅವುಗಳು ತಮ್ಮ ಫಲಕಗಳನ್ನು ಹಿಡಿದುಕೊಂಡು ಸಾಲಾಗಿ ನಿಂತಿದ್ದವು. ಆನೆಯು ಅವುಗಳನ್ನು ಒಂದೊಂದಾಗಿ ಓದುತ್ತಾ ಮುನ್ನಡೆಯಿತು.

“ನಮ್ಮನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತೀರಿ. ಕಡಿಮೆ ಆಹಾರ ನೀಡುತ್ತೀರಿ. ನಮ್ಮ ಸೇವೆ ಬೇಕು; ನಾವು ಮಾತ್ರ ಬೇಡ ಅಲ್ಲವೇ? ನಮ್ಮ ಸೇವೆಯನ್ನು ಮರೆಯದಿರಿ.”

“ದಯೆಯಿರಲಿ ಸಕಲ ಪ್ರಾಣಿಗಳಲ್ಲಿ.”








“ನಮ್ಮ ಬದುಕಿನ ಆಧಾರತಾಣ ಕಾಡು. ಅದನ್ನು ನಾಶ ಮಾಡುತ್ತಿದ್ದೀರಿ. ನಮಗೆ ತಿನ್ನಲು ಹುಲ್ಲಿಲ್ಲ. ಮಲಗಲು ಮರದ ನೆರಳಿಲ್ಲ. ಕಾಡು ನಿಮಗೂ ಬೇಕು. ನಮಗೂ ಬೇಕು.”

“ನಮ್ಮನ್ನು ಉಳಿಸಿರಿ, ನೀವೂ ಉಳಿಯಿರಿ.”

©KTBS Not to be republished

“ನೀರು ಅಮೂಲ್ಯ ಸಂಪತ್ತು. ಅದನ್ನು ಹಾಳು ಮಾಡುತ್ತಿದ್ದೀರಿ. ಕಸಕಡ್ಡಿ ಹಾಕಿ ಕಲ್ಮಷಗೊಳಿಸುತ್ತಿದ್ದೀರಿ. ನಮಗೆ ನೀರಿನಲ್ಲಿರಲು ಕಷ್ಟವಾಗುತ್ತಿದೆ. ನೀರು ನಮ್ಮೆಲ್ಲರ ಜೀವ.”


“ನೀರನ್ನು ದುರ್ಬಳಕೆ ಮಾಡಬೇಡಿ, ಕಲುಷಿತಗೊಳಿಸಬೇಡಿ.”







"ಎಲ್ಲವನ್ನೂ ನೀವೇ ತಿನ್ನುತ್ತೀರಿ. ತಿಂದು ಹೆಚ್ಚಾಗಿ ಹಾಳು ಮಾಡುತ್ತೀರಿ. ನಮ್ಮ ಹೊಟ್ಟೆ ಹಸಿವಿನ ಬಗ್ಗೆ ನೀವು ಗಮನಿಸುವುದಿಲ್ಲ.
ನಮಗೇನೂ ಉಳಿಸುವುದಿಲ್ಲ."
"ನೀವೂ ತಿನ್ನಿ, ನಮಗೂ ತಿನ್ನಲು ಬಿಡಿ."

"ನಾವೂ ನಡೆದಾಡಬೇಕು. ಓಡಾಡಬೇಕು. ನಮಗೂ ದಾರಿ ಬಿಡಿ. ಹಾದಿ ಬೀದಿಗಳಲ್ಲಿ ನೀವು ಮತ್ತು ನಿಮ್ಮ ವಾಹನಗಳೇ ತುಂಬಿವೆ. ಮೈಮೇಲೆ ಎಚ್ಚರವಿಲ್ಲದಂತೆ ಸಾಗುತ್ತೀರಿ. ಇತರರಿಗೂ ತೊಂದರೆ ಕೊಡುತ್ತೀರಿ."
"ಸರಿಯಾಗಿ ಚಲಿಸಿರಿ, ಚಲಿಸಲು ಬಿಡಿ."




©KTBS Not to be republished





"ನಮಗೂ ಶಾಂತಿ, ನೆಮ್ಮದಿ ಬೇಕು. ನೋವಿನಲ್ಲೂ, ನಲಿವಿನಲ್ಲೂ ಪಟಾಕಿ ಸಿಡಿಸುತ್ತೀರಿ. ನಮ್ಮನ್ನು ಓಡಿಸಲು ಮದ್ದು ಗುಂಡುಗಳನ್ನು ಹಾರಿಸುತ್ತೀರಿ. ನಮ್ಮ ಹೃದಯವೆ ಸಿಡಿದು ಹೋದಂತಾಗುತ್ತದೆ."
"ಮದ್ದು ಗುಂಡು ಸಿಡಿಸಬೇಡಿ, ಶಾಂತಿಯನ್ನು ಕೆಡಿಸಬೇಡಿ."

"ನಿಮ್ಮನ್ನು ಮೆಚ್ಚಿಸಲು ನಮಗೂ ಮನಸ್ಸಿದೆ. ನೀವು ಟಿ.ವಿ. ನೋಡುತ್ತೀರಿ, ಇಲ್ಲವೆ ಮೊಬೈಲನ್ನು ಮುದ್ದಿಸುತ್ತೀರಿ. ಆದರೆ ನಿಮ್ಮ ಪಕ್ಕದಲ್ಲೇ ಇರುವ ನಮ್ಮನ್ನು ಕಣ್ಣೆತ್ತಿ ನೋಡುವುದಿಲ್ಲ. ಈ ಉಪೇಕ್ಷೆ ಬೇಡ."

"ನಾವೂ ನಿಮ್ಮೊಂದಿಗಿದ್ದೇವೆ, ನಮ್ಮನ್ನೂ ಮುದ್ದಿಸಿರಿ."




"ನಾವು ರೈತನಿಗೂ ನಿಮಗೂ ಮಿತ್ರರು. ಬೇಗ ಬೆಳೆ ತೆಗೆಯಲು ವಿಷದ ಗೊಬ್ಬರ ಹಾಕುತ್ತೀರಿ. ತರತರದ ಔಷಧ ಚುಮುಕಿಸುತ್ತೀರಿ. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ನಮ್ಮನ್ನು ಮತ್ತು ಅನ್ನ ನೀಡುವ ಮಣ್ಣನ್ನು ಏಕೆ ಸಾಯಿಸುತ್ತೀರಿ?"

"ರಕ್ಷಕರಾಗಿರಿ, ರಾಕ್ಷಸರಾಗದಿರಿ."

©KTBS Not to be republished

ಎಲ್ಲವನ್ನು ಓದಿದ ಆನೆ, ಎಲ್ಲರಿಗೂ **ಶಹಬ್ಬಾಸ್** ಎಂದಿತು. ಚೆನ್ನಾಗಿ ಬರೆದಿದ್ದೀರಿ. ಸ್ವಲ್ಪ ಖಾರವಾಯಿತಲ್ಲವೆ? ಎಲ್ಲ ಮನುಷ್ಯರು ಕೆಟ್ಟವರಲ್ಲ; ಎಲ್ಲರ ಕುರಿತಾಗಿಯೂ ಈ ರೀತಿಯ ಆಕ್ರೋಶ ಸಲ್ಲದು. ಇರಲಿ. ಇವುಗಳನ್ನು ಇನ್ನೊಮ್ಮೆ ಪರಿಶೀಲಿಸಿ ಚರ್ಚಿಸೋಣ. ಫಲಕಗಳನ್ನು ಕಾಡಿನ ಅಂಚಿನ ರಸ್ತೆಯ ಬದಿಯಲ್ಲಿ ಪ್ರದರ್ಶಿಸೋಣ. ಬನ್ನಿರಿ, ಎಲ್ಲರೂ ಮೊದಲು ಊಟಮಾಡೋಣ. ಭೋಜನ ಶಾಲೆಗೆ ನಡೆಯಿರಿ. ಎಂದು ಹೇಳಿದ ಅಧಿಪತಿಯು ಆ ಕಡೆಗೆ ಹೆಜ್ಜೆ ಹಾಕಿತು.

**ಕ್ಷೇತ್ರ** : ಓದುವುದು

**ಸಾಮರ್ಥ್ಯ** : ಚಿತ್ರಕಥೆ, ಭಿತ್ತಿಪತ್ರಗಳನ್ನು ಓದುವುದು.

## ಪದಗಳ ಅರ್ಥ

| | | |
|---|---|---|
| ಅಂಚು | – | ಪಕ್ಕ, ಮೇಲೆ. |
| ಅಧಿಪತಿ | – | ಒಡೆಯ, ನಾಯಕ. |
| ಅವಕಾಶ | – | ಸಂದರ್ಭ, ಎಡೆ. |
| ಆಕ್ರೋಶ | – | ಗರ್ಜನೆ, ಕೋಪಿಸುವಿಕೆ. |
| ಉಪೇಕ್ಷೆ | – | ಅಲಕ್ಷ್ಯ ಕಡೆಗಣಿಸುವಿಕೆ. |
| ಕಾಡು | – | ಅರಣ್ಯ, ಅಡವಿ. |
| ಕ್ಷೇಮಸಮಾಚಾರ | – | ಕುಶಲ, ಆರೋಗ್ಯ ಕುರಿತಾದ ವಿಷಯ. |
| ಖಾರ | – | ತೀಕ್ಷ್ಣ, ಕಟು |
| ಗಳಿಸು | – | ಸಂಪಾದಿಸು, ಪಡೆ. |
| ಚರ್ಚೆ | – | ವಾಗ್ವಾದ, ತರ್ಕ. |
| ತಾಣ | – | ಸ್ಥಾನ, ಸ್ಥಳ. |
| ದೂರು | – | ನಿಂದಿಸು, ಆಪಾದನೆ. |
| ನಾಯಕತ್ವ ಗುಣ | – | ಆಲೋಚಿಸಿ ಜವಾಬ್ದಾರಿಯನ್ನು ನಿರ್ವಹಿಸುವ ಮನೋಭಾವ. |
| ಪಟಾಕಿ | – | ಉತ್ಸವಾದಿಗಳಲ್ಲಿ ಹಾರಿಸುವ ಸಣ್ಣ ಸಿಡಿಮದ್ದು. |
| ಪರಿಶೀಲಿಸು | – | ಸೂಕ್ಷ್ಮವಾಗಿ ವಿಚಾರಿಸಿ ನೋಡುವುದು. |
| ಪ್ರದರ್ಶಿಸು | – | ಕಾಣುವಂತೆ ಮಾಡು, ಗಮನಿಸುವಂತೆ ತೋರಿಸು. |
| ಫಲಕ | – | ವಿವರ ಬರೆದು ಹಾಕುವ ಹಲಗೆ. |
| ಫಲವತ್ತತೆ | – | ಫಲವುಳ್ಳ, ಸಾರವತ್ತಾದ. |
| ಮದ್ದು | – | ಬಂದೂಕು, ಕೋವಿಗಳಲ್ಲಿ ತುಂಬುವ ಸ್ಫೋಟಕ ಪುಡಿ. |
| ಮುದ್ದಿಸು | – | ಪ್ರೀತಿಸು, ಮುದ್ದಾಡು. |
| ಮುನ್ನಡೆ | – | ಏಳಿಗೆ, ಪ್ರಗತಿ. |
| ಮೆಚ್ಚುಗೆ | – | ತೃಪ್ತಿ, ಪ್ರಶಂಸೆ. |
| ರಾಕ್ಷಸ | – | ದಾನವ, ದುಷ್ಟಶಕ್ತಿ. |
| ವಿಷದ ಗೊಬ್ಬರ | – | ರಾಸಾಯನಿಕ ವಸ್ತುಗಳನ್ನೊಳಗೊಂಡ ಗೊಬ್ಬರ. |
| ಸಿಡಿದುಹೋಗು | – | ಚಿಮ್ಮು, ಸ್ಫೋಟಗೊಳ್ಳು. |

©KTBS Not to be republished

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕಾಡಿನ ಅಧಿಪತಿ ಯಾರು?

೨. ಆನೆಯು ಯಾವುದರಲ್ಲಿ ವಿವರ ಬರೆದು ತರಲು ಸೂಚನೆ ನೀಡಿತ್ತು?

೩. 'ಮನುಷ್ಯರು ಕಡಿಮೆ ಆಹಾರ ನೀಡುತ್ತಾರೆ' ಎಂದು ದೂರು ಬರೆದವರು ಯಾರು?

೪. 'ಕಾಡು ನಿಮಗೂ ಬೇಕು' ಎಂದು ಎಚ್ಚರಿಸಿದವರು ಯಾರು?

೫. 'ಮದ್ದು ಗುಂಡುಗಳನ್ನು ಸಿಡಿಸಬೇಡಿ' ಎಂದು ಹೇಳಿದವರು ಯಾರು?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಎತ್ತು ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?

೨. ಜಿಂಕೆ ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?

೩. ಆಮೆ ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?

೪. ಕರಡಿ ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?

೫. ನಾಯಿ ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?

©KTBS Not to be republished

### ಇ. ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿ ಮಾಡಿರಿ.

೧. ಆನೆಯು ಎಲ್ಲ ಪ್ರಾಣಿಗಳಿಂದಲೂ________________ ಯನ್ನು ಗಳಿಸಿತ್ತು.

೨. ಪ್ರಾಣಿಗಳು ಈ ದಿನದ ________________ ಸಿದ್ಧವಾಗಿ ಬಂದಿದ್ದವು.

೩. ಎಲ್ಲರ ಕುರಿತಾಗಿಯೂ ಈ ರೀತಿಯ________________ಸಲ್ಲದು.

೪. ಇವುಗಳನ್ನು ಇನ್ನೊಮ್ಮೆ________________ ಚರ್ಚಿಸೋಣ.

೫. ನಮ್ಮನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತೀರಿ ಎಂದು __________ ಹೇಳಿತು.

## ವ್ಯಾಕರಣ ಮಾಹಿತಿ

### ವಚನಗಳು

**ಆನೆಯು ಎಲ್ಲರ ಮೆಚ್ಚುಗೆಯನ್ನು ಗಳಿಸಿತ್ತು.**
**ಕಾಡಿನಲ್ಲಿ ವಿವಿಧ ರೀತಿಯ ಪ್ರಾಣಿಗಳು ವಾಸವಾಗಿದ್ದವು.**

ಮೇಲಿನ ವಾಕ್ಯಗಳನ್ನು ಓದಿ. ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ.
'ಆನೆ' ಎಂಬುದು 'ಒಂದು ಆನೆ' ಎಂಬುದನ್ನು ಸೂಚಿಸುತ್ತದೆ. 'ಪ್ರಾಣಿಗಳು' ಎಂಬುದು 'ಒಂದಕ್ಕಿಂತ ಹೆಚ್ಚು' ಎಂಬುದನ್ನು ಸೂಚಿಸುತ್ತದೆ.

**ಜಿಂಕೆಯು ಈ ದಿನದ ಸಭೆಗೆ ಸಿದ್ಧವಾಗಿ ಬಂದಿತ್ತು.**
**ಬೆಕ್ಕುಗಳು ಸಭೆಯಲ್ಲಿ ಭಾಗವಹಿಸಿದ್ದವು.**

ಮೇಲಿನ ವಾಕ್ಯಗಳನ್ನು ಓದಿ ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. 'ಜಿಂಕೆ' ಎಂಬುದು 'ಒಂದು' ಎಂಬುದನ್ನು ಸೂಚಿಸುತ್ತದೆ. ಇದು ಏಕವಚನ. 'ಬೆಕ್ಕುಗಳು' ಎಂಬುದು 'ಒಂದಕ್ಕಿಂತ ಹೆಚ್ಚು' ಎಂಬುದನ್ನು ಸೂಚಿಸುತ್ತದೆ. ಇದು ಬಹುವಚನ.

**ಏಕವಚನ ಮತ್ತು ಬಹುವಚನಗಳಿಗೆ ಇನ್ನೂ ಕೆಲವು ಉದಾಹರಣೆಗಳು:**

| ಏಕವಚನ | ಬಹುವಚನ |
|---|---|
| ಪತ್ರ | ಪತ್ರಗಳು |
| ನಾಯಕ | ನಾಯಕರು |
| ತಮ್ಮ | ತಮ್ಮಂದಿರು |
| ರೈತ | ರೈತರು |

©KTBS Not to be republished

## ಭಾಷಾಭ್ಯಾಸ

### ಅ. ವಚನ ಬದಲಿಸಿ ಬರೆಯಿರಿ.

೧. ಎತ್ತು : ____________
೨. ನಾಯಕ : ____________
೩. ಅಣ್ಣಂದಿರು : ____________
೪. ಪತ್ರಿಕೆಗಳು : ____________
೫. ಪತ್ರಗಳು : ____________

೬. ಮಿತ್ರರು : ______________

೭. ಅದು : ______________

೮. ನೀವು : ______________

## ಆ. ಯೋಜನೆ

೧. ವಿವಿಧ ಭಿತ್ತಿಪತ್ರಗಳನ್ನು ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಿರಿ.

೨. ಮಿಂಚುಪಟ್ಟಿಯಲ್ಲಿ ಏಕವಚನ-ಬಹುವಚನ ಪದಗಳನ್ನು ಬರೆಯಿರಿ.

## ಇ. ಓದಿಗೆ ಮನ್ನಣೆ

೧. ವಿವಿಧ ಪ್ರಾಣಿಗಳ ಜೀವನ ಕ್ರಮದ ಬಗ್ಗೆ ಓದಿ ತಿಳಿಯಿರಿ.

೨. ಪತ್ರಿಕೆಗಳಲ್ಲಿ ಬರುವ ವಾಚಕರ ಸಲಹೆಗಳನ್ನು ಓದಿರಿ.

೩. ಚಿತ್ರಕಥೆ, ಭಿತ್ತಿಪತ್ರಗಳನ್ನು ಗೆಳೆಯರೊಂದಿಗೆ ಓದಿ ನಲಿಯಿರಿ.

## ಈ. ಶುಭನುಡಿ

೧. ಇತರರ ಮಾತುಗಳಿಗೂ ಮನ್ನಣೆ ಕೊಡಿರಿ.

೨. ಸಂಪನ್ಮೂಲಗಳನ್ನು ಅಗತ್ಯವಿದ್ದಷ್ಟು ಮಾತ್ರ ಬಳಸಿರಿ.

೩. ವನಗಳನ್ನು ಬೆಳೆಸಿರಿ, ವನ್ಯ ಜೀವಿಗಳನ್ನು ಉಳಿಸಿರಿ.

©KTBS Not to be republished

★★★★★

# ೪. ಜೀವದ ಮೌಲ್ಯ

**ಕಾನ್‌ಸ್ಟನ್ಸ್ ಜೆ ಫಾಸ್ಟರ್ –**

E1P7B6

**ಪ್ರವೇಶ :** ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ನಾವು ಬದುಕಬೇಕು. ಬದುಕುವುದಕ್ಕೂ ಬಿಡಬೇಕು. ಜಗತ್ತಿನಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ವಿಶೇಷತೆ ಹಾಗೂ ಅನನ್ಯತೆ ಇದ್ದೇ ಇರುತ್ತದೆ. ಅಂಗವೈಕಲ್ಯ ಎಂಬುದು ಶಾಪವಲ್ಲ. ಅದನ್ನು ಮೀರಿ ಸಾಧನೆ ಮಾಡಬಹುದು. ತಮ್ಮ ನ್ಯೂನತೆಯನ್ನು ಮರೆತು ಯಾವ ಕ್ಷೇತ್ರದಲ್ಲಿ ತಮ್ಮ ಸಾಮರ್ಥ್ಯವಿದೆ ಎಂಬುದನ್ನು ಅರಿತುಕೊಂಡು ಸಾಧನೆ ಮಾಡಬೇಕು.

"ಒಬ್ಬ ವ್ಯಕ್ತಿಗೆ ಗುಣವಾಗದ ಕಾಯಿಲೆ ಇದ್ದರೆ ಆತನನ್ನು ಬದುಕಿಸಿ ಉಳಿಸಿ ಸಾಧಿಸುವುದೇನಿದೆ? ಹಾಗೆ ಆತನಿಗೆ ವೈದ್ಯಕೀಯ ಉಪಚಾರ ಮಾಡುತ್ತ ಬದುಕಿಸುವುದು ಶುದ್ಧ ಅವಿವೇಕ" – ಎಂಬುದು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ ತರುಣ ಡಾಕ್ಟರ್ ತೇಡ್ಡಿಯಸ್ ಮಾರ್ಲಿನನ ನಿಶ್ಚಿತ ಅಭಿಪ್ರಾಯವಾಗಿತ್ತು. "ಹಾಗೆ ವಾಸಿಯಾಗದ ಕಾಯಿಲೆಗಳಿಂದ ನರಳುವ ರೋಗಿಗಳಿಗೆ ಮತ್ತು ಅತಿಯಾದ ನೋವು–ನರಳುವಿಕೆ ಅನುಭವಿಸುವ ರೋಗಿಗಳಿಗೆ ಸುಖ ಮರಣ ಉಂಟಾಗುವಂತೆ ಮಾಡುವುದೇ ಲೇಸು"– ಎಂದು ಅವನು ತನ್ನ ತರಗತಿಯ ಇತರ ವಿದ್ಯಾರ್ಥಿಗಳೊಡನೆ ವಾದಿಸುತ್ತಿದ್ದನು.

"ಆದರೆ ನಾವು ಇಲ್ಲಿರುವುದು ಅಂಗಹೀನರಾದ ಹತಭಾಗ್ಯರ ಆರೈಕೆಗಾಗಿ!" – ಎಂದು ಅವರು ಪ್ರತಿಭಟಿಸುತ್ತಿದ್ದರು.

"ಡಾಕ್ಟರರು ಇರುವುದು ರೋಗಿಗಳನ್ನು ಆರೋಗ್ಯವಂತರನ್ನಾಗಿ ಮಾಡಲಿಕ್ಕೇ. ನಿಜ, ಒಪ್ಪುತ್ತೇನೆ. ಆದರೆ, ಯಾವುದೂ ಅವರನ್ನು ಗುಣಪಡಿಸುವಂತಿಲ್ಲವಾದರೆ ಅವರು ನರಳುವುದಕ್ಕಿಂತ ಸಾಯುವುದೇ ಲೇಸು!" ಎಂದು ಮಾರ್ಲಿನನು ಛಲದಿಂದ ನುಡಿಯುತ್ತಿದ್ದನು.

ಮಾರ್ಲಿನನ ವ್ಯಾಸಂಗದ ಕೊನೆಯ ವರ್ಷವಾಗಿತ್ತು. ಅದೊಂದು ರಾತ್ರೆ ಮಾರ್ಲಿನನು ಆಸ್ಪತ್ರೆಯ ಕೆಲಸದಲ್ಲಿದ್ದನು. ನಗರದ ಒಂದು ಕೊಳಕು ಭಾಗದಿಂದ ಒಂದು ಪ್ರಸವಕ್ಕಾಗಿ ಕರೆ ಬಂತು. ಮಾರ್ಲಿನನು ಕೂಡಲೇ ಹೋಗಿ, ಜರ್ಮನಿಯಿಂದ ವಲಸೆ ಬಂದ ಓರ್ವ ಹೆಂಗಸಿನ ಪ್ರಸವದಲ್ಲಿ ನೆರವಾದನು. ಅದು ಅವಳ ಹತ್ತನೆಯ ಮಗುವಾಗಿತ್ತು. ಒಂದು ಕಾಲಿಗಿಂತ ಇನ್ನೊಂದು ಕಾಲು ಗಿಡ್ಡವಾಗಿ ಆ ಮಗು ಹುಟ್ಟಿತ್ತು. ಡಾಕ್ಟರನ ಅಭ್ಯಾಸದಂತೆ, ಅವನು ಆ ಮಗುವು ಉಸಿರಾಡುವಂತೆ ಮಾಡಲು ಅದರ ಬಾಯಿಯೊಳಗೆ ಊದಿದನು. ಆದರೆ, ಮರುಕ್ಷಣವೇ ಅವನಿಗನಿಸಿತು: "ಏನು ದುರಂತವೀ ಶಿಶು! ಅದು ಬೆಳೆದಾಗ ಜೀವನವಿಡೀ ಕುಂಟು ಕಾಲಿನಲ್ಲೇ ನಡೆಯಬೇಕು. ಇತರ ಮಕ್ಕಳು ಅಣಕಿಸಿ ಗೇಲಿ ಮಾಡುವರು. ಈ ಮಗು ಜೀವಿಸುವಂತೆ ಮಾಡುವುದೇಕೆ? ಇದು ಸತ್ತರೆ ಜಗತ್ತಿಗೆ ಏನು ನಷ್ಟ!"

ಆದರೆ ಅವನು ಹೇಳಿಕೇಳಿ ವೈದ್ಯ. ಮಗುವನ್ನು ಹುಟ್ಟಿನಲ್ಲೇ ಸಾಯಿಸುವ ಯೋಚನೆ ಬಂದರೂ ಆತನ ವೈದ್ಯ ಬುದ್ಧಿ ಜಾಗ್ರತವಾಗಿತ್ತು. ಬೆನ್ನು–ಹೊಟ್ಟೆಗಳ ಭಾಗಕ್ಕೆ ನಯವಾಗಿ ಬಡಿದು

©KTBS Not to be republished

ಆತ ಆ ಮಗುವಿನ ಉಸಿರಾಟದ ಪ್ರಕ್ರಿಯೆ ಪ್ರಾರಂಭವಾಗುವಂತೆ ಮಾಡಿದನು. ಕೊನೆಗೆ ಅವನು ನಿರೀಕ್ಷಿಸುತ್ತಿದ್ದ ಉಸಿರೆಳೆಯು ಬಂತು. ಮಗುವಿನ ಮುಖವು ಕೆಂಪಗಾಯಿತು. ಮಗು ಹುಟ್ಟಿದ ಮೇಲೆ ಪ್ರತಿಯೊಬ್ಬರೂ ನಿರೀಕ್ಷಿಸುವ ಆ ಮೊದಲ ಅಳು – ಅದು ಕೊನೆಗೂ ಮಗುವಿನಿಂದ ಹೊರಟಿತು. ತೇಡ್ಡಿಯಸ್‌ಗೆ ನೆಮ್ಮದಿಯಾಯಿತು.

ಆತ ತನ್ನ ಉಪಕರಣಗಳನ್ನು ಚೀಲದೊಳಗೆ ತುಂಬಿ, ನಗರದ ಕಡೆಗೆ ಹೊರಟುಹೋದನು. ತಾನು ಮಾಡಿದ ಕೆಲಸಕ್ಕಾಗಿ ಅವನು ಬಹಳ ಅಸಮಾಧಾನಪಟ್ಟಿದ್ದನು. “ನಾನೇಕೆ ಹಾಗೆ ಮಾಡಿದೆನೆಂದು ನನಗೇ ತಿಳಿಯದು, ದಾರಿದ್ರ್ಯ ತುಂಬಿದ ಆ ಮನೆಯಲ್ಲಿ, ಈ ಮೊದಲೇ, ಬೇಕಾದುದಕ್ಕಿಂತ ಹೆಚ್ಚು ಮಕ್ಕಳಿರುವರು. ನ್ಯೂನತೆಯುಳ್ಳ ಇದನ್ನು ನಾನೇಕೆ ಬದುಕಿಸಿದೆ? ಇಂಥ ಕುಂಟರಿಲ್ಲದಿದ್ದರೆ ಜಗತ್ತು ಉತ್ತಮವಾಗದೇ?” ಎಂದು ಅವನು ತನ್ನೊಳಗೇ ಗೊಣಗುತ್ತಿದ್ದನು.

ವರುಷಗಳು ಉರುಳಿದುವು. ಡಾಕ್ಟರ್ ಮಾರ್ಲಿನನು, ಒಂದು ಕೈಗಾರಿಕಾ ನಗರಕ್ಕೆ ಹೋಗಿ ತನ್ನ ವೃತ್ತಿ ಸ್ಥಾಪಿಸಿದ್ದನು. ಚೆನ್ನಾಗಿ ಸಂಪಾದನೆಯಾಗುತ್ತಿತ್ತು. ತಾರುಣ್ಯದಲ್ಲಿದ್ದ ಆ ಸುಧಾರಣಾ ಭಾವವು ಅವನನ್ನು ಬಿಟ್ಟುಹೋಗಿತ್ತು. ಜನರನ್ನು ಜೀವಂತರನ್ನಾಗಿ ಉಳಿಸಲು ಹಠಹಿಡಿದು ಶ್ರಮಿಸುವ, ವಿರಾಮವಿಲ್ಲದೆ ದುಡಿವ ಡಾಕ್ಟರರಲ್ಲಿ ಅವನೂ ಒಬ್ಬನಾಗಿದ್ದನು.

ಡಾಕ್ಟರ್ ಮಾರ್ಲಿನನೀಗ ತಕ್ಕಷ್ಟು ವೃದ್ಧನಾಗಿದ್ದನು. ಅವನಿಗೂ ಅವನ ಪಾಲಿನ ಕಷ್ಟಗಳಿದ್ದುವು. ಅವನ ಒಬ್ಬನೇ ಮಗ ಮತ್ತು ಆ ಮಗನ ಹೆಂಡತಿ, ಒಂದು ಮೋಟಾರು ಅವಘಡದಲ್ಲಿ ಸತ್ತಿದ್ದರು. ಅವರ ಚಿಕ್ಕ ಮಗಳ ಆರೈಕೆಯನ್ನು ಅವನೇ ನೋಡಿಕೊಂಡಿದ್ದನು. ಮಾರ್ಲಿನನು ತನ್ನ ಮೊಮ್ಮಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದನು.

ಒಂದು ದಿನ, ಅವಳ ('ಬಾರ್ಬರಾ' ಎಂದಾಕೆಯ ಹೆಸರು) ಹತ್ತನೆಯ ವರ್ಷದ ಬೇಸಗೆಯ ದಿನ, ಅವಳು ಏಳುವಾಗಲೇ ಕುತ್ತಿಗೆಯ ಸೆಳೆತ ಮತ್ತು ಕೈಕಾಲುಗಳ ನೋವಿನಿಂದ ನರಳುತ್ತಿದ್ದಳು.

ಮೊದಲು ಅದು 'ಪೋಲಿಯೋ' ಎಂದು ಪರಿಗಣಿಸಲ್ಪಟ್ಟಿತು. ಆದರೆ ಕ್ರಮೇಣ, ಅದು ಅಪರೂಪವಾಗಿ ಉಂಟಾಗುವ ಒಂದು ವಿಷಮ ಅಂಟುರೋಗವೆಂದು ತಿಳಿದುಬಂತು. ಡಾಕ್ಟರ್ ಮಾರ್ಲಿನನು, ತನ್ನ ದೀರ್ಘಕಾಲದ ವೃತ್ತಿಯಲ್ಲಿ ಇಂತಹ ರೋಗಸ್ಥಿತಿಯನ್ನು ಒಮ್ಮೆಯಾದರೂ ಕಂಡಿರಲಿಲ್ಲ. ಅವನು ನರಸಂಬಂಧವಾದ ರೋಗಚಿಕಿತ್ಸಕರನ್ನು ಕರೆಸಿದನು. ಅವರು, ನಿರಾಶೆಯಾಗುವಂತೆ ತಲೆಯಲ್ಲಾಡಿಸಿದರು. ಆ ಕಾಯಿಲೆಗೆ ಯಾವ ಮದ್ದೂ ಇಲ್ಲವೆಂದೂ ಅದು ನಿಧಾನವಾಗಿ ಹೆಚ್ಚುತ್ತಹೋಗಿ ಕೊನೆಗೆ ದೊಡ್ಡ ಪ್ರಮಾಣದ ಪಾರ್ಶ್ವವಾಯುವಾಗಿ ಪರಿಣಮಿಸುವುದೆಂದೂ ತಿಳಿಸಿದರು.

ಬಂದ ಪ್ರವೀಣರಲ್ಲಿ ಒಬ್ಬನು ಹೇಳಿದನು: "ಒಬ್ಬ ತರುಣ ಡಾಕ್ಟರನಿದ್ದಾನೆ. ಅವನು ಇಂಥ ಒಂದಷ್ಟು ಪ್ರಕರಣಗಳನ್ನು ನೋಡಿದ್ದಾನೆ, ಔಷಧಿಯನ್ನೂ ಕೊಟ್ಟಿದ್ದಾನೆ. ಆ ಕುರಿತು ಒಂದು ಲೇಖನವನ್ನೂ ಒಂದು ಪತ್ರಿಕೆಯಲ್ಲಿ ಬರೆದಿದ್ದಾನೆ. ಅವನ ಹೆಸರು ಟಿ. ಜೆ. ಮಿಲ್ಲರ್. ನಾನು ನಿನ್ನ ಸ್ಥಾನದಲ್ಲಿದ್ದರೆ ಅವನ ಸಹಾಯ ಪಡೆಯುತ್ತಿದ್ದೆ.”

ವಿವಿಧ ತರದ ಕುಂಟುತನದ ವ್ಯಾಧಿಗಳಿಗೆ ತುತ್ತಾದವರಿಗೆ ತನ್ನ ಹೊಸ ಹಾಗೂ ಕ್ರಾಂತಿಕಾರಕ ಚಿಕಿತ್ಸಾವಿಧಾನಗಳನ್ನು ಬಳಸುತ್ತಿದ್ದ ಡಾಕ್ಟರ್ ಮಿಲ್ಲರನ ಚಿಕ್ಕ ಖಾಸಗಿ ಆಸ್ಪತ್ರೆಗೆ ಡಾಕ್ಟರ್ ಮಾರ್ಲಿನನು ತನ್ನ ಮೊಮ್ಮಗಳು ಬಾರ್ಬರಾಳನ್ನು ಕರಕೊಂಡು ಹೋದನು. ಡಾಕ್ಟರ್ ಮಿಲ್ಲರನು ಕುಂಟುತ್ತ ನಡೆಯುತ್ತಿದ್ದುದನ್ನು ಕಂಡನು.

©KTBS Not to be republished

ಡಾಕ್ಟರ್ ಮಾರ್ಲಿನನಿಗೆ ಡಾಕ್ಟರ್ ಮಿಲ್ಲರನು ಹೇಳಿದನು: "ನನ್ನ ಬಳಿ ಬರುವ ರೋಗಿಗಳೆಲ್ಲರೂ ಒಂದಿಲ್ಲೊಂದು ಅಂಗದ ಸಮಸ್ಯೆ ಇರುವವರೇ. ಆಗೆಲ್ಲ ನನಗೆ ನಾನೂ ಅವರಲ್ಲೊಬ್ಬ, ಅವರ ಮನೆಯ ಸದಸ್ಯ ಎಂಬ ಭಾವನೆ ಬರುತ್ತದೆ. ನನ್ನನ್ನು ಅವರು ಡಾಕ್ಟರಂಕಲ್ ಎಂದು ಕರೆದಾಗ ನನಗೆ ನನ್ನ ಹೆಸರು ಡಾ. ತೇಡ್ಡಿಯಸ್ ಎಂಬುದು ಮರೆತೇಹೋಗುತ್ತದೆ."

"ತೇಡ್ಡಿಯಸ್?" – ಡಾಕ್ಟರ್ ತೇಡ್ಡಿಯಸ್ ಮಾರ್ಲಿನನು ಕುತೂಹಲಪಟ್ಟು ಡಾಕ್ಟರ್ ಮಿಲ್ಲರನನ್ನು ಪ್ರಶ್ನಿಸಿದನು. "ನಿನ್ನ ಹೆಸರಲ್ಲೂ ತೇಡ್ಡಿಯಸ್ ಎಂದಿದೆಯೇ?"

"ಹೌದು" ಎಂಬಂತೆ ತಲೆಯಾಡಿಸಿದನು ಡಾ. ಮಿಲ್ಲರ್. "ಮಕ್ಕಳನ್ನು ಭೂಮಿಗಿಳಿಸಿದ ವೈದ್ಯರ ಹೆಸರನ್ನು ಆ ಮಕ್ಕಳ ಅಡ್ಡಹೆಸರಾಗಿ ಬಳಸುವುದು ನಮ್ಮೂರಿನ ಸಂಪ್ರದಾಯ. ಹಾಗೆಯೇ ನನ್ನನ್ನು ಭೂಮಿಗಿಳಿಸಿದ ಒಬ್ಬ ತರುಣ ವೈದ್ಯಕೀಯ ವಿದ್ಯಾರ್ಥಿಯ ಹೆಸರನ್ನೇ ನನಗೆ ಇಡಲಾಯಿತು" ಎಂದನು.

ಡಾಕ್ಟರ್ ತೇಡ್ಡಿಯಸ್ ಮಾರ್ಲಿನನ ಕಂಠವು ಬಿಗಿದು ಬಂತು. ತಾನು ತರುಣ ವಿದ್ಯಾರ್ಥಿಯಾಗಿದ್ದಾಗ, "ಈ ಒಂದು ಮಗು ಇಲ್ಲವಾದರೆ ಜಗತ್ತಿಗೇನು ನಷ್ಟ!" ಎಂದು ತನ್ನೊಳಗೆ ಅಂದುಕೊಂಡದ್ದನ್ನು ಜ್ಞಾಪಿಸಿಕೊಂಡನು. ಆ ದಿನಗಳಲ್ಲಿ ಅವನು ಎಷ್ಟೊಂದು ಕುರುಡನಾಗಿದ್ದನು!

ಬಾರ್ಬರಾಳನ್ನು ಪುನಃ ನಡೆಯುವಂತೆ ಮಾಡಲು ಹೊರಟ ಡಾಕ್ಟರ್‌ನಿಗೆ ಮಾರ್ಲಿನನು ತನ್ನ ಕೈಯ್ಯನ್ನು ನೀಡಿ ಹೇಳಿದನು: "ನೀನು ಪುಟ್ಟ ಹುಡುಗಿಯ ಕಾಲು ಸರಿಪಡಿಸುತ್ತಿರುವುದಷ್ಟೇ ಅಲ್ಲ, ಕುರುಡಾಗಿದ್ದ ಒಬ್ಬ ಹಿರಿಯನ ಕಣ್ಣನ್ನೂ ತೆರೆಸಿರುವೆ!"

ಬಹಳ ಹೊತ್ತು ದಾಟಿದರೂ ತನ್ನ ಕೈಯನ್ನು ಯಾರೂ ಮುಟ್ಟಲು ಬಾರದಿದ್ದಾಗ, ಸುಳ್ಳು ಹೇಳಿದ್ದ ಮಕ್ಕಳು ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ ಎಂದು ತಿಳಿಯಿತು. ಸಂತೋಷಪಟ್ಟ ಅಮ್ಮ ಕಣ್ಣು ತೆರೆದಳು. ಇಬ್ಬರು ಮಕ್ಕಳನ್ನೂ ಹತ್ತಿರಕ್ಕೆ ಕರೆದು ಅಪ್ಪಿಕೊಂಡು ಮುದ್ದು ಮಾಡಿದಳು. "ಯಾವುದೇ ಕಾರಣಕ್ಕೂ ಸುಳ್ಳು ಹೇಳಬಾರದು ಮಕ್ಕಳೇ" ಎಂದೂ ಹೇಳಿದಳು.

ಮೋನು, ಪಾಪು ಅಂದೇ ಶಪಥ ಮಾಡಿದರು. "ಏನೇ ಕಷ್ಟ ಬಂದರೂ ಇನ್ನು ಮುಂದೆ ನಾನು ಸುಳ್ಳು ಹೇಳುವುದಿಲ್ಲ."

©KTBS Not to be republished

## ಕೃತಿಕಾರರ ಪರಿಚಯ

**ಕಾನ್‌ಸ್ಟನ್ಸ್ ಜೆ ಫಾಸ್ಟರ್** ಎಂಬವರು ೨೦ನೇ ಶತಮಾನದಲ್ಲಿದ್ದ ಓರ್ವ ಇಂಗ್ಲೀಷ್ ಲೇಖಕರು. ಇವರು ಮುಖ್ಯವಾಗಿ ಮಕ್ಕಳ ಕಲಿಕೆ, ಮಕ್ಕಳನ್ನು ನೋಡಿಕೊಳ್ಳುವುದು, ಶಿಶು ಆರೈಕೆ ಮುಂತಾದ ವಿಷಯಗಳ ಬಗ್ಗೆ ಹಲವು ಕೃತಿಗಳನ್ನು ರಚಿಸಿದ್ದಾರೆ. "**ದ ಅಟ್ರಾಕ್ಟಿವ್ ಚೈಲ್ಡ್**", "**ದ ರಿಚ್ ವರ್ಲ್ಡ್**", "**ಫಾದರ್ಸ್ ಆಂಡ್ ಪೇರೆಂಟ್ಸ್ ಟೂ**", "**ಡೆವಲಪಿಂಗ್ ರೆಸ್ಪಾನ್ಸಿಬಿಲಿಟಿ ಇನ್ ಚಿಲ್ಡ್ರನ್**" ಮುಂತಾದವು ಅವರ ಕೃತಿಗಳು. ಫಾಸ್ಟರ್ ಅವರು ಇಂಗ್ಲೀಷ್ ಭಾಷೆಯಲ್ಲಿ ಬರೆದ ಕತೆಯನ್ನು ಎಲ್. ಎಸ್. ನಾಯ್ಕ ಎಂಬವರು "**ಜೀವದ ಮೌಲ್ಯ**" ಎಂಬ ಹೆಸರಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

| | | |
|---|---|---|
| **ಕ್ಷೇತ್ರ** | : | ಓದುವುದು. |
| **ಸಾಮರ್ಥ್ಯ** | : | ಬರಹ ಮತ್ತು ಮುದ್ರಿತ ವಿಷಯಗಳನ್ನು ನಿರರ್ಗಳವಾಗಿ ಓದುವುದು. |

## ಪದಗಳ ಅರ್ಥ

| | | |
|---|---|---|
| ಪರಿಹರಿಸಲಾಗದ | – | ಗುಣಪಡಿಸಲಾಗದ |
| ಅವಿವೇಕ | – | ವಿವೇಕವಿಲ್ಲದೆ ಇರುವುದು |
| ನಿಶ್ಚಿತ ಅಭಿಪ್ರಾಯ | – | ಖಚಿತವಾದ ಅನಿಸಿಕೆ |
| ಲೇಸು | – | ಒಳ್ಳೆಯದು |
| ಆರೈಕೆ | – | ಉಪಚಾರ |
| ಖಚಿತ | – | ನಿಶ್ಚಿತ, ಗೊಂದಲವಿಲ್ಲದ |
| ಪ್ರಸವ | – | ಹೆರಿಗೆ |
| ಸೆಳೆತ | – | ಎಳೆಯುವಿಕೆ |
| ವಿಷಮ | – | ಗಂಭೀರ |
| ಚಿಕಿತ್ಸಕ | – | ರೋಗವನ್ನು ಗುಣಪಡಿಸುವವರು, ಆರೈಕೆ ಮಾಡುವವರು |
| ಆಸ್ಪದ | – | ಅವಕಾಶ |

## ಅಭ್ಯಾಸ

©KTBS Not to be republished

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಡಾಕ್ಟರ್ ತೇಡ್ಡಿಯಸ್ ಮಾರ್ಲಿನನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ ಯಾವುದನ್ನು ಅವಿವೇಕ ಎಂದು ಭಾವಿಸಿದ್ದನು?

೨. ತೇಡ್ಡಿಯಸ್‌ನ ಸಹಪಾಠಿಗಳು ಏನೆಂದು ಹೇಳುತ್ತಿದ್ದರು?

೩. ಜರ್ಮನಿಯಿಂದ ವಲಸೆ ಬಂದ ಹೆಂಗಸಿಗೆ ಡಾ. ತೇಡ್ಡಿಯಸ್ ಹೇಗೆ ಸಹಾಯ ಮಾಡಿದನು?

೪. ಮಗುವಿಗೆ ಯಾವ ನ್ಯೂನತೆ ಇತ್ತು?

೫. ಬಾರ್ಬರಾ ಯಾವ ಸಮಸ್ಯೆಯಿಂದ ನರಳುತ್ತಿದ್ದಳು?

೬. ಬಾರ್ಬರಾಳನ್ನು ಪರೀಕ್ಷಿಸಿದ ವೈದ್ಯರು ಏನು ಹೇಳಿದರು?

೭. ಡಾಕ್ಟರ್ ತೇಡ್ಡಿಯಸ್ ತನ್ನೊಳಗೆ ಏನನ್ನು ಜ್ಞಾಪಿಸಿಕೊಂಡನು?

೮. ಡಾಕ್ಟರ್ ಮಾರ್ಲಿನನು ಬಾರ್ಬರಾಳನ್ನು ಉಪಚರಿಸಿದ ವೈದ್ಯನಿಗೆ ಏನೆಂದು ಹೇಳಿದನು?

## ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಮಗುವಿಗೆ ಉಸಿರಾಡುವಂತೆ ಸಹಕರಿಸುವಾಗ ಮಾರ್ಲಿನನ ಮನಸ್ಸಿನಲ್ಲಿ ಬಂದ ಆಲೋಚನೆಗಳೇನು?
೨. ಮಾರ್ಲಿನನ ಮೊಮ್ಮಗಳಿಗೆ ಕಂಡುಬಂದ ಖಾಯಿಲೆ ಯಾವುದು? ಅದರ ಲಕ್ಷಣಗಳೇನಿತ್ತು?
೩. ಮಾರ್ಲಿನನನ್ನು ಭೇಟಿಯಾದ ಪ್ರವೀಣರಲ್ಲೊಬ್ಬ ಯಾವ ಸಲಹೆಯನ್ನು ಕೊಟ್ಟನು?
೪. ಡಾಕ್ಟರ್ ಮಿಲ್ಲರ್, ಮಾರ್ಲಿನನನ್ನು ಭೇಟಿಯಾದಾಗ ವೈದ್ಯಕೀಯ ವೃತ್ತಿಯ ಬಗ್ಗೆ ಹೇಳಿದ ಮಾತುಗಳೇನು?
೫. ಮಾರ್ಲಿನನ ಕಂಠ ಬಿಗಿದು ಬರಲು ಕಾರಣವೇನು?
೬. ಕೊನೆಯಲ್ಲಿ ಮಾರ್ಲಿನ್, ಮಿಲ್ಲರನಿಗೆ ಯಾವ ರೀತಿ ಕೃತಜ್ಞತೆ ಹೇಳಿದನು?

## ಇ. ಈ ನುಡಿಗಟ್ಟುಗಳ ಅರ್ಥ ಬರೆದು, ವಾಕ್ಯಗಳಲ್ಲಿ ಬಳಸಿ.

೧. ಕಂಠವು ಬಿಗಿದು ಬಂತು
೨. ಕಣ್ಣನ್ನು ತೆರೆಸು

## ಈ. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟ ಸ್ಥಳ ಭರ್ತಿ ಮಾಡಿರಿ.

©KTBS Not to be republished

೧. ಇತರ ಮಕ್ಕಳು ________ ಗೇಲಿ ಮಾಡುವರು.
೨. ತನ್ನ ದೀರ್ಘಕಾಲದ ವೃತ್ತಿಯಲ್ಲಿ ಇಂತಹ ____________ ಒಮ್ಮೆಯಾದರೂ ಕಂಡಿರಲಿಲ್ಲ.
೩. ಮಕ್ಕಳನ್ನು ಭೂಮಿಗಿಳಿಸಿದ ವೈದ್ಯರ ಹೆಸರನ್ನು ಆ ಮಕ್ಕಳ ___________ ಬಳಸುವುದು ನಮ್ಮೂರಿನ ಸಂಪ್ರದಾಯ.

**(ಜ್ಞಾಪಿಸಿಕೊಂಡು, ರೋಗಸ್ಥಿತಿಯನ್ನು, ವೈಫಲ್ಯದ, ಅಡ್ಡಹೆಸರಾಗಿ, ಅಣಕಿಸಿ)**

## ಉ. ಪೂರಕ ಚಟುವಟಿಕೆ :

೧. ಪೋಲಿಯೋ ತರಹವೇ ಮಕ್ಕಳನ್ನು ಬಾಧಿಸುವ ಇತರೆ ಕಾಯಿಲೆಗಳು ಯಾವುವು ಎಂದು ತಿಳಿಯಿರಿ.
೨. ಪೋಲೀಯೋಗೆ ಇಂದಿನ ದಿನಗಳಲ್ಲಿ ಯಾವ ರೀತಿಯ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಯಿರಿ.
೩. ಪ್ರತಿಯೊಂದು ಜೀವಿಯನ್ನೂ ಕರುಣೆಯಿಂದ ನೋಡಬೇಕು" – ಈ ವಿಚಾರದ ಕುರಿತು ಒಂದು ಪ್ರಬಂಧ ಬರೆಯಿರಿ.

## ಊ. ಕೆಳಗಿನ ವಿಷಯಗಳಲ್ಲಿ ಭಾಷಣ ಸ್ಪರ್ಧೆಗಳನ್ನು ನಡೆಸಿರಿ.

೧. ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುವುದು ಒಳ್ಳೆಯದು.
೨. ಯಾರನ್ನೂ ಕೀಳಾಗಿ ಕಾಣಬಾರದು.
೩. ನಮ್ಮ ವಿಕಲತೆಗಳ ಬಗ್ಗೆ ಗೊಣಗುತ್ತ ಕೂರಬಾರದು.
೪. ಎಲ್ಲ ಪರಿಸ್ಥಿತಿಗಳನ್ನೂ ಛಲದಿಂದ ಎದುರಿಸಬೇಕು.
೫. ಗೇಲಿಗಳಿಗೆ ತಲೆ ಕೆಡಿಸಿಕೊಳ್ಳಬಾರದು.
೬. ನಮ್ಮ ನ್ಯೂನತೆಗಳನ್ನು ಮೀರಿ ಸಾಧನೆ ಮಾಡಬೇಕು.

## ವ್ಯಾಕರಣ ಮಾಹಿತಿ

### ಅ. ನಾಮಪದ

ವ್ಯಕ್ತಿ, ವಸ್ತು, ಸ್ಥಳ ಮತ್ತು ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ಪದಗಳಿಗೆ ನಾಮಪದ ಎನ್ನುವರು.

**ಉದಾಹರಣೆ :** ಮಂಡ್ಯ, ತಿಮ್ಮಣ್ಣ, ಹುಲಿ, ಕಲ್ಲು ಇತ್ಯಾದಿ.

**ಈ ಕೆಳಗೆ ಮೂರು ವಿಧದ ನಾಮಪದಗಳನ್ನು ಹೆಸರಿಸಲಾಗಿದೆ.**

ನಾಮಪದಗಳು

ರೂಢನಾಮ  ಅಂಕಿತನಾಮ  ಅನ್ವರ್ಥನಾಮ

**ರೂಢನಾಮ** : ರೂಢಿಯಿಂದ ಬಂದ ಪದಗಳಿಗೆ ರೂಢನಾಮ ಎನ್ನುವರು.
**ಉದಾ :** ನದಿ, ಪರ್ವತ, ಹೆಂಗಸು, ಪಟ್ಟಣ, ದೇಶ, ಇತ್ಯಾದಿ.

**ಅಂಕಿತನಾಮ** : ಗುರುತಿಗಾಗಿ ಹಾಗೂ ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳು.

**ಉದಾ:** ಕೂಡಲಸಂಗಮದೇವ, ಪುರಂದರವಿಠಲ, ಗಂಗಾ, ಬ್ರಹ್ಮಪುತ್ರ, ಭಾರತ ಇತ್ಯಾದಿ.

**ಅನ್ವರ್ಥನಾಮ** : ರೂಪ, ಗುಣ, ವೃತ್ತಿ, ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥನಾಮಗಳು.

**ಉದಾ:** ವ್ಯಾಪಾರಿ, ರೋಗಿ, ಯೋಗಿ, ಬಳೆಗಾರ, ಪೂಜಾರಿ, ಶಿಕ್ಷಕ, ವಿದ್ಯಾರ್ಥಿ ಇತ್ಯಾದಿ.

©KTBS Not to be republished

## ವ್ಯಾಕರಣ ಮಾಹಿತಿ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಅ) ನಾಮಪದ ಎಂದರೇನು? ಉದಾಹರಣೆ ಕೊಡಿರಿ.

ಆ) ನಾಮಪದಗಳಲ್ಲಿ ಎಷ್ಟು ವಿಧ? ಅವು ಯಾವುವು?

### ಆ. ಹೊಂದಿಸಿ ಬರೆಯಿರಿ.

| | 'ಅ' | | 'ಬ' |
|---|---|---|---|
| ೧. | ಅಂಕಿತ ನಾಮ | – | ರೂಢಿಯಿಂದ ಬಂದ ಪದಗಳಿಗೆ |
| ೨. | ರೂಢನಾಮ | – | ರೂಪ, ಗುಣ, ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಬಂದ ಹೆಸರು |
| ೩. | ಅನ್ವರ್ಥ ನಾಮ | – | ಗುರುತಿಗಾಗಿ ಹಾಗೂ ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರು |

### ಇ. ಕೊಟ್ಟಿರುವ ಪದಗಳನ್ನು ರೂಢನಾಮ, ಅಂಕಿತ ನಾಮ ಹಾಗೂ ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆಯಿರಿ.

ಮಾರ್ಲಿನ್, ಮಿಲ್ಲರ್, ವೈದ್ಯ, ರೋಗಿ, ಹೆಂಗಸು,
ಶಿಶು, ಬಾರ್ಬರಾ, ಪ್ರವೀಣ, ಕುರುಡ, ವಿದ್ಯಾರ್ಥಿ

©KTBS Not to be republished

### ಈ. ಯೋಜನೆ

೧. ಕರಪತ್ರ, ಲಗ್ನಪತ್ರಿಕೆಗಳು ಹಾಗೂ ಸಾಹಿತಿಗಳ ಕೈಬರೆಹಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

### ಉ. ಓದಿಗೆ ಮನ್ನಣೆ

೧. ಮುದ್ರಿತ ಕರಪತ್ರ ಹಾಗೂ ಲಗ್ನ ಪತ್ರಿಕೆಗಳನ್ನು ಸಂಗ್ರಹಿಸಿ ಓದಿರಿ.

೨. ಶಿಶು ಗೀತೆಗಳನ್ನು ಓದಿರಿ.

೩. ರಾಜರತ್ನಂ, ಡುಂಡಿರಾಜ್ ಮೊದಲಾದ ಲೇಖಕರು ಬರೆದ ಮಕ್ಕಳ ಕವಿತೆಗಳನ್ನು ಓದಿರಿ.

### ಊ. ಶುಭನುಡಿ

೧. ಕನ್ನಡಿ ನಿನಗೆ ಬೇಡ, ಕನ್ನಡಿಯೆ ನೀನಾಗು.

೨. ನುಡಿದರೆ ಮುತ್ತಿನ ಹಾರದಂತಿರಬೇಕು.

೩. ಮಾತಿನ ರೀತಿಗೆ ಪ್ರೀತಿಯ ಬೆಸುಗೆ.

★★★★★

# ೫. ಪಂಜರ ಶಾಲೆ

R2R2U2

ಬಿ. ವಿ. ಕಾರಂತ –

**ಪ್ರವೇಶ :** "ಪಂಜರದೊಳಗಿಟ್ಟು ನಯ, ವಿನಯ ಕಲಿಸಿ" ಎಂಬ ರಾಜಾಜ್ಞೆ, ಸ್ವತಂತ್ರ, ಸ್ವಚ್ಛಂದವಾಗಿ ಬದುಕಿದ ಹಾಡುಹಕ್ಕಿಯ ತೊಳಲಾಟ ಈ ನಾಟಕದಲ್ಲಿ ಮನೋಜ್ಞವಾಗಿ ಮೂಡಿ ಬಂದಿದೆ. ಕಾಡಿನಲ್ಲಿ ಸಿಕ್ಕ ಗಿಳಿಯನ್ನು ರಾಜನು ಬಂಧಿಸಿ ಪಂಜರದೊಳಗಿಟ್ಟು ಬಲವಂತದ ಶಿಕ್ಷಣ, ಸಂಸ್ಕೃತಿ ಕಲಿಸುವ ಆದೇಶ ಮಾಡುತ್ತಾನೆ. ಯಾರನ್ನೇ ಆಗಲಿ ಪಂಜರದೊಳಗಿಟ್ಟು ಒತ್ತಡದಿಂದ ಏನನ್ನು ಕಲಿಸಲು ಸಾಧ್ಯವಿಲ್ಲ ಎಂಬುದು ಈ ನಾಟಕದ ಆಶಯವಾಗಿದೆ.

(ವಸಂತದ ವೈಭವ; ರಾಜೋದ್ಯಾನ, ಹಿನ್ನೆಲೆಯಲ್ಲಿ ಆಲಾಪ, ಅನಂತರ–ಗಿಳಿವಿಂಡು ವಿಹರಿಸಿ ಹೊರಡಲು ಸಿದ್ಧವಾಗುತ್ತಿರುವಷ್ಟರಲ್ಲಿ ಒಂದು **ಗಿಳಿಮರಿ** ಹಣ್ಣು ತೂಗಿ ಬಾಗಿದ ಗಿಡವೊಂದನ್ನು ಕಂಡು ಸಂತೋಷದಿಂದ ಹುಚ್ಚೆದ್ದು ಕೂಗುವುದು.)

©KTBS Not to be republished

**ಗಿಳಿಮರಿ** : ಬನ್ನಿ ಬನ್ನಿ, ಮಧುಫಲ ತಿನ್ನಿ. ಬೇಗ, ಹಾರಿ ಬನ್ನಿ.
[ಅಲ್ಲಿವರೆಗೆ ನಿದ್ರೆಮಾಡುತ್ತಿದ್ದ ಉದ್ಯಾನ ರಕ್ಷಕರು ಕೂಗಿಗೆ ಎಚ್ಚೆತ್ತು ಓಡಿ ಬರುವರು.]

**ರಕ್ಷಕರು** : ಹಿಡಿಯಿರಿ, ಬಡಿಯಿರಿ, ಹಣ್ಣುಗಳ್ಳರನ್ನು ಬಡಿದೋಡಿಸಿರಿ.
[ಗಿಳಿವಿಂಡು ಹೆದರಿ ಚೆಲ್ಲಾಪಿಲ್ಲಿ ಓಡತೊಡಗುವುವು. ರಕ್ಷಕರು ಕೋಲಿನಿಂದ ನೆಲಬಡಿಯುತ್ತ ಅಟ್ಟಿಸುವರು.]

**ರಕ್ಷಕ ೧** : ಹಾಂ, ಸದೆಬಡಿಯಿರಿ, ಬಿಡಬೇಡಿ. ಒಂದು ಪಿಳ್ಳೆಯೂ ಹಾರಿ ಹೋಗದಿರಲಿ.
[ರಕ್ಷಕರ ಕೈಗಾಗಲೀ ಬಲೆಗಾಗಲೀ ಸಿಕ್ಕದೆ ಗಿಳಿಗಳು ತಪ್ಪಿಸಿಕೊಂಡು ಹಾರಿ ಹೋಗುವುವು. ರಕ್ಷಕರು ಮೇಲುಸಿರು ಬಿಡುತ್ತ ಕೂತುಕೊಳ್ಳುವರು.
ಮರಿಗಿಳಿಯೊಂದು ಮಾತ್ರ ಪರಿವೆಯೇ ಇಲ್ಲದೆ ಹಣ್ಣು ತಿನ್ನುವುದರಲ್ಲಿ ಮಗ್ನವಾಗಿದೆ.]

**ಗಿಳಿಮರಿ** : ಅಣ್ಣ, ಅಮ್ಮ, ಬನ್ನಿ ಬನ್ನಿ. ಟೇಂ ಟೇಂ. ಚಿಕ್ಕಪ್ಪ ದೊಡ್ಡಪ್ಪ, ಹಣ್ಣು ತಿನ್ನಿ. ಟೇಂ ಟೇಂ.
ಎಲ್ಲಾ ಹಣ್ಣೂ ನಮ್ದೇ ನಮ್ದೇ ಎಲ್ಲಾ ಹಣ್ಣು .. ಟೇಂ ಟೇಂ .
[ದಣಿದು ಕೂತ ರಕ್ಷಕರ ಕಿವಿ ನೆಟ್ಟಗಾಗುವುದು, ಹುಡುಕಲು ಪ್ರಾರಂಭಿಸುವರು.]

**ರಕ್ಷಕ ೧** : ಹಣ್ಣುಗಳ್ಳ ಇಲ್ಲೇ ಎಲ್ಲೋ ಇದ್ದಾನೆ, ಹುಡುಕೋ ಹುಡುಕೋ. [ಹುಡುಕುವರು]

**ಗಿಳಿಮರಿ** : ಟೇಂ ಟೇಂ ಬನ್ನಿ ಬನ್ನಿ.

**ರಕ್ಷಕ ೨** : ಅಕೋ! ತೋಟಗಳ್ಳ ಕೊನೆಗೂ ಸಿಕ್ಕ! ಹಿಡಿಯೋ ಬಡಿಯೋ! [ರಕ್ಷಕರು ಗಿಳಿಯನ್ನು ಸುತ್ತುಗಟ್ಟುವರು.]

**ರಕ್ಷಕ ೧** : ರಾಜನ ತೋಟ ಹಾಳುಮಾಡ್ತೀ?



ರಕ್ಷಕ ೨ : ದೊರೇ ತೋಟದ ಹಣ್ಣು ತಿನ್ತೀ?

ರಕ್ಷಕ ೧ : ಇವತ್ತು ನಿನಗೆ ಕೋಲುಪೂಜೆ!

ರಕ್ಷಕ ೨ : ಕಿತ್ತುಬಿಡ್ತೋನ ರೆಕ್ಕೆ ಪುಕ್ಕ!

ರಕ್ಷಕ ೧ : ಮೂರ್ಖರ ಮೂರ್ಖ ಗಿಳಿಯಪ್ಪ!

ರಕ್ಷಕ ೨ : ಹೆಡ್ಡರ ಹೆಡ್ಡ ತುಡುಗಪ್ಪ!

ರಕ್ಷಕ ೧ : ಮುಗೀತು ಇವತ್ತು ನಿನ್ನ ಕಥೆ!

ರಕ್ಷಕ ೨ : ತಿನ್ನೋದು ನಿಲ್ಸೋ ಗಿಳಿಪಿಳ್ಳೆ !

ರಕ್ಷಕ ೧ : ಗೊತ್ತೇ ನಿನಗೆ ತೋಟ ಯಾರದು?

ರಕ್ಷಕ ೨ : ನಿಮ್ಮ ತಾತಂದೇ?

ರಕ್ಷಕ ೧ : ನಿಮ್ಮಪ್ಪಂದೇ?

ರಕ್ಷಕ ೨ : ನಮ್ಮ ರಾಜಂದು !

ರಕ್ಷಕ ೧ : ಈ ಮರ ಈ ಗಿಡ, ಹೂವು ಹಣ್ಣು ...

ರಕ್ಷಕ ೨ : ಎಲ್ಲಾ ನಮ್ಮ ರಾಜಂದು !

ರಕ್ಷಕ ೧ : ಎಂಥಾ ರಾಜ ಗೊತ್ತೇ ನಿಂಗೆ ? ರಾಜಾಧಿರಾಜ

ರಕ್ಷಕ ೨ : ಸಾವಿರ ಸಾವಿರ ಸೇನೆಯ ರಾಜ!

ಗಿಳಿಮರಿ : ಬನ್ರೋ, ಬನ್ರೊ ನಮ್ಮದು ಹಣ್ಣು, ಹಣ್ಣು ತಿನ್ನೋವನದೇ ಹಣ್ಣಿನ ತೋಟ!

ರಕ್ಷಕ ೧ : ಏ ಮರಿಪಿಳ್ಳೆ, ರಾಜನ ಭಯ ಇಲ್ವೇನೋ ನಿಂಗೆ.

ರಕ್ಷಕ ೨ : ರಾಜಂದು ಹೋಗ್ಲಿ, ನಮ್ಮ ಭಯಾನೂ ಇಲ್ಲೇನೋ.

ರಕ್ಷಕ ೧ : ಹೋಗ್ಲಿ. ಈ ಕೋಲಿನ ಭಯ ?

ರಕ್ಷಕ ೨ : ಹಿಡಿಯೋ, ಬಲೆ ಹಾಕೋ,

[ಬಲೆ ಬೀಸುವರು, **ಗಿಳಿಮರಿ** ಬಲೆಯೊಳಗೆ ಸಿಕ್ಕಿ ಬೀಳುವುದು]

[ನೇಪಥ್ಯದಲ್ಲಿ ವಂದಿಮಾಗಧರ ಧ್ವನಿ, ಕ್ರಮೇಣ ಅವರು ರಂಗವನ್ನು ಪ್ರವೇಶಿಸುವರು.]

©KTBS Not to be republished

**ವಂದಿಗಳು** : ಸಾವಧಾನ, ಸಾವಧಾನ.... ಮಹಾಕರುಣಾಳು ಖಗಮೃಗ ಕೃಪಾಳು ಗಿಡಮರದಯಾಳು ವಿದ್ಯಾವಂತ ಪ್ರಜ್ಞಾವಧಾನಿ ಕಣಕಣಕೂ ವಿದ್ಯಾದಾನಿ ವಾಚಾಳಪುರವರಾಧೀಶ್ವರ ರಾಜಾಧಿರಾಜ ರಾಜಮಾರ್ತಾಂಡರು ದಯಮಾಡಿಸುತ್ತಿದ್ದಾರೆ, ಭೋ ಪರಾಕ್.... [ಗಿಳಿಮರಿ ಬಿಡಿಸಿಕೊಳ್ಳಲು ಒದ್ದಾಡುತ್ತಿದೆ. ಟೇಂ ಟೇಂ ಎಂದು ಕಿರಿಚುತ್ತದೆ. ಅಷ್ಟರಲ್ಲಿ ರಾಜ, ಮಂತ್ರಿ, ರಾಜನ ಅಳಿಯ ಪ್ರವೇಶಿಸುವರು.]

**ಗಿಳಿಮರಿ** : ಟೇಂ...ಟೇಂ...

**ರಾಜ** : (ಆಶ್ಚರ್ಯದಿಂದ) ಇದೇನು ಒದರುತ್ತಿದೆ?

**ಗಿಳಿಮರಿ** : ಟೇಂ.....ಟೇಂ.....

**ರಾಜ** : ಯಾವ ಭಾಷೆ ಮಾತಾಡ್ತಾ ಇದೆ? ಪ್ರಾಕೃತ ಭಾಷೆ? ಪಿಶಾಚ ಭಾಷೆ?

**ಗಿಳಿಮರಿ** : ಟೇಂ...

**ರಾಜ** : (ರೇಗಿ, ಮಂತ್ರಿಯ ಕಡೆ) ಏನಿದರ ಅರ್ಥ?

**ವಂದಿಗಳು** : ಟೇಂ (ಮಂತ್ರಿ ಸನ್ನೆ ಮಾಡಲು ಗಪ್ಪನೆ ಬಾಯಿಮುಚ್ಚುವರು.)

**ಮಂತ್ರಿ** : ರಾಜಾಧಿರಾಜ, ಇದೊಂದು ಗಿಳಿಮರಿ. ಕಾಡುಜಾತಿ, ಅನಾಗರಿಕ, ವಸಂತಕಾಲಕ್ಕೆ ಮದ ಹತ್ತಿ ರಾಜತೋಟಕ್ಕೆ ನುಗ್ಗಿ ಹಣ್ಣುಹಂಪಲುಗಳನ್ನು ನಾಶಪಡಿಸಿದೆ.

**ರಾಜ** : ಇದಕ್ಕೆ ಮಾತು ಬರುತ್ತದೆಯೆ?

**ಮಂತ್ರಿ** : ಇಲ್ಲ.

**ರಾಜ** : ಹಾಡು ಬರುತ್ತದೆಯೆ?

**ಮಂತ್ರಿ** : ಇಲ್ಲ.

**ರಾಜ** : ಓದು ಬರುತ್ತದೆಯೆ?

**ಮಂತ್ರಿ** : ಇಲ್ಲ.

**ರಾಜ** : ನೃತ್ಯ ಬರುತ್ತದೆಯೆ?

**ಮಂತ್ರಿ** : ಇಲ್ಲ.

**ರಾಜ** : ತರ್ಕ, ಶಾಸ್ತ್ರ, ಪುರಾಣ, ವ್ಯಾಕರಣ?

**ಮಂತ್ರಿ** : ಯಾವುದೂ ಬರೋದಿಲ್ಲ.

**ರಾಜ** : ಮತ್ತೇನು ಬರುತ್ತದೆ? ಜೀವನವೆಲ್ಲ ಏನು ಮಾಡುತ್ತದೆ?

**ಗಿಳಿಮರಿ** : ಟೇಂ...ಟೇಂ...

**ಮಂತ್ರಿ** : ಮಹಾಪ್ರಭು, ಈ ಗಿಳಿ ಅರಣ್ಯವಾಸಿ, ನಿರಕ್ಷರಕುಕ್ಷಿ; ತೀರಾ ಅಸಂಸ್ಕೃತ. ಸಂಗೀತವಿಲ್ಲ, ನೃತ್ಯವಿಲ್ಲ, ಗದ್ಯಪದ್ಯದ ಭೇದ ಗೊತ್ತಿಲ್ಲ, ಒಂದು ಎರಡರ ಮಗ್ಗಿ ಕೂಡಾ ಬರೋದಿಲ್ಲ, ಇದಕ್ಕೆ ಬರೋದು ಒಂದೇ– ಗಿಡಮರ ಹತ್ತಿ ಕೊಂಬೆ ಮುರಿದು ಹಣ್ಣು ತಿನ್ನೋದು, ಉದುರಿಸೋದು, ಆಮೇಲೆ....

**ಗಿಳಿಮರಿ** : ಟೇಂ...ಟೇಂ...

**ಮಂತ್ರಿ** : ಹಾಗನ್ನೋದು.

**ರಾಜ** : ಪಾಪ ಪಾಪ!

[ರಕ್ಷಕರು, ವಂದಿಗಳು 'ಅಯ್ಯೋ ಪಾಪ' ಎಂದು ದನಿಗೂಡಿಸುವರು.]

**ಗಿಳಿಮರಿ** : ಟೇಂ...ಟೇಂ...

**ರಾಜ** : ಛೀ ಛೀ ಛೀ! ಬರೇ ಹಣ್ಣು ತಿನ್ನೋದೊಂದೇ ಗೊತ್ತೆ ? ಮಹಾವಾಚಾಳ ನಗರೋದ್ಯಾನದಲ್ಲಿ ಬಂದು ಹಣ್ಣು ತಿನ್ನೋದು ಮಾತ್ರ ಗೊತ್ತೆ? ವಂದಿಮಾಗಧರೆ–

©KTBS Not to be republished

**ವಂದಿಗಳು** : ಮಹಾಕರುಣಾಳು ಖಗಮೃಗಕೃಪಾಳು ಗಿಡಮರದಯಾಳು ವಿದ್ಯಾವತಂಸ ಪ್ರಜ್ಞಾವಧಾನಿ ಕಣಕಣಕೂ ವಿದ್ಯಾದಾನಿ ಮಹಾವಾಚಾಳಪುರ–

**ರಾಜ** : ಈ ಸಭ್ಯ ಸುಶಿಕ್ಷಿತ ನಾಗರಿಕ ರಾಜ್ಯದಲ್ಲಿ ಈ ಅನಾಗರಿಕ ಪಕ್ಷಿ! ರಾಜ ತೋಟದಲ್ಲಿ ನಿರಕ್ಷರ ಕುಕ್ಷಿ ! ಮತ್ತೆ ಇದಕ್ಕೆ ನೀವೇ ಸಾಕ್ಷಿ !... ಮಂತ್ರಿ, ಈ ಅಸಭ್ಯ ಪಕ್ಷಿಯನ್ನು ರಾಜಶಾಲೆಗೆ ಸೇರಿಸತಕ್ಕದ್ದು. ರಾಜಾಧ್ಯಾಪಕರಿಂದ ಇದಕ್ಕೆ ಶಿಕ್ಷಣ ಕೊಡಿಸು. ಈ ಅನಾಗರಿಕ ಶುಕಪಕ್ಷಿಯ ಆದಿಮ ಪ್ರವೃತ್ತಿಗಳನ್ನು ಸುಧಾರಿಸಿ ಆಧುನಿಕ ಮಾಡತಕ್ಕದ್ದು.

**ಮಂತ್ರಿ** : ಅಪ್ಪಣೆ ಪ್ರಭು.

**ರಾಜ** : ಇದು ಸಭ್ಯತೆ ಕಲಿಯಲಿ, ಕಾಡುತನ ಮರೆಯಲಿ. ಶಾಸ್ತ್ರ ವ್ಯಾಕರಣ ಕಲಿತು ಸುಶಿಕ್ಷಿತವಾಗಲಿ. ತಾನು ಸುಸಂಸ್ಕೃತವಾಗಲಿ. ತಾನು ಸುಸಂಸ್ಕೃತನಾಗಿ ಕಾಡಿನ ಉಳಿದ ಶುಕಪಕ್ಷಿಗಳನ್ನು ಸಭ್ಯ ಮಾಡಲಿ.

**ಮಂತ್ರಿ** : ಅಪ್ಪಣೆ ಪ್ರಭು.

**ಅಳಿಯ** : ಮಹಾರಾಜ, ರಾಜಮಾವ, ನನ್ನದೊಂದು ನಮ್ರ ನಿವೇದನೆ; ಇದನ್ನು ರಾಜಶಾಲೆಗೆ ಸೇರಿಸುವ ಮೊದಲು ಒಂದು ಮುಖ್ಯ ತಥ್ಯವನ್ನು ಕಂಡುಹಿಡಿಯಬೇಕು. ಇದರ ಅಸಭ್ಯತೆಗೆ ಮತ್ತು ಅವಿದ್ಯೆಗೆ ಮೂಲಕಾರಣವನ್ನು ಕಂಡುಹಿಡಿಯಬೇಕು. ಈ ಗಿಳಿಮರಿ ತಿನ್ನೋದೇನು, ಕುಡಿಯೋದೇನು, ಇದರ ಆವರಣ ಎಂಥದು, ಇದು ಇರೋದೆಲ್ಲಿ, ಹಾರೋದೆಲ್ಲಿ, ಇದರ ರೆಕ್ಕೆ ಪುಕ್ಕ ಕೊಕ್ಕುಗಳ ಉದ್ದಗಲವೆಷ್ಟು, ಭಾರವೆಷ್ಟು–ಈ ಅಂಶಗಳ ಬಗ್ಗೆ ದೀರ್ಘಸಂಶೋಧನೆ ನಡೆಯಬೇಕು.



© KTBS Not to be republished

**ಮಂತ್ರಿ** : ಪ್ರಭು, ಯುವರಾಜ ಅಳಿಯದೇವರು ಮಹಾ ಪ್ರತಿಭಾಶಾಲಿಗಳು, ದೇಶಕೋಶ ಸುತ್ತಿ ಬಂದವರು. ವಿದೇಶಗಳಿಂದ ಪದವಿಗಳನ್ನು ಹೊತ್ತು ತಂದವರು. ಕಾಂಭೋಜದೇಶದಲ್ಲಿ ಪ್ರಾಣಿಶಾಸ್ತ್ರ, ಪಕ್ಷಿಶಾಸ್ತ್ರ ಪಾರಂಗತರಾದವರು. (ದನಿ ತಗ್ಗಿಸಿ) ಸದ್ಯ ನಿರುದ್ಯೋಗಿಗಳು. ಅದಕ್ಕೇ ಒಂದು ವಿನಂತಿ–ಅಳಿಯರಾಜರಿಗೇ ಶುಕಶಿಕ್ಷಣದ ಭಾರವನ್ನು ವಹಿಸಿಬಿಡಬಹುದು.

**ರಾಜ** : ವಿನಂತಿಯನ್ನು ಸ್ವೀಕರಿಸಿದ್ದೇವೆ. ಅಳಿಯರಾಜ, ಇಂದಿನಿಂದ ನೀನು ಶುಕಶಿಕ್ಷಣದ ಮಂತ್ರಿ.

**ಅಳಿಯ** : ಮಹಾರಾಜ, ರಾಜಮಾವ, ಇನ್ನೊಂದು ವಸಂತ ಬರುವುದರೊಳಗಾಗಿ ಈ ಕಾಡುಗಿಳಿ ತನ್ನ ವನ್ಯವ್ಯವಹಾರಗಳನ್ನು ಮರೆತಿರಬೇಕು, ಸಭ್ಯ ಸುಶಿಕ್ಷಿತ ಸುಸಂಸ್ಕೃತವಾಗಿರಬೇಕು. ಇದಕ್ಕಾಗಿ ನಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ಶುಕ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಬೇಕು.

**ರಾಜ** : ನಿನ್ನ ಕಾರ್ಯದಲ್ಲಿ ಜಯವಾಗಲಿ. ಮಂತ್ರಿ, ಡಂಗುರ ಹೊಡೆಯಿಸು. ರಾಜ್ಯದ ಮೂಲೆ ಮೂಲೆಯ ಪ್ರತಿಯೊಬ್ಬ ಪ್ರಜೆಗೂ ಗೊತ್ತಾಗಲಿ–ಅಲ್ಪವಾದ ಒಂದು ಪಕ್ಷಿಯ ಶಿಕ್ಷಣದಲ್ಲೂ ರಾಜರ ಆಸಕ್ತಿ ಎಷ್ಟಿದೆ ಎನ್ನುವುದು. ನಮ್ಮ ಪುತ್ರಿಯೂ ಸಂತುಷ್ಟಳಾಗಲಿ, ಅಳಿಯರಾಜ ಶುಕಶಿಕ್ಷಣ ಮಂತ್ರಿಯಾದನೆಂದು. [ರಾಜ ವಂದಿಗಳ ಕಡೆ ನೋಡುತ್ತಾನೆ. ಅವರು ಪುನಃ ಪರಾಕು ಹೇಳುತ್ತ ನಿರ್ಗಮಿಸುತ್ತಾರೆ.]

**ಕ್ಷೇತ್ರ** : ಮಾತನಾಡುವುದು

**ಸಾಮರ್ಥ್ಯ** : ನಾಟಕ ಮತ್ತು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವುದು.

## ಕೃತಿಕಾರರ ಪರಿಚಯ



**ಬಿ. ವಿ. ಕಾರಂತ : ಬಾಬುಕೋಡಿ ವೆಂಕಟರಮಣ ಕಾರಂತ** ಅವರು ಕ್ರಿ. ಶ. ೧೯೨೮ ರಲ್ಲಿ **ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಮಂಚಿ ಗ್ರಾಮ**ದಲ್ಲಿ ಜನಿಸಿದರು. ತಂದೆ ಬಾಬುಕೋಡಿ ನಾರಾಯಣಪ್ಪಯ್ಯ, ತಾಯಿ ಲಕ್ಷ್ಮಮ್ಮ. ಬಾಲ್ಯದಲ್ಲಿ ನಾಟಕದ ಬಗೆಗೆ ಬಹಳ ಆಸಕ್ತಿಯುಂಟಾಗಿ ಗುಬ್ಬಿ ನಾಟಕ ಕಂಪನಿಗೆ ಸೇರಿದರು. ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರು **ಈಡಿಪಸ್, ಪಂಜರಶಾಲೆ, ಗೋಕುಲ ನಿರ್ಗಮನ, ಸತ್ತವರ ನೆರಳು, ಜೋಕುಮಾರಸ್ವಾಮಿ** ಮೊದಲಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರಿಗೆ ಪದ್ಮಶ್ರೀ ಪ್ರಶಸ್ತಿ. **ಕಾಳಿದಾಸ ಸಮ್ಮಾನ್, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ** ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. **ರವಿಂದ್ರನಾಥ ಟಾಗೋರ್** ಅವರ ಈ **ಬಂಗಾಳಿ** ನಾಟಕವನ್ನು **'ಪಂಜರಶಾಲೆ'** ಎಂದು ಕನ್ನಡಕ್ಕೆ ಅನುವಾದಿಸಿ ನಿರ್ದೇಶಿಸಿದ್ದಾರೆ.

©KTBS Not to be republished

## ಪದಗಳ ಅರ್ಥ

ಖಗ – ಪಕ್ಷಿ

ತರ್ಕ – ಆರು ದರ್ಶನಗಳಲ್ಲಿ ಒಂದು

ಪುರಾಣ – ಹಿಂದಿನ ಕಾಲದಲ್ಲಿ ನಡೆದುಹೋದ ಕಥೆ

ಪ್ರಜ್ಞಾವಧಾನಿ – ತಿಳಿವಳಿಕೆ ಹಾಗೂ ಸ್ಮರಣೆ ಶಕ್ತಿಯುಳ್ಳವನು

ಮಧುಫಲ – ಸಿಹಿಯಾದ ಹಣ್ಣು

ಮೃಗ – ಪ್ರಾಣಿ

ರಕ್ಷಕರು – ಕಾಪಾಡುವವರು
ವಿದ್ಯಾವತಂಸ – ವಿದ್ಯಾವಂತ
ವಂದಿಮಾಗಧರು – ಸ್ತುತಿ ಪಾಠಕರು, ಹೊಗಳುಭಟ್ಟರು.
ಶುಕ – ಗಿಳಿ

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಗಿಳಿಮರಿಯು ಏನನ್ನು ತಿನ್ನಲು ತನ್ನ ಬಳಗವನ್ನು ಕರೆಯಿತು?
೨. ಮಂತ್ರಿಯ ಪ್ರಕಾರ ಗಿಳಿಮರಿಗೆ ಏನೇನು ಬರುವುದಿಲ್ಲ ಎಂದು ಹೇಳಿದನು?
೩. ರಾಜನು ಗಿಳಿಮರಿಯನ್ನು ಯಾವ ಶಾಲೆಗೆ ಸೇರಿಸಲು ಆದೇಶ ಮಾಡಿದನು?
೪. ರಾಜನು ಯಾರನ್ನು ಶುಕಶಿಕ್ಷಣ ಮಂತ್ರಿಯನ್ನಾಗಿ ನೇಮಿಸಿದನು?
೫. ರಾಜನು ಗಿಳಿಮರಿಗೆ ಏನನ್ನು ಕಲಿಸಬೇಕು ಎಂದು ಹೇಳಿದನು?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

©KTBS Not to be republished

೧. ಗಿಳಿಮರಿಯ ಬಗೆಗೆ ಮಂತ್ರಿಯು ರಾಜನಿಗೆ ಏನು ಹೇಳಿದನು?
೨. ರಾಜನು ಗಿಳಿಮರಿಗೆ ಏನು ಮಾಡುವಂತೆ ಮಂತ್ರಿಗೆ ಹೇಳಿದನು?
೩. ಗಿಳಿಮರಿಯು ಏನೇನು ಕಲಿಯಬೇಕು ಎಂದು ರಾಜನು ಹೇಳುತ್ತಾನೆ?
೪. ರಾಜನ ಅಳಿಯನು ಏನೆಂದು ನಿವೇದನೆ ಮಾಡಿದನು?
೫. ಮಂತ್ರಿಯು ರಾಜನ ಅಳಿಯನ ಬಗೆಗೆ ಹೇಳಿದ ಮಾತುಗಳಾವುವು?

### ಇ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತಪದಗಳಿಂದ ತುಂಬಿರಿ.

೧. ಬನ್ನಿ ಬನ್ನಿ, ____________ ತಿನ್ನಿ, ಬೇಗ, ಹಾರಿಬನ್ನಿ.
೨. ಈ ಅಸಭ್ಯ ____________ ಯನ್ನು ರಾಜಶಾಲೆಗೆ ಸೇರಿಸತಕ್ಕದ್ದು.
೩. ತಾನು ಸುಸಂಸ್ಕೃತವಾಗಿ ಕಾಡಿನ ಉಳಿದ ____________ ಗಳನ್ನು ಸಭ್ಯಮಾಡಲಿ.
೪. ಅಳಿಯ ರಾಜ, ಇಂದಿನಿಂದ ನೀನು ____________ ದ ಮಂತ್ರಿ.
೫. ಒಂದು ಪಕ್ಷಿಯ ____________ ದಲ್ಲೂ ರಾಜನ ಆಸಕ್ತಿ ಎಷ್ಟಿದೆ ಎನ್ನುವುದು.

## ವ್ಯಾಕರಣ ಮಾಹಿತಿ

### ಅ. ಪ್ರತ್ಯಯಗಳ ಪರಿಚಯ

ಪ್ರತ್ಯಯಗಳು ನಾಮಪ್ರಕೃತಿಗೆ (ಮೂಲ ಪದಕ್ಕೆ) ನಿರ್ದಿಷ್ಟ ಅರ್ಥ ಬರುವಂತೆ ಮಾಡುತ್ತವೆ. ಪ್ರತ್ಯಯಗಳನ್ನು ಸ್ವತಂತ್ರವಾಗಿ ಬಳಸಲು ಬರುವುದಿಲ್ಲ. ಹಾಗೆ ಬಳಸಿದರೆ ಅರ್ಥವೂ ಬರುವುದಿಲ್ಲ. ವಾಕ್ಯ ರಚನೆಯ ಸಂದರ್ಭದಲ್ಲಿ ನಾಮಪ್ರಕೃತಿಗಳು ಪಡೆಯಬೇಕಾದ ಅರ್ಥ ವಿಶೇಷಗಳನ್ನು ತಂದುಕೊಡಲು ಸಹಾಯ ಮಾಡುವ ಕಾರಕಗಳೇ ಪ್ರತ್ಯಯಗಳು. ಇವುಗಳನ್ನು ವಿಭಕ್ತಿ ಪ್ರತ್ಯಯವೆಂದೂ ಕರೆಯುತ್ತಾರೆ.

'ಮನೆ' ಎಂಬುದು ನಾಮಪದದ ಮೂಲರೂಪ. ಇದನ್ನು ನಾಮಪ್ರಕೃತಿ ಎನ್ನುವರು. ಈ ನಾಮಪ್ರಕೃತಿಗೆ ಪ್ರತ್ಯಯಗಳು ಸೇರಿದಾಗ 'ಪದ' ಆಗುತ್ತದೆ.

**ಉದಾ** : ಮನೆ + ಉ = ಮನೆಯು, ಮನೆ + ಅಲ್ಲಿ = ಮನೆಯಲ್ಲಿ

### ಆ. ವಿಭಕ್ತಿ ಪ್ರತ್ಯಯ

| | ವಿಭಕ್ತಿ | | ವಿಭಕ್ತಿ ಪ್ರತ್ಯಯ |
|---|---|---|---|
| ೧. | ಪ್ರಥಮಾ | – | ಉ |
| ೨. | ದ್ವಿತೀಯಾ | – | ಅನ್ನು |
| ೩. | ತೃತೀಯಾ | – | ಇಂದ |
| ೪. | ಚತುರ್ಥೀ | – | ಗೆ, ಇಗೆ, ಕ್ಕೆ |
| ೫. | ಪಂಚಮೀ | – | ದೆಸೆಯಿಂದ |
| ೬. | ಷಷ್ಠೀ | – | ಅ |
| ೭. | ಸಪ್ತಮೀ | – | ಅಲ್ಲಿ |

©KTBS Not to be republished

ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಏನಾಗುವುದು ಎಂಬುದನ್ನು ಗಮನಿಸೋಣ.

| ನಾಮಪ್ರಕೃತಿ | ವಿಭಕ್ತಿ ಪ್ರತ್ಯಯ | ಪದ |
|---|---|---|
| ರಾಜ | ಉ | ರಾಜನು |
| ರಾಜ | ಅನ್ನು | ರಾಜನನ್ನು |
| ರಾಜ | ಇಂದ | ರಾಜನಿಂದ |
| ರಾಜ | ಗೆ, ಇಗೆ, ಕ್ಕೆ | ರಾಜನಿಗೆ |
| ರಾಜ | ದೆಸೆಯಿಂದ | ರಾಜನ ದೆಸೆಯಿಂದ |
| ರಾಜ | ಅ | ರಾಜನ |
| ರಾಜ | ಅಲ್ಲಿ | ರಾಜನಲ್ಲಿ |

## ಭಾಷಾಭ್ಯಾಸ

### ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಪ್ರತ್ಯಯಗಳು ಎಂದರೇನು?

೨. ಇಂದ, ನಾನು, ಅಲ್ಲಿ, ಬೇಗ, ಗೆ – ಇವುಗಳಲ್ಲಿ ಪ್ರತ್ಯಯಗಳನ್ನು ಆರಿಸಿ ಬರೆಯಿರಿ.

೩. ಮನೆ, ಕಲ್ಲನ್ನು, ನೆಲ, ಹೊಲ, ಶಾಲೆಯಲ್ಲಿ – ಇವುಗಳಲ್ಲಿ ನಾಮ ಪ್ರಕೃತಿಗಳನ್ನು ಆರಿಸಿ ಬರೆಯಿರಿ.

೪. ಉ, ಅನ್ನು, ಇಂದ, ಅಲ್ಲಿ– ಈ ಪ್ರತ್ಯಯಗಳನ್ನು ಕೆಳಗಿನ ನಾಮಪ್ರಕೃತಿಗಳಿಗೆ ಮಾದರಿಯಂತೆ ಹಚ್ಚಿರಿ.

ಮಾದರಿ: ಮನೆ

೧. ಮನೆ+ಉ=ಮನೆಯು,

೨. ಮನೆ+ಅನ್ನು=ಮನೆಯನ್ನು

೩. ಮನೆ+ಇಂದ=ಮನೆಯಿಂದ,

೪. ಮನೆ+ಅಲ್ಲಿ=ಮನೆಯಲ್ಲಿ

ನಾಮಪಕೃತಿಗಳು – ಶಾಲೆ, ಹೂವು, ಪುಸ್ತಕ, ಬಳೆ, ಹುಡುಗ, ರೈತ.

©KTBS Not to be republished

### ಆ. ಯೋಜನೆ

೧. ಪಂಜರ ಶಾಲೆ ನಾಟಕವನ್ನು ಕಥಾರೂಪದಲ್ಲಿ ಬರೆಯಿರಿ.

### ಇ. ಓದಿಗೆ ಮನ್ನಣೆ

೧. 'ಪಂಜರ ಶಾಲೆ' ಪಾಠವನ್ನು ಧ್ವನಿಯ ಏರಿಳಿತದೊಂದಿಗೆ ಓದಿರಿ.

೨. ಪಂಚತಂತ್ರದ ಕಥೆಗಳನ್ನು ಓದಿರಿ.

### ಈ. ಶುಭನುಡಿ

೧. ಕಲಿಯಲು ಸ್ವತಂತ್ರ ಇರಬೇಕು. ಒತ್ತಡ ಇರಬಾರದು.

೨. ಆಡಿ ಕಲಿ, ಹಾಡಿ ಕಲಿ, ನೋಡಿ ಕಲಿ, ಮಾಡಿ ಕಲಿ.

★★★★★

# ೬. ನಾನು ಮತ್ತು ಹುಂಚಿಮರ

**ಗುರುಸಿದ್ಧಯ್ಯ ಹುಚ್ಚಯ್ಯ ಹನ್ನೆರಡುಮಠ –**

N2T7I5

**ಪ್ರವೇಶ :** ಅನೇಕ ಬಗೆಯ ಮೂಢನಂಬಿಕೆಗಳು ನಮ್ಮ ನಡುವೆ ಬೀಡುಬಿಟ್ಟಿವೆ. ಆ ನಿಮಿತ್ತವಾಗಿ ನಾವು ಮಾಡಬಾರದ ಕೆಲಸಗಳನ್ನು ಮಾಡುತ್ತೇವೆ. ಪರಿಸರ ನಾಶ ಮಾಡುತ್ತೇವೆ. ಯಾವುದೇ ವೈಜ್ಞಾನಿಕ ಸತ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸುವುದಿಲ್ಲ. ಯಾರೋ ಹೇಳಿದ ಯಾವುದೊ ಮಾತಿಗೆ ಏನೋ ಅರ್ಥ ಕಲ್ಪಿಸುವ ಜನರಿಂದ ಎಂಥೆಂಥ ಅನಾಹುತಗಳು ಆಗಿಬಿಡುತ್ತವೆ ಎಂಬುದನ್ನು ಕುರಿತು ಎಚ್ಚರಿಕೆ ನೀಡುವುದು ಪ್ರಸ್ತುತ ಪಾಠದ ಆಶಯ.



ನಾನು ದಾರಿಯಲ್ಲಿ ನಡೆದು ಹೋಗುತ್ತಿದ್ದೆ. ನನ್ನ ಬೂಟುಗಳು ಇದ್ದಕ್ಕಿದ್ದಂತೆ ನಿಂತುಹೋದವು. ಮೆಲ್ಲನೆ ಕೆಳಗೆ ನೋಡಿದರೆ... ಆಹಾ... ಹುಂಚಿಹೂವು! ನೆಲದ ತುಂಬಾ ಹಳದಿಯ ಹುಂಚಿಹೂವುಗಳ ರಾಶಿರಾಶಿ. ಚಿಕ್ಕವನಿದ್ದಾಗ ನನಗೊಂದು ವಿಚಿತ್ರ ಹವ್ಯಾಸವಿತ್ತು. ಅದೆಂದರೆ ಹುಂಚಿಹೂವು ತಿನ್ನುವುದು! ಎಳೆಯ ಹಲ್ಲುಗಳಿಂದ ಹುಂಚಿಹೂವುಗಳನ್ನು ಬಕಬಕ ತಿನ್ನುವ ಬಕಪಕ್ಷಿ ನಾನಾಗಿದ್ದೆ. ಜುಮ್ಮೆಂದಾಗಲೇ ಹಲ್ಲು ಚಳಿತದ್ದು ಗೊತ್ತಾಗುತ್ತಿತ್ತು.

ನನ್ನ ಬಾಯಲ್ಲಿ ನೀರೂರಿತು. ಮೆಲ್ಲನೆ ಬಗ್ಗಿ, ಐದಾರು ಹುಂಚಿಹೂವುಗಳನ್ನು ಆರಿಸಿಕೊಂಡು ತಿನ್ನುವಾಸೆ ಮೂಡಿತು. ಆದರೆ... ನಾನೀಗ ಪುಟ್ಟ ಹುಡುಗನಲ್ಲ...ದೊಡ್ಡವ....

ದೊಡ್ಡ ಪಗಾರದವ...ಪ್ಯಾಂಟು ಬೂಟು... ಇಂಥ ಕಾಲದಲ್ಲಿ... ಅದೂ ರಸ್ತೆಯಲ್ಲಿ ನಿಂತು... ನಾನು ಹುಂಚಿಹೂವು ಆರಿಸಿದರೆ ಜನ ಏನೆಂದಾರು? ಅದನ್ನು ಅಲ್ಲೇ ಬಿಟ್ಟೆ.

ಬೂಟು ಖಟ್ ಖಟ್ ಊರುತ್ತಾ ಮುಂದೆ ಸಾಗಿಬಿಟ್ಟೆ.

ಮುಂದೆ ಒಂದು ವಾರದ ಅನಂತರ ಅದೇ ಹುಣಿಸೆ ಮರದ ಕೆಳಗಿನಿಂದ ಹೋಗುವಾಗ ಸ್ವಲ್ಪ ಬಲಿತ ಎಳನಾಗರಕಾಯಿಗಳು ಕಂಡವು. ಕೆಲವು ಹುಡುಗರು ಹುಂಚಿಮರಕ್ಕೆ ಕಲ್ಲು ಎಸೆದು, ನಾಗರಕಾಯಿ ಬೀಳಿಸಿ ತಿನ್ನುತ್ತಿದ್ದರು. ನನ್ನ ಬಾಯಲ್ಲಿ ಹಂಡೆ ನೀರು ಛಿಲ್ಲೆಂದು ಚಿಮ್ಮಿತು. ಆ ಹುಡುಗರಿಗೆ ಜಬರಿಸುವ ನೆಪದಲ್ಲಿ ನಿಂತು ಅವರಿಗೆಂದೆ, "ಲೇ...ಲೇ...ಕಲ್ಲು ಹೊಡೀಬ್ಯಾಡ್ರಿ...! ಯಾರ ತಲೆ ಒಡೀಬೇಕಂತ ಮಾಡಿದ್ದೀರಿ?"

ನನ್ನ ಗದರಿಕೆಗೆ ಆ ಹುಡುಗರು ಅಂಜಿ ದಿಕ್ಕಾಪಾಲಾಗಿ ಓಡಿಬಿಟ್ಟರು. "ಅಯ್ಯಯ್ಯೋ" ಅಂದೆ! ಅವರು ತೂರಿದ ಕಲ್ಲು ನೇರವಾಗಿ ನನ್ನ ತಲೆಗೆ ಬಡಿದಿದ್ದರೂ ನಾನು ಬೇಡ ಅನ್ನುತ್ತಿರಲಿಲ್ಲ. ಅಷ್ಟು ಪ್ರೀತಿ ನನಗೆ ಹುಂಚಿಕಾಯಿಯ ಮೇಲೆ.

ಸ್ವಲ್ಪ ದಿನಗಳ ಅನಂತರ ಅದೇ ಮರದ ದಾರಿಗೆ ಬಂದೆ. ಅಬ್ಬಾ...! ಇನ್ನೂ ಒಂದು ವಿಚಿತ್ರ ಕಂಡೆ! ಹುಂಚಿಗಿಡದ ಇಳಿಬಿದ್ದ ಉದ್ದ ಟೊಂಗೆಗಳನ್ನು ಹಿಡಿದು ಕೆಲವು ಹುಡುಗಿಯರು ಜೋಕಾಲಿ ಜೀಕುತ್ತಿದ್ದರು. ಒಂದು ಕ್ಷಣ ನಿಂತೆ, ಹೌದು! ನಾನು ಚಿಕ್ಕವನಿದ್ದಾಗ ಹೀಗೆಯೇ ಜೋಕಾಲಿ ಜೀಕುತ್ತಿದ್ದೆ.

©KTBS Not to be republished

ಎರಡು ಮೂರು ವಾರ ದಾಟಿದವು. ಆ ಹುಂಚಿಮರದ ಬಳಿಗೆ ಬಂದಾಗ ಅಲ್ಲಿ ಹಬ್ಬದ ವಾತಾವರಣ. ಕಾರಣ 'ಡೋರೆ ಹುಣಿಸೆ'. ಅಂದರೆ....ಇತ್ತ ಕಾಯಿ ಹುಣಿಸೆಯು ಅಲ್ಲ; ಅತ್ತ ಹಣ್ಣು ಹುಣಿಸೆಯು ಅಲ್ಲ ...ಇದರ ಮಧ್ಯದ ಹಂತದ ಹಳದಿ-ಹಸಿರು ಬಣ್ಣದ ಡೋರೆಹುಣಿಸೆ ಹಣ್ಣು. ಒಂದು ವಿಶಿಷ್ಟ ರುಚಿಯ ಹಣ್ಣು. ಈ ಹಣ್ಣಿನ ಅದ್ಭುತ ರುಚಿಯು ಆಪೂಸ್ ಮಾವಿನ ಹಣ್ಣಿನ ರುಚಿಗಿಂತ ಮೇಲು!

ಮತ್ತೊಂದು ವಾರ ಕಳೆಯಿತು. ಆ ಹುಣಿಸೆಮರದ ಹತ್ತಿರ ಒಂದು ದುಂಡಾದ ಬಂಡೆಗಲ್ಲು ಇತ್ತು. ನಾನು ಸಂಜೆ ಗಾಳಿ ಸೇವಿಸುವ ನೆಪಮಾಡಿಕೊಂಡು ಅಲ್ಲಿ ಹೋಗಿ ಕುಳಿತೆ. ಅಲ್ಲಿ ಮರಕುಟಿಗನ ಹಕ್ಕಿ, ಕಾಗೆ, ಗುಬ್ಬಿ, ಮೈನಾ, ಟಿಟ್ಟಿಭ ಮುಂತಾದ ಪಕ್ಷಿಗಳು ಕಾಣಿಸಿಕೊಂಡವು. ಆ ಹಕ್ಕಿಮಿತ್ರರೊಂದಿಗೆ ಮಾತಾಡಿದೆ. ಅವೆಲ್ಲವೂ ಆ ಹುಣಿಸೆಮರದಲ್ಲಿ ಹಾಡಿ ನಲಿಯುತ್ತಿದ್ದವು.

ಕತ್ತಲೆಯಾಗುತ್ತ ಬಂತು. ತಂಗಾಳಿ ಬೀಸಿತು. ಅಲ್ಲಿಂದ ಎದ್ದೆ. ಹುರಿದ ಹುಂಚಿಕಪ್ಪ ಕುಟುಂಕುಟುಂ ಎಂದು ತಿಂದದ್ದು ನೆನಪಾಯಿತು. ಹುಂಚಿಹಣ್ಣಿನ ಜೊತೆಗೆ ಉಪ್ಪು, ಜೀರಿಗೆ-ಬೆಲ್ಲ ಬೆರೆಸಿ ಕುಟ್ಟಿ ಉಂಡೆಮಾಡಿ ಕಡ್ಡಿಗೆ ಸಿಕ್ಕಿಸಿ ಜುರುಜುರು ಚೀಪಿದ ನೆನಪು ಮರುಕಳಿಸಿತು. ಹೀಗೆ ಹುಂಚಿಮರದೊಂದಿಗಿನ ನನ್ನ ಸಂಬಂಧ ಎಂದೆಂದಿಗೂ ಮರೆಯಲಾರದ್ದು.

ಮತ್ತೆ ಹಲವಾರು ವಾರಗಳು ಕಳೆದ ಮೇಲೆ ನಾನು ಅದೇ ದಾರಿಯಲ್ಲಿ ಹೊರಟಿದ್ದೆ. ಆ ದೊಡ್ಡ ಹುಣಿಸೆ ಮರವಿದ್ದ ಸ್ಥಳಕ್ಕೆ ನಾನು ಬಂದಾಗ... ಸುತ್ತಲೂ ನೋಡಿದೆ...ಆ ಮರವೇ

ಕಾಣೆಯಾಗಿತ್ತು! ಆ ಮರದ ಸಾವಿರಾರು ಟೊಂಗೆಗಳ ಜಾಗದಲ್ಲಿ ಬರಿಯ ಬೋಳು ಮುಗಿಲು ಮಾತ್ರ ಕಾಣಿಸುತ್ತಿತ್ತು!

ಎದೆ ಜೋರಾಗಿ ಬಡಿದುಕೊಂಡಿತು. ಅಲ್ಲಿ ಆಟ ಆಡುತ್ತಿದ್ದ ಒಬ್ಬ ಹುಡುಗನನ್ನು ಕರೆದು ಕೇಳಿದೆ: "ಏ ತಮ್ಮ... ಇಲ್ಲಿ ಹುಂಚಿ ಮರ ಇತ್ತಲ್ಲ... ಏನಾಯ್ತು?" ಆತ ಸಪ್ಪೆ ಮುಖ ಮಾಡಿಕೊಂಡು ಹೇಳಿದ– "ಕಡಿದರು..ಕಡಿದುಬಿಟ್ಟರು.."

"ಆಂ...ಆಂ...ಕಡಿದರೆ? ಯಾಕೆ? ಯಾಕೆ?" ಒಂದೇ ಉಸಿರಿನಲ್ಲಿ ಕೇಳಿದೆ.

"ಹುಂಚಿಮರದಲ್ಲಿ ದೆವ್ವಗೋಳು ಇರುತ್ತಾವಂತೆ. ಇದರಲ್ಲಿ ದೆವ್ವ ವಾಸಮಾಡ್ತಿತ್ತಂತೆ, ಅದಕ್ಕ ಕಡಿದುಬಿಟ್ರು ಸಾವ್ಕಾರ್ರು..."

ಆ ಹುಡುಗ ಆಕಾಶವನ್ನು ನೋಡುತ್ತ ಕಂಗಾಲಾಗಿ ನಿಂತುಬಿಟ್ಟನು.

ಮೇಲೆ ಬಿಸಿಲು.. ಕೆಳಗೆ ಬೋಳು ನೆಲ...

ಅಷ್ಟು ಕಾಲ ನಾನು ಪ್ರೀತಿಸುತ್ತಿದ್ದ ಹುಣಿಸೆಮರ ಅಂದು ಕಾಣದಾಗಿತ್ತು. ಮೂಢನಂಬಿಕೆಗೆ ಬಲಿಯಾಗಿತ್ತು. ಎಲ್ಲೋ ದೂರದಿಂದ ಅದೇ ಹುಣಿಸೆಮರ ಕೂಗಿ ಕೊಂಡಂತೆ ಭಾಸವಾಯಿತು.

"ಮನುಷ್ಯರು ಯಾಕೆ ಹೀಗೆ ಮಾಡುತ್ತಾರೆ?"

©KTBS Not to be republished



| | | |
|---|---|---|
| **ಕ್ಷೇತ್ರ** | : | ಬರೆಯುವುದು. |
| **ಸಾಮರ್ಥ್ಯ** | : | ಉಕ್ತಲೇಖನದ ಮೂಲಕ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ, ವಾಕ್ಯಗಳನ್ನು ಬರೆಯುವುದು. |

## ಕೃತಿಕಾರರ ಪರಿಚಯ



**ಶ್ರೀ ಗುರುಸಿದ್ಧಯ್ಯ ಹುಚ್ಚಯ್ಯ ಹನ್ನೆರಡುಮಠ** ಅವರು ೧೯೪೦ ಮಾರ್ಚ್ ೧೩ರಂದು **ಹುಬ್ಬಳ್ಳಿಯಲ್ಲಿ** ಜನಿಸಿದರು. ತಂದೆ ಹುಚ್ಚಯ್ಯ, ತಾಯಿ ಅನ್ನಪೂರ್ಣಮ್ಮ. ೧೯೬೩ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಎಂ. ಎ. ಪದವಿ ಪಡೆದರು. ಇಳಕಲ್ಲಿನ ಶ್ರೀ ವಿಜಯ ಮಹಾಂತೇಶ್ವರ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. **ಕವನ, ಕಥೆ, ನಾಟಕ, ಕಾದಂಬರಿ, ವಿಡಂಬನೆ, ವಿನೋದ, ಸಂಪಾದನೆ, ವ್ಯಕ್ತಿ ಚಿತ್ರಣ** ಇತ್ಯಾದಿ ೮೦ ಪುಸ್ತಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ **ಸೋಮ ಸಾಕ್ಷಾತ್ಕಾರ, ಪಂಚಾರತಿ, ಮಹಾತಪಸ್ವಿ, ಬಂಡೆದ್ದ ಬಾರಕೋಲು, ಹೋಳಿ** ಮುಂತಾದ ಕೃತಿಗಳು ಸೇರಿವೆ. ಮಹಾತಪಸ್ವಿ, ಹೋಳಿ ಮುಂತಾದ ಕೃತಿಗಳು ಚಲನಚಿತ್ರಗಳಾಗಿ ಪ್ರಸಿದ್ಧಿ ಪಡೆದಿವೆ. ಪ್ರಸ್ತುತ ಕಥೆಯನ್ನು **ಕನಕಾಂಬರಿಯೊಂದಿಗೆ ಕಂಪಿನ ಪಯಣ** ಎಂಬ ಸಣ್ಣಕಥೆಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

©KTBS
Not to be republished

ಅದ್ಭುತ – ಅತ್ಯಾಶ್ಚರ್ಯಕರ.

ಎಳನಾಗರಕಾಯಿ – ಹುಣಿಸೆ ಹೂವುಗಳು ಚಿಕ್ಕ ಚಿಕ್ಕ ಹುಣಿಸೆಕಾಯಿಗಳಾಗುವುದು.

ಕಂಗಾಲಾಗು – ಗಾಬರಿಗೊಳ್ಳು, ಏನೂ ತೋಚದಂತಾಗು.

ಕಾಣೆಯಾಗು – ಇಲ್ಲದಂತಾಗು, ಕಾಣದೆ ಇರುವುದು,

ಚಳಿತದ್ದು – ಹುಣಿಸೆಹುಳಿ ತಿಂದಾಗ ಹಲ್ಲು ಜುಮುಗುಡುವುದು. ವಿಪರೀತ ಚಳಿ ಅನುಭವಕ್ಕೆ ಬರುವುದು.

ಡೋರೆಹುಣಿಸೆ – ಕಾಯಿ ಹಾಗೂ ಹಣ್ಣಿನ ಮಧ್ಯದ ಹುಣಿಸೆಕಾಯಿ.

ಜಬರಿಸು – ಹೆದರಿಸು, ಗದರಿಸು.

ಭಾಸವಾಗು – ತೋರು, ಅನಿಸು.

ಸಂಭ್ರಮ – ಸಡಗರ, ಅದ್ದೂರಿತನ.

ಹುಂಚಿಕಪ್ಪ – ಹುಣಿಸೆ ಒಣಗಿದ ಅನಂತರ ಅದರಲ್ಲಿರುವ ಕಪ್ಪು ಬಣ್ಣದ ಬೀಜ. ಹುಂಚಿಕಪ್ಪಗಳನ್ನು ಒಲೆಯಲ್ಲಿ ಹುರಿದು ಮೇಲಿನ ಸಿಪ್ಪೆ ಬಿಚ್ಚಿ ತಿನ್ನುವರು.

ಹುಂಚಿಮರ – ಹುಣಿಸೆಮರ.

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಹುಂಚಿಹೂವು ತಿನ್ನುವುದರಿಂದ ಹಲ್ಲುಗಳು ಏನಾಗುತ್ತವೆ?

೨. ಡೋರೆಹುಣಿಸೆ ಎಂದರೇನು?

೩. ಹುಂಚಿಮರದ ಟೊಂಗೆಗಳನ್ನು ಹಿಡಿದು ಹುಡುಗಿಯರು ಏನು ಮಾಡುತ್ತಿದ್ದರು?

೪. ಹುಂಚಿಮರದ ಬಳಿಯಲ್ಲಿ ಹಬ್ಬದ ವಾತಾವರಣವಿರಲು ಯಾರು ಕಾರಣವಾದರು?

೫. ಮೂಢನಂಬಿಕೆಗೆ ಯಾವುದು ಬಲಿಯಾಗಿತ್ತು?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧."ಡೋರೆ ಹುಣಿಸೆಯು ಒಂದು ವಿಶಿಷ್ಟ ರುಚಿಯ ಹಣ್ಣು." ವಿವರಿಸಿರಿ?

೨.ಲೇಖಕರ ಹಾಗೂ ಹುಂಚಿಮರದ ನಡುವಿನ ಸಂಬಂಧವನ್ನು ವಿವರಿಸಿರಿ?

©KTBS Not to be republished

### ಇ. ಬಿಟ್ಟ ಸ್ಥಳಗಳನ್ನು ತುಂಬಿರಿ.

೧. ನಾನು ______________ ಆರಿಸಿದರೆ ಜನ ಏನಂದಾರು?

೨. ಕೆಲವು ಹುಡುಗರು ಹುಂಚಿಮರಕ್ಕೆ ಕಲ್ಲು ಎಸೆದು __________ ಬೀಳಿಸಿ ತಿನ್ನುತ್ತಿದ್ದರು.

೩. ಹೌದು! ನಾನು ಚಿಕ್ಕವನಿದ್ದಾಗ ಹೀಗೆಯೇ ____________ ಜೀಕುತ್ತಿದ್ದೆ.

೪. ಹುರಿದ ಹುಂಚಿಕಪ್ಪ __________ ಎಂದು ತಿಂದದ್ದು ನೆನಾಪಾಯಿತು.

೫. ಹುಂಚಿಮರದಲ್ಲಿ ___________ ಇರುತ್ತಾವಂತೆ.

### ಈ. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಮಾಡಿರಿ.

ಜೋಕಾಲಿ, ಹತ್ತಿರ, ವಾಸಮಾಡು, ಹಲವಾರು.

## ವ್ಯಾಕರಣ ಮಾಹಿತಿ

### ಅ. ಲೇಖನ ಚಿಹ್ನೆಗಳು

ನಾವು ಬರೆದ ವಿಚಾರಗಳು ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಲೆಂದು ಅಲ್ಲಲ್ಲಿ ಉಪಯೋಗಿಸುವ ಚಿಹ್ನೆಗಳಿಗೆ ಲೇಖನ ಚಿಹ್ನೆಗಳೆಂದು ಕರೆಯುವರು.

### ಲೇಖನ ಚಿಹ್ನೆಗಳು

೧. ಪೂರ್ಣವಿರಾಮ ಚಿಹ್ನೆ (.)

೨. ಅರ್ಧವಿರಾಮ ಚಿಹ್ನೆ (;)

೩. ಅಲ್ಪ ವಿರಾಮ ಚಿಹ್ನೆ (,)

೪. ಪ್ರಶ್ನಾರ್ಥಕ ಚಿಹ್ನೆ (?)

೫. ಭಾವಸೂಚಕ ಚಿಹ್ನೆ (!)

೬. ಉದ್ಧರಣ ಚಿಹ್ನೆ (‘ ’) (“ ”)

೭. ಆವರಣ ಚಿಹ್ನೆ ( )

೮. ಸಮಾನಾರ್ಥಕ ಚಿಹ್ನೆ (=)

೯. ವಿವರಣ ಚಿಹ್ನೆ (: / :–)

©KTBS Not to be republished

## ಭಾಷಾಭ್ಯಾಸ

### ಅ. ಕೆಳಗಿನ ಕಥೆ ನಕಲು ಮಾಡಿ, ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿರಿ.

ಸುಂದರವಾದ ಒಂದು ತೋಪು ಅಲ್ಲಿ ತೆಂಗು ತಾಳೆ ಬಾಳೆ ಮಾವು ಹಾಗೂ ರಸತುಂಬಿದ ನೇರಲ ಹಣ್ಣುಗಳಿದ್ದವು ಗಿಳಿರಾಯ ಹಣ್ಣುಗಳನ್ನು ಕುಕ್ಕಿಕುಕ್ಕಿ ರುಚಿ ಹೀರುತ್ತ ತನ್ನ ಮಿತ್ರನಿಗೆ ಹೇಳಿತು ಆಹಾ ಎಂಥ ಸಿಹಿ ಸವಿಯುತ್ತೇನೆ ಮಿತ್ರ ಬಾ ನೀನು ಈ ರುಚಿಯನ್ನು ಹೀರು ಎಂದಿತು ಆಗ ಗೆಳೆಯ ಗಿಳಿರಾಯ ನದಿಯ ದಡದಲ್ಲಿರುವ ವಿವಿಧ ಹಣ್ಣುಗಳ ಸಿಹಿಯನ್ನು ನೀನು

ಸವಿದಿರುವೆಯಾ ನನ್ನೊಡನೆ ಬಾ ನದಿಯ ದಡದಲ್ಲಿರುವ ಮರಗಳಿಂದ ವಿಧವಿಧವಾದ ಹಣ್ಣುಗಳ ರುಚಿಯನ್ನು ಸವಿಯುವಿಯಂತೆ ಎಂದು ಗೆಳೆಯನನ್ನು ಕರೆದುಕೊಂಡು ಹೋಯಿತು.

## ಆ. ಓದಿಗೆ ಮನ್ನಣೆ

೧. ಅರಣ್ಯ ಸಂರಕ್ಷಣೆಗೆ ಸಂಬಂಧಪಟ್ಟ ವಿವರಗಳನ್ನು ಸಂಗ್ರಹಿಸಿರಿ.

೨. ಮೂಢನಂಬಿಕೆಗಳೆಂದರೇನು ಎಂಬುದನ್ನು ಹಿರಿಯರಿಂದ ಕೇಳಿ ತಿಳಿಯಿರಿ.

## ಇ. ಶುಭನುಡಿ

೧. ನಂಬಿಕೆಗಳು ಬೇಕು, ಮೂಢನಂಬಿಕೆಗಳಲ್ಲ.

೨. ಮರಗಳಿಗೂ ಮನುಷ್ಯರಂತೆಯೇ ಜೀವವಿದೆ.

೩. ಗಿಡಮರಗಳು ಬೆಳೆಯಲಿ ಜೀವರಾಶಿ ನಲಿಯಲಿ.

©KTBS
Not to be republished

★★★★★

# ೭. ಮಲ್ಲಜ್ಜಿಯ ಮಳಿಗೆ

J4F5H6

**ಸಮಿತಿ ರಚನೆ –**

**ಪ್ರವೇಶ :** ಸಮಾಜದಲ್ಲಿ ಕೆಲವರ ಜೀವನ ಆದರ್ಶಪ್ರಾಯ. ಅಂತಹವರು ಇತರರ ಸಹಾಯಕ್ಕಾಗಿಯೇ ತಾವು ಇರುವುದು ಎಂಬಂತೆ ಜೀವನ ಸಾಗಿಸುತ್ತಾರೆ. ಅವರು ಸಾಮಾನ್ಯ ಜನರ ನಡುವೆ ಸಾಮಾನ್ಯರಂತೆ ಬಾಳುತ್ತಾರೆ. ಆದರೆ ದಾರ್ಶನಿಕ ಗುಣಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅಂಥ ವ್ಯಕ್ತಿಗಳನ್ನು ಗುರುತಿಸಿ, ಮೆಚ್ಚಿ, ಪ್ರಶಂಸಿಸಬೇಕೆಂಬುದು ಇಲ್ಲಿನ ಆಶಯವಾಗಿದೆ.



ಕನಕನಹಳ್ಳಿ,
ದಿ. ೧೪-೧೧-೨೦೧೬

ಪ್ರೀತಿಯ ಸಹೋದರಿ ಸೌಜನ್ಯಳಿಗೆ,

ನಿನ್ನ ಅಣ್ಣನು ಮಾಡುವ ಆಶೀರ್ವಾದಗಳು. ನಾವು ಮನೆಯಲ್ಲಿ ಎಲ್ಲರೂ ಕ್ಷೇಮವಾಗಿದ್ದೇವೆ. ನೀನು, ಚಿಕ್ಕಮ್ಮ, ಚಿಕ್ಕಪ್ಪ ಎಲ್ಲರೂ ಕ್ಷೇಮವಾಗಿರುವಿರಿ ಎಂದು ಆಶಿಸುತ್ತೇನೆ. ನಿನ್ನ ಪತ್ರ ತಲುಪಿತು. ನೀನು ಬರೆದ ಮಾಲ್‌ಗಳ ವಿಷಯ ವಿಶೇಷವಾಗಿತ್ತು. ನನ್ನೂರಿನಲ್ಲೂ ಒಂದು ಮಳಿಗೆ ಇದೆ. ಅದು ನೀನು ತಿಳಿಸಿದ ಮಾಲ್‌ಗಿಂತ ವಿಶೇಷವಾಗಿದೆ. ಅದುವೆ 'ಮಲ್ಲಜ್ಜಿಯ ಮಳಿಗೆ'. ಏನು ಅದರ ವಿಶೇಷ ಅಂತಿಯಾ? ಮುಂದೆ ಓದು, ಗೊತ್ತಾಗುತ್ತದೆ.


ಮಿಠಾಯಿ ಎಂದರೆ ಎಲ್ಲರಿಗೂ ಇಷ್ಟ. ಅದರಲ್ಲೂ ಮಕ್ಕಳಿಗಂತೂ ಬಲು ಇಷ್ಟ. ಹಾಗೆಯೇ ಮಲ್ಲಜ್ಜಿ. ಆಕೆ ನಮ್ಮೂರಿನ ಎಲ್ಲರಿಗೂ ಗೊತ್ತು. ಸುತ್ತ ಮುತ್ತಲಿನ ಊರಿನವರಿಗೂ ಚಿರಪರಿಚಿತಳು. ಮಲ್ಲಜ್ಜಿಯಿಂದ ಮಿಠಾಯಿ ಪ್ರಸಿದ್ಧವೋ, ಮಿಠಾಯಿಯಿಂದ ಮಲ್ಲಜ್ಜಿ ಪ್ರಸಿದ್ಧವೋ ಗೊತ್ತಿಲ್ಲ. ಮಲ್ಲಜ್ಜಿ ಮತ್ತು ಮಿಠಾಯಿ ಎರಡೂ ಇರುವ 'ಮಳಿಗೆ' ಎಲ್ಲರಿಗೂ ಒಂದು ರೀತಿಯ 'ತಂಗುದಾಣ'ವೇ ಸರಿ.

ಮಲ್ಲಜ್ಜಿಯ ಮಳಿಗೆ ನೋಡಲು ಚಿಕ್ಕದಾದರೂ ಅಲ್ಲಿ ಎಲ್ಲವೂ ದೊರಕುತ್ತವೆ. ಕಡಲೆ, ಪುರಿ, ಕೊಬ್ಬರಿ ಮಿಠಾಯಿಗಳಿಂದ ಹಿಡಿದು ಇತ್ತೀಚಿನ ತಿನಿಸುಗಳೂ ಸಿಗುತ್ತವೆ. ಯಲ್ಲಜ್ಜಿಗೆ ಬೇಕಾದ ಎಲೆ–ಅಡಿಕೆ, ಸಿಂಗಾರಪ್ಪನಿಗೆ ಸಕ್ಕರೆ–ಚಹಾಪುಡಿ, ಪೂಜಾರಪ್ಪನಿಗೆ ಊದುಕಡ್ಡಿ–ಕರ್ಪೂರ, ಬೀಗರಿಗೆ ಬಿಸ್ಕೀಟು–ಖಾರ, ಹೆಣ್ಣುಮಕ್ಕಳಿಗೆ ಸ್ನೋ–ಪೌಡರ್, ಚಿಕ್ಕಮಕ್ಕಳಿಗೆ ಚಾಕಲೇಟು–ಪೆಪ್ಪರಮೆಂಟು ಹೀಗೆ ಎಲ್ಲರಿಗೂ ಬೇಕಾಗುವ ವಸ್ತುಗಳು ಇಲ್ಲಿ ಲಭ್ಯ. ಆದ್ದರಿಂದ ಜನರು ಪ್ರತಿದಿನ ಒಂದಿಲ್ಲೊಂದು ಬಾರಿ ಈ ತಂಗುದಾಣವನ್ನು ದರ್ಶನ ಮಾಡುತ್ತಾರೆ.

ಮಕ್ಕಳ ಕೈಗೆ ದುಡ್ಡು ಸಿಕ್ಕಿದರೆ ಸಾಕು. ಮಲ್ಲಜ್ಜಿಯ ಅಂಗಡಿಗೆ ಓಟ. ಅಳುತ್ತ ಬಂದ ಪುಟಾಣಿ ಮಕ್ಕಳೂ ಅಲ್ಲಿ ಸುಮ್ಮನಾಗಿಬಿಡುತ್ತಾರೆ. ದುಡ್ಡಿಲ್ಲದೆ ಬಂದ ಪುಟ್ಟ ಮಕ್ಕಳಿಗೂ ಮಲ್ಲಜ್ಜಿ ನಗುತ್ತ ಪ್ರೀತಿಯಿಂದ ಮಿಠಾಯಿ ಕೊಡುತ್ತಾಳೆ. ನಾನು ಪುಟಾಣಿಯಾಗಿದ್ದಾಗ ಹೀಗೆಯೇ ಮಿಠಾಯಿ ಪಡೆದಿದ್ದೆನಂತೆ! 'ಈಗ ದುಡ್ಡಿಲ್ಲಜ್ಜಿ' ಎಂದು ದೊಡ್ಡವರೂ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಹಣವಿದ್ದಾಗ ತಪ್ಪದೇ ತಂದುಕೊಡುತ್ತಾರೆ. ತುರ್ತಾಗಿ ಬೇಕಾದಾಗ ಸಾಲವಾಗಿ ಹಣವನ್ನೂ ಪಡೆದುಕೊಂಡು ಹೋಗುತ್ತಾರೆ. ಹೀಗಾಗಿ ಮಲ್ಲಜ್ಜಿಯ ಮಳಿಗೆ ಒಂದು ಪ್ರೀತಿಯ 'ಸಹಕಾರಿ ಬ್ಯಾಂಕ್' ಇದ್ದಂತೆ!

©KTBS Not to be republished

ನಮ್ಮೂರಿಗೆ ಯಾರು ಹೊಸಬರು ಬಂದರೂ ಮೊದಲು ಮಾತನಾಡಿಸುವುದು ಮಲ್ಲಜ್ಜಿಯನ್ನೇ. ಯಾರ ಮನೆ ಬೇಕು ತೋರಿಸುತ್ತಾಳೆ. ಯಾವ ವಿಷಯ ಬೇಕು–ತಿಳಿಸುತ್ತಾಳೆ. ಇಲ್ಲಿಯ ಎಲ್ಲ ಕುಟುಂಬಗಳು, ಜನರು, ಮಕ್ಕಳು ಮಲ್ಲಜ್ಜಿಗೆ ಗೊತ್ತು! ಮದುವೆಯಾಗುವ ಹುಡುಗ–ಹುಡುಗಿಯರ ಬಗ್ಗೆ ಕೇಳಿದರೆ ಸಾಕು, ಅವರ ಜಾತಕ ಸಮೇತ ವಿವರಿಸಿ ಬಿಡುತ್ತಾಳೆ. ಯಾರಾದರೂ ಯಾರಿಗಾದರೂ ಯಾವ ವಿಷಯವನ್ನಾದರೂ ತಿಳಿಸಲು ಹೇಳಿದ್ದರೆ, ಅವರಿಗೆ ಆ ವಿಷಯವನ್ನು ಯಥಾವತ್ತಾಗಿ ತಿಳಿಸಿಬಿಡುತ್ತಾಳೆ ಮಲ್ಲಜ್ಜಿ. ಪತ್ರಿಕೆ, ಪತ್ರಗಳನ್ನು ಸಂಬಂಧಿಸಿದವರಿಗೆ ತಪ್ಪದೇ ತಲುಪಿಸುತ್ತಾಳೆ. ಯಾರು ಎಲ್ಲಿಗೆ ಏಕೆ ಹೋಗಿದ್ದಾರೆ? ಯಾವಾಗ ಬರುತ್ತಾರೆ? ಎಲ್ಲವೂ ತಿಳಿದಿರುತ್ತದೆ ಮಲ್ಲಜ್ಜಿಗೆ! ಟೆಂಪೋ, ಜೀಪು, ಬಸ್ಸುಗಳು ಬಂದು ಹೋಗುವ ಸಮಯದ ವಿವರವೂ ಇಲ್ಲಿ ಲಭ್ಯ. ಹಾಗಾಗಿ ಮಲ್ಲಜ್ಜಿಯ ಮಳಿಗೆ ಒಂದು ಉಚಿತ 'ಸಂಪರ್ಕ ಕೇಂದ್ರ' ಇದ್ದಂತೆ.



ಮಲ್ಲಜ್ಜಿ ಯಾರ ಮೇಲೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ಎಲ್ಲರೊಂದಿಗೂ ನಗುನಗುತ್ತಾ ಮಾತನಾಡುತ್ತಾಳೆ. ಜನರ ಸಮಸ್ಯೆಗಳನ್ನೂ ಸುಲಭವಾಗಿ ಪರಿಹರಿಸಿಬಿಡುತ್ತಾಳೆ. ಮಕ್ಕಳಿಂದ ಹಿಡಿದು ಮುದುಕರವರೆಗಿನ ದೂರುಗಳನ್ನು ದೂರ ಮಾಡಿಬಿಡುತ್ತಾಳೆ. ಮಳಿಗೆಯ ಮುಂದಿರುವ ಚಪ್ಪಡಿಕಲ್ಲುಗಳೇ ಇಲ್ಲಿ ಕಟಕಟೆ. ಮಲ್ಲಜ್ಜಿಯ ಕೋರ್ಟಿನಲ್ಲಿ ಯಾವ ವಕೀಲರೂ ಸಾಕ್ಷಿಗಳೂ ಬೇಕಿಲ್ಲ. ಎಷ್ಟೋ ಬಾರಿ ದೂರು ನ್ಯಾಯಾಲಯದಲ್ಲಿಯೂ ಬಗೆಹರಿಯುವುದಿಲ್ಲ. ಕೋರ್ಟು ಶುಲ್ಕ, ವಕೀಲರ ಫೀಜು ಯಾವುದೂ ಇಲ್ಲಿಲ್ಲ. ಮಲ್ಲಜ್ಜಿ ನೀಡುವ ತೀರ್ಪು ಯಾವ ನ್ಯಾಯಾಧೀಶರ ತೀರ್ಪಿಗೂ ಕಡಿಮೆಯಿಲ್ಲ. ಆದ್ದರಿಂದ ಮಲ್ಲಜ್ಜಿಯ ಮಳಿಗೆ ಒಂದು ಜನಪ್ರಿಯ ‘ಜನತಾ ನ್ಯಾಯಾಲಯ’ ಇದ್ದಂತೆ.

©KTBS Not to be republished

ನನಗಂತೂ ಈ ಮಳಿಗೆ ಆಶ್ಚರ್ಯದಾಯಕವಾಗಿದೆ. ಇದರ ಬಾಗಿಲು ಸದಾ ತೆರೆದೇ ಇರುತ್ತದೆ. ಮಲ್ಲಜ್ಜಿ ಅಂಗಡಿಯಲ್ಲೇ ಇರುತ್ತಾಳೆ. ಯಾವ ಹೊಸ ಬಗೆಯ ಮಿಠಾಯಿ ಚಾಕಲೇಟ್ ಕೇಳಿದರೂ ಕೊಟ್ಟುಬಿಡುತ್ತಾಳೆ. ಯಾವಾಗ ವ್ಯಾಪಾರ ಮಾಡುತ್ತಾಳೋ ವಸ್ತುಗಳನ್ನು ಯಾವಾಗ ತರುತ್ತಾಳೋ ನನಗೆ ಬಲು ಸೋಜಿಗವಾಗಿದೆ. ಹೀಗಾಗಿ ಮಲ್ಲಜ್ಜಿಯ ಮಳಿಗೆ ನನಗೆ ಒಂದು ‘ಜಾದೂ ಲೋಕವಿದ್ದಂತೆ.’

ಮಲ್ಲಜ್ಜಿಯ ಮಳಿಗೆ ಈಗ ಸ್ವಲ್ಪ ದೊಡ್ಡದಾಗಿದೆ. ಹೊಸ ಹೊಸದಾದ ಪುಸ್ತಕ, ಪೆನ್ನು ಇನ್ನೂ ತುಂಬಾ ವಸ್ತುಗಳು ಬಂದಿವೆ. ಮಲ್ಲಜ್ಜಿಯ ಮಳಿಗೆಯ ಬಗ್ಗೆ ಎಷ್ಟು ಹೇಳಿದರೂ ಸಾಲದೆನಿಸುತ್ತದೆ. ಈಗ ಇಷ್ಟಕ್ಕೆ ಸಾಕು ಮಾಡುತ್ತೇನೆ. ಮುಂದಿನ ಪತ್ರದಲ್ಲಿ ಮತ್ತಷ್ಟು ವಿವರ

ಬರೆಯುತ್ತೇನೆ. ನನ್ನ ಊರಿಗೆ ಬಂದಾಗ ನಿನಗೆ ಈ ತಂಗುದಾಣದ ದರ್ಶನ ಮಾಡಿಸುತ್ತೇನೆ. ನಿನಗಿಷ್ಟವಾದ ಮಿಠಾಯಿಯನ್ನೂ ಕೊಡಿಸುತ್ತೇನೆ.

ಅಣ್ಣನು ಮಾಡುವ ಆಶೀರ್ವಾದಗಳು–

ನಿನ್ನ ಪ್ರೀತಿಯ ಸಹೋದರ,
ಸೃಜನ್

ಇವರಿಗೆ

ಕುಮಾರಿ ಸೌಜನ್ಯ,
೫ನೆಯ ತರಗತಿ,
ಹಿರಿಯ ಪ್ರಾಥಮಿಕ ಶಾಲೆ,
ನಂ.೧೦, ವಿದ್ಯಾನಗರ,
ಉತ್ತರ ಕನ್ನಡ.

**ಕ್ಷೇತ್ರ** : ಬರೆಯುವುದು
**ಸಾಮರ್ಥ್ಯ** : ಅನೌಪಚಾರಿಕ ಪತ್ರ ಮತ್ತು ಚಿಕ್ಕ ಪ್ರಬಂಧಗಳನ್ನು ಸ್ವತಂತ್ರವಾಗಿ ರಚಿಸುವುದು.

©KTBS Not to be republished

## ಪದಗಳ ಅರ್ಥ

ಆಶೀರ್ವಾದ – ಹಾರೈಕೆ.
ಕುಟುಂಬ – ಮನೆತನ, ಒಕ್ಕಲು.
ಕೋರ್ಟ್ – ನ್ಯಾಯಕ್ಕಾಗಿ ವಿಚಾರಣೆ ನಡೆಸುವ ಸ್ಥಳ, ನ್ಯಾಯಾಲಯ.
ಗೊತ್ತು – ಪರಿಚಯ, ತಿಳಿದಿರುವುದು.
ಚಪ್ಪಡಿಕಲ್ಲು – ಚಪ್ಪಡಿ, ಹಾಸುಗಲ್ಲು.
ಚಿರಪರಿಚಿತಳು – ದೀರ್ಘಕಾಲದ ಪರಿಚಯವುಳ್ಳವಳು, ಎಲ್ಲರಿಗೂ ಗೊತ್ತಿರುವಾಕೆ.
ಜನಪ್ರಿಯ – ಜನರ ಮೆಚ್ಚುಗೆಗೆ ಪಾತ್ರವಾದ.
ಜಾತಕ ಸಮೇತ – ಸವಿವರವಾದ ಮಾಹಿತಿಯಿಂದ ಕೂಡಿದ, ಜನ್ಮಕುಂಡಲಿ ವಿವರಗಳಿಂದ ಕೂಡಿದ.
ಜಾದೂ ಲೋಕ – ಇಂದ್ರಜಾಲ ನಡೆಯುವ ಸ್ಥಳ, ಮಾಯಾವಿದ್ಯೆಯ ಪ್ರಪಂಚ.
ತಂಗುದಾಣ – ತಾತ್ಕಾಲಿಕವಾಗಿ ಉಳಿದುಕೊಳ್ಳುವ ಜಾಗ.
ತಲುಪು – ಮುಟ್ಟು, ಸೇರು.
ತೀರ್ಪು – ನಿರ್ಣಯ, ತೀರ್ಮಾನ.

ತುರ್ತು – ಜರೂರು, ಕೂಡಲೆ.
ದರ್ಶನ – ಭೇಟಿ, ಕಾಣುವಿಕೆ.
ದುಡ್ಡು – ರೊಕ್ಕ, ಹಣ.
ಪತ್ರ – ಓಲೆ, ಕಾಗದ.
ಪಡೆ – ಗಳಿಸು, ದೊರಕಿಸು.
ಪತ್ರಿಕೆ – ನಿಯತಕಾಲಿಕೆ, ಬರೆದ ಕಾಗದ.
ಪ್ರಕರಣ – ಸಂಗತಿ, ಪ್ರಸಂಗ.
ಪ್ರಸಿದ್ಧ – ಹೆಸರಾದ, ಕೀರ್ತಿಪಡೆದ.
ಬಗೆಹರಿ – ನೆರವೇರು, ಕೈಗೂಡು.
ಮಾಲ್ – ಮಳಿಗೆ, ಅಂಗಡಿಗಳ ಸಂಕೀರ್ಣ
ಯಥಾವತ್ತಾಗಿ – ಸರಿಯಾಗಿ, ಇದ್ದಹಾಗೆ
ಶುಲ್ಕ – ಸುಂಕ, ದಂಡ.
ಸಮಸ್ಯೆ – ತೊಡಕಾದ ವಿಷಯ, ಜಟಿಲಪ್ರಶ್ನೆ.
ಸಮೇತ – ಕೂಡಿದ, ಸಹಿತವಾದ.
ಸಂಪರ್ಕ ಕೇಂದ್ರ – ಸಂಪರ್ಕ ಕಲ್ಪಿಸುವ ಸ್ಥಳ, ಸೇರುವ ಮುಖ್ಯಸ್ಥಳ.
ಸಹಕಾರ – ಪರಸ್ಪರ ಸಹಾಯ, ಒಗ್ಗಟ್ಟಿನಿಂದ ಕೆಲಸ ಮಾಡುವಿಕೆ.
ಸಹೋದರಿ – ಅಕ್ಕ ಅಥವಾ ತಂಗಿ, ಒಡಹುಟ್ಟಿದವಳು.
ಸಾಕ್ಷಿ – ಕಣ್ಣಾರೆ ಕಂಡವ, ಪುರಾವೆ.
ಸೋಜಿಗ – ಆಶ್ಚರ್ಯ, ಕುತೂಹಲ.
ವಿಶೇಷ – ಹೆಚ್ಚಿನ ಗುಣ, ಹೆಚ್ಚುಗಾರಿಕೆ.
ಹಂಗಿಸು – ಕೆಣಕು, ಮೂದಲಿಸು.
ಹೊಸಬರು – ಅಪರಿಚಿತರು, ಗುರುತಿಲ್ಲದವರು.

©KTBS Not to be republished

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸೃಜನ್ ಯಾರಿಗೆ ಪತ್ರವನ್ನು ಬರೆದನು?
೨. ಯಾರಿಗೆ ಮಿಠಾಯಿ ಎಂದರೆ ಇಷ್ಟ?
೩. ಮಲ್ಲಜ್ಜಿ ಎಲ್ಲರೊಂದಿಗೆ ಹೇಗೆ ಮಾತನಾಡುತ್ತಾಳೆ?

೪. ಮಲ್ಲಜ್ಜಿಯ ಕೋರ್ಟಿನಲ್ಲಿ ವಕೀಲರ ಶುಲ್ಕ ಎಷ್ಟು?

೫. ಸೃಜನ್‌ಗೆ ಮಲ್ಲಜ್ಜಿಯ ಮಳಿಗೆ ಯಾವ ಲೋಕದಂತೆ ತೋರಿದೆ?

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಮಲ್ಲಜ್ಜಿಯ ಮಳಿಗೆಯಲ್ಲಿ ದೊರೆಯುವ ವಸ್ತುಗಳು ಯಾವುವು? ಪಟ್ಟಿಮಾಡಿರಿ.

೨. ಮಲ್ಲಜ್ಜಿಯ ನ್ಯಾಯಾಲಯದ ಕುರಿತು ವಿವರಿಸಿರಿ.

೩. ಸೃಜನ್‌ಗೆ ಮಲ್ಲಜ್ಜಿಯ ಮಳಿಗೆ ಜಾದೂಲೋಕವೆನಿಸಿದ್ದು ಏಕೆ?

**ಇ. ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

೧. ಮಲ್ಲಜ್ಜಿ ನಗುತ್ತಾ ಪ್ರೀತಿಯಿಂದ ______________ಕೊಡುತ್ತಾಳೆ.

೨. ಅವರ __________ ಸಮೇತ ವಿವರಿಸಿ ಬಿಡುತ್ತಾಳೆ.

೩. ಮಕ್ಕಳಿಂದ ಹಿಡಿದು ಮುದುಕರವರೆಗಿನ ________ ದೂರಮಾಡಿ ಬಿಡುತ್ತಾಳೆ.

೪. ಇದರ ಬಾಗಿಲು ಸದಾ __________ ಇರುತ್ತದೆ.

೫. 'ಮಲ್ಲಜ್ಜಿಯ ಮಳಿಗೆ' ನನಗೆ ಒಂದು ____________ ಇದ್ದಂತೆ.

## ವ್ಯಾಕರಣ ಮಾಹಿತಿ

©KTBS Not to be republished

### ಅ. ಪತ್ರಲೇಖನ

ನಾವು ಸಾಮಾನ್ಯವಾಗಿ ಇನ್ನೊಬ್ಬರ ಜೊತೆ ಮಾತಿನ ಮೂಲಕ ವಿಷಯ, ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತೇವೆ. ಅವರು ನೇರವಾಗಿ ಸಂಪರ್ಕಕ್ಕೆ ಸಿಗದಿದ್ದಾಗ ಅಂತಹ ಸಂದರ್ಭಗಳಲ್ಲಿ ಬರೆವಣಿಗೆಯ ಮೂಲಕ ಅವರಿಗೆ ವಿಷಯವನ್ನು ತಿಳಿಸುತ್ತೇವೆ.

ಹೀಗೆ ಸಂಗತಿ, ವಿಚಾರ, ವಿಷಯಗಳನ್ನು ಇನ್ನೊಬ್ಬರ ಜೊತೆ ಬರೆವಣಿಗೆಯ ಮೂಲಕ ಹಂಚಿಕೊಳ್ಳುವುದು ಇಲ್ಲವೇ ತಿಳಿಸುವುದನ್ನು 'ಪತ್ರಲೇಖನ' ಎನ್ನುತ್ತೇವೆ. ಪತ್ರ ಎಂದರೆ ಕಾಗದ, ಓಲೆ, ಬರೆದ ಕಾಗದ ಎಂಬ ಅರ್ಥಗಳಿವೆ.

**೧. ಪತ್ರದ ಕೆಲವು ವಿಧಗಳು**

೧. ವೈಯಕ್ತಿಕ ಪತ್ರಗಳು.

೨. ಮನವಿ ಪತ್ರಗಳು

೩. ಆಡಳಿತ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು.

೪. ಜಾಹೀರಾತು ಮತ್ತು ಪ್ರಕಟಣೆ ಪತ್ರಗಳು.

೫. ವಿವಿಧ ಸಂಗ್ರಹಣೆ ಹಾಗೂ ಪತ್ರಿಕಾವರದಿ ಪತ್ರಗಳು.

## ೨. ಪತ್ರ ಬರೆಯುವಾಗ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು:

೧. ಪತ್ರದ ಮೇಲ್ಭಾಗದಲ್ಲಿ ದಿನಾಂಕ, ಹೆಸರು, ವಿಳಾಸವಿರಬೇಕು.

೨. ಸೂಕ್ತವಾದ ಸಂಬೋಧನೆ ಬರೆಯಬೇಕು.

೩. ವಿಷಯಗಳನ್ನು ಅರ್ಥವತ್ತಾಗಿ ಸರಳ ಶೈಲಿಯಲ್ಲಿ ಬರೆಯಬೇಕು.

೪. ಔಚಿತ್ಯಪೂರ್ಣವಾದ ಕೋರಿಕೆ, ಹಾರೈಕೆ ಇರಬೇಕು. ಉದಾ: ಇತಿ ನಮಸ್ಕಾರ, ಇತಿ ಆಶೀರ್ವಾದ.

೫. ಪತ್ರದ ಕೊನೆಯಲ್ಲಿ ಸಹಿ ಹಾಕಬೇಕು.

೬. ಕವರ್ ಮತ್ತು ಪತ್ರದ ಮೇಲ್ಭಾಗದಲ್ಲಿ ಕಳುಹಿಸುವವರ ವಿಳಾಸವನ್ನು ಚಿಕ್ಕದಾಗಿ ಬರೆಯಬೇಕು.

೭. ಕವರಿನ ಇನ್ನೊಂದು ಬದಿಯಲ್ಲಿ ಕಳುಹಿಸಬೇಕಾದ ವಿಳಾಸವನ್ನು ಚಿಕ್ಕದಾಗಿ ಬರೆಯಬೇಕು.

೮. ಬರೆವಣಿಗೆಯು ಅಂದವಾದ ಶೈಲಿಯಲ್ಲಿ, ಆಕರ್ಷಕವಾಗಿ ಇರಬೇಕು.

## ೩. ಸಂಬೋಧನೆಗಳು:

| | | |
|---|---|---|
| ತಂದೆಗೆ | – | ತೀರ್ಥರೂಪ |
| ತಾಯಿಗೆ | – | ಮಾತೃಶ್ರೀ |
| ಗುರುಗಳಿಗೆ | – | ಪೂಜ್ಯ |
| ಗೆಳೆಯ/ಗೆಳತಿಗೆ | – | ಆತ್ಮೀಯ, ನಲ್ಮೆಯ, ಪ್ರೀತಿಯ |
| ಚಿಕ್ಕಪ್ಪ ದೊಡ್ಡಪ್ಪನಿಗೆ | – | ತೀರ್ಥರೂಪ ಸಮಾನ |
| ಚಿಕ್ಕಮ್ಮ ದೊಡ್ಡಮ್ಮ | – | ಮಾತೃಶ್ರೀ ಸಮಾನ |
| ಕಿರಿಯರಿಗೆ | – | ಚಿರಂಜೀವಿ |

ಹೀಗೆ ವೈಯಕ್ತಿಕ ಪತ್ರಗಳನ್ನು ಬರೆಯುವಾಗ ಬೇರೆ ಬೇರೆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಸಂಬೋಧನೆಗಳನ್ನು ಬಳಸುತ್ತೇವೆ. ಇದು ನಾವು ಅವರಿಗೆ ತೋರಿಸುವ ಗೌರವವನ್ನು ಸೂಚಿಸುತ್ತದೆ.

©KTBS Not to be republished

## ಭಾಷಾಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಮಾನಾರ್ಥಕ ಪದಗಳನ್ನು ಬರೆಯಿರಿ.

ಪತ್ರ, ಉಚಿತ, ತುರ್ತು, ಶುಲ್ಕ, ತೀರ್ಪು.

೨. ಯಾವುದಾದರೂ ನಾಲ್ಕು ವಿಧದ ಪತ್ರಗಳನ್ನು ಹೆಸರಿಸಿರಿ.

### ಆ. ಓದಿಗೆ ಮನ್ನಣೆ

೧. ಸಮಾಜ ಸುಧಾರಕರ ಸಾಧನೆಗಳ ಕುರಿತು ಓದಿರಿ.

೨. ನಿಮ್ಮ ಊರಿನ ಸಮಾಜ ಸೇವಕರ ಕಾರ್ಯಗಳ ಬಗ್ಗೆ ತಿಳಿಯಿರಿ.

೩. ವಿವಿಧ ಪುಸ್ತಕ ಮಳಿಗೆಗಳ ಪರಿಚಯ ಮಾಡಿಕೊಳ್ಳಿರಿ.

೪. ಮಾಲ್‌ಗಳಲ್ಲಿ ದೊರಕುವ ವಸ್ತುಗಳ ಬಗ್ಗೆ ಅರಿತುಕೊಳ್ಳಿರಿ.

### ಇ. ಶುಭನುಡಿ

೧. ಜನಸೇವೆಯಿಂದ ಜನಮನ್ನಣೆ ದೊರಕುತ್ತದೆ.

೨. ವೃತ್ತಿಯೊಂದಿಗೆ ಸೇವೆಯೂ ಉತ್ತಮವಾದ ಪ್ರವೃತ್ತಿ.

೩. ಎಲ್ಲರೊಳಗೊಂದಾಗುವ ಬಾಳು ಆದರ್ಶದ ಬಾಳು.

೪. ಅನುಭವದ ನುಡಿಗಳು ಬದುಕಿಗೆ ದಾರಿದೀಪ.

★★★★★

©KTBS Not to be republished

# ೮. ಧೀರ ಸೇನಾನಿ

L9K6S3

ಬಸವರಾಜ ಹಡ್ಲಿ –

**ಪ್ರವೇಶ :** ನಮ್ಮ ದೇಶ ತ್ಯಾಗ, ಬಲಿದಾನಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿ ಪುರಾಣ ಕಾಲದಲ್ಲಿ ಮೊದಲ್ಗೊಂಡು ಕಾರ್ಗಿಲ್ ಹೋರಾಟದವರೆಗೂ ಅನೇಕಾನೇಕ ಯುದ್ಧಗಳು ನಿರಂತರವಾಗಿ ನಡೆದಿವೆ. ಜಾಗತಿಕ ಮಹಾಯುದ್ಧಗಳಲ್ಲೂ ಭಾರತೀಯರು ಸಾಹಸವನ್ನು ಮೆರೆದಿದ್ದಾರೆ. ದೇಶದ ರಕ್ಷಣೆಯ ಮಾತು ಬಂದಾಗ ಜೀವದ ಹಂಗು ತೊರೆದು ಹೋರಾಡಿದ ಅದೆಷ್ಟೋ ಮಹನೀಯರು ನಮ್ಮ ಕಣ್ಣಮುಂದೆ ಹಾದು ಹೋಗುತ್ತಾರೆ. ಅಂತಹವರು ನಮ್ಮ ಪಾಲಿಗೆ ಪ್ರಾತಃಸ್ಮರಣೀಯರು.



ಭಾರತದಲ್ಲಿ ಅನೇಕ ಜನ ಮೇಧಾವಿಗಳು, ವೀರಯೋಧರು, ವಿಜ್ಞಾನಿಗಳು, ಸಾಧಕರು ಜನ್ಮ ತಾಳಿದ್ದಾರೆ. ಅಂತಹ ಸಾಧಕರ ಸಾಲಿನಲ್ಲಿ ಧೀರ ಸೇನಾನಿ ಮಹಾದಂಡನಾಯಕ ಜನರಲ್ ಜಿ.ಜಿ.ಬೇವೂರರು ಒಬ್ಬರು.

ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಬೇವೂರ ಗ್ರಾಮದವರಾದ ಸರ್. ಗುರುನಾಥ ರಾವ್ ಹಾಗೂ ರುಕ್ಮಿಣಿಬಾಯಿಯವರ ಪುತ್ರನೇ ಗೋಪಾಲರಾವ್. ಇವರು ದಿನಾಂಕ ೧೧-೦೮-೧೯೧೬ ರಂದು ಜನಿಸಿದರು. ತಂದೆಯ ಮಾರ್ಗದರ್ಶನ ತಾಯಿಯ ದೇಶಾಭಿಮಾನಿ ಭಾವನೆಗಳೊಂದಿಗೆ ಗೋಪಾಲರಾಯರು ಬೆಳೆದರು. ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ ಮತ್ತು ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಸೈನಿಕ ಶಿಕ್ಷಣ ಪಡೆದರು. ಶಿಸ್ತು, ಶಿಕ್ಷಣ, ಕಠಿಣ ಶ್ರಮಗಳಿಂದ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ 'ಗೌರವಖಡ್ಗ' ಮತ್ತು ಚಿನ್ನದ ಪದಕಗಳನ್ನು ಪಡೆದುಕೊಂಡ ಕೀರ್ತಿ ಅವರದು. ೧೯೩೭ರಲ್ಲಿ ಬೇವೂರರು ಭಾರತೀಯ ಸೇನಾಪಡೆ ಸೇರಿದರು.

ಜನರಲ್ ಜಿ.ಜಿ.ಬೇವೂರರೊಳಗಿನ ನಿಜವಾದ ಯೋಧನನ್ನು ದೇಶ ಗುರುತಿಸಿದ್ದು ಬಾಂಗ್ಲಾ ಯುದ್ಧದಲ್ಲಿ. ೧೯೭೧ರಲ್ಲಿ ಬಾಂಗ್ಲಾದೇಶ ಹಾಗೂ ಪಾಕಿಸ್ತಾನಗಳ ನಡುವೆ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಪಾಕ್ ಸೈನಿಕರು ಮಾನವ ಹಕ್ಕುಗಳನ್ನು ಉಲ್ಲಂಘಿಸಿದರು. ಬಾಂಗ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ಬಾಂಗ್ಲಾದೇಶಕ್ಕೆ ಭಾರತದ ಸೇನೆ ಸಹಕರಿಸಿತು. ಆಗ ಬೇವೂರರು

©KTBS Not to be republished



ಪಶ್ಚಿಮ ಪಾಕಿಸ್ತಾನದ ಕಡೆಗೆ ನುಗ್ಗಿದರು. ಸೇನಾ ತುಕಡಿಯ ಮುಖ್ಯಸ್ಥರಾಗಿ ರಾಜಸ್ಥಾನ ಮತ್ತು ಕಚ್ಛ್‌ದದುರ್ಗಮ ಪ್ರದೇಶಗಳಲ್ಲಿ ಸಾವಿರಾರು ಚದರಮೈಲು ಪಾಕ್ ನೆಲವನ್ನು ಆಕ್ರಮಿಸಿಕೊಂಡರು. ಈ ಸಂದರ್ಭದಲ್ಲಿ ಸೇನಾ ಮಹಾದಂಡನಾಯಕರಾಗಿದ್ದ ಫೀಲ್ಡ್ ಮಾರ್ಷಲ್ ಮಾಣಿಕ ಶಹಾ ಅವರು ಬೇವೂರರರನ್ನು ಅಭಿಮಾನದಿಂದ ಬಿಗಿದಪ್ಪಿ ಪ್ರಶಂಸಿಸಿದರು. ಬೇವೂರರ ಸಾಹಸ ದೇಶದಲ್ಲಿ ಮನೆಮಾತಾಯಿತು. ಅವರು ತೋರಿದ ಶೌರ್ಯ ಸಾಹಸಕ್ಕೆ ರಾಷ್ಟ್ರಮಟ್ಟದ ಗೌರವವು ದೊರೆಯಿತು.

ಕಾಲೇಜು ವಿದ್ಯಾರ್ಥಿಗಳಿಗೆ ಎನ್.ಸಿ.ಸಿ.ಯು ಕಲಿಕೆಯ ಅಂಗವಾದಾಗ ಬೇವೂರರು ಅದರ ಪ್ರಥಮ ನಿರ್ದೇಶಕರಾದರು. "ಯುವಜನರು ನಾಳೆಯ ದೇಶ ರಕ್ಷಕರಾಗಬೇಕು" ಎಂಬುದು ಅವರ ಬಯಕೆಯಾಗಿತ್ತು. ಅದಕ್ಕಾಗಿ ಅವರು ಹಗಲಿರುಳೆನ್ನದೆ ಶ್ರಮಿಸಿದರು. ೧೯೭೩ ಜನವರಿ ೧೫ರಂದು ಗೋಪಾಲರಾವ್ ಗುರುನಾಥರಾವ್ ಬೇವೂರರು ಭಾರತದ ಭೂಸೇನೆಯ ಒಂಬತ್ತನೆಯ ಮಹಾದಂಡನಾಯಕರಾದರು.

ಜನರಲ್ ಜಿ.ಜಿ.ಬೇವೂರರ ಕರ್ತವ್ಯನಿಷ್ಠೆ, ದಕ್ಷ ಆಡಳಿತ ಕಂಡು ಭಾರತ ಸರ್ಕಾರವು ಅವರಿಗೆ 'ಪದ್ಮಭೂಷಣ ಪ್ರಶಸ್ತಿ' ಹಾಗೂ ಪರಮ ವಿಶಿಷ್ಟ ಸೇವಾಪದಕವನ್ನು ಕೊಟ್ಟು ಗೌರವಿಸಿತು. ಮುಂದೆ ಡಾರ್ಜಿಲಿಂಗ್‌ನಲ್ಲಿ ಕಟ್ಟಿಸಿದ ಯುದ್ಧ ಸ್ಮಾರಕ ಭವನಕ್ಕೆ ಜನರಲ್ ಜಿ.ಜಿ.ಬೇವೂರರ ಹೆಸರಿಡಲಾಯಿತು.

ಒಮ್ಮೆ ಬೇವೂರಿನ ಆದರ್ಶ ವಿದ್ಯಾವರ್ಧಕ ಸಂಘಕ್ಕೆ ಜನರಲ್ ಜಿ.ಜಿ.ಬೇವೂರರು ಅತಿಥಿಗಳಾಗಿ ಆಗಮಿಸಿದ್ದರು. ಜಿಲ್ಲಾಧಿಕಾರಿಯವರು ಅವರ ರಕ್ಷಣೆಯ ಜವಾಬ್ದಾರಿಯನ್ನು ಅತ್ಯುತ್ತಮ ರೀತಿಯಲ್ಲಿ ಮಾಡಿದ್ದರು. ಗ್ರಾಮದ ಬೀದಿಯಲ್ಲಿ ಮೆರವಣಿಗೆ ಮಾಡಲೆಂದು ಅಲಂಕೃತ ಜೀಪೊಂದನ್ನು

©KTBS Not to be republished

ತರಿಸಿದ್ದರು. ಅದರ ಸುತ್ತ ಬಂದೂಕುಧಾರಿಗಳಾದ ಪೋಲೀಸರನ್ನು ಕಾವಲಿರಿಸಿದ್ದರು. ಅದನ್ನು ಕಂಡ ಜನರಲ್ ಜಿ.ಜಿ.ಬೇವೂರರು, "ನಾನೊಬ್ಬ ಸೈನಿಕ. ನನಗೇಕೆ ರಕ್ಷಣೆ? ಇದು ನನ್ನ ಊರು, ಇವರೆಲ್ಲ ನನ್ನ ಜನ" ಎಂದರು. ಜೀಪಿನಲ್ಲಿ ಕುಳಿತುಕೊಳ್ಳದೆ ತಮ್ಮ ಹೆಂಡತಿ ರಾಧಿಕಾಬಾಯಿಯವರೊಡನೆ ರೈತನ ಗಾಡಿಯೊಂದರಲ್ಲಿ ಹತ್ತಿ ಕುಳಿತರು. ಅನಂತರ ತಮ್ಮ ಊರಿನ ಜನರನ್ನು ಮಾತನಾಡಿಸುತ್ತ ಗ್ರಾಮದ ಓಣಿಗಳಲ್ಲಿ ನಡೆದುಕೊಂಡು ಹೋದರು. ಇದು ಅವರ ಸಜ್ಜನಿಕೆಯನ್ನು ತಿಳಿಸಿಕೊಡುತ್ತದೆ.

'ಮಾತಿಗಿಂತ ಕೃತಿ ಲೇಸು' ಎಂಬ ತತ್ತ್ವ ಜನರಲ್ ಬೇವೂರ ಅವರದು. ನಿವೃತ್ತಿಯ ಅನಂತರವೂ ಬೇವೂರರ ಸೇವೆಯು ಭಾರತ ಸರಕಾರಕ್ಕೆ ಆವಶ್ಯವಾಯಿತು. ಅವರ ಆಡಳಿತ ವೈಖರಿಯನ್ನು ಗುರುತಿಸಿ ಭಾರತ ಸರಕಾರವು ಡೆನ್ಮಾರ್ಕಿನ ರಾಯಭಾರಿಯನ್ನಾಗಿ ಎರಡು ವರ್ಷದ ಅವಧಿಗೆ ನೇಮಿಸಿತು.

ಬೇವೂರಿನ ವರಪುತ್ರ ಭಾರತದ ಒಂಬತ್ತನೆಯ ಮಹಾದಂಡನಾಯಕರಾಗಿ ಸೇವೆ ಸಲ್ಲಿಸಿದ ಸಹೃದಯಿಯಾದ ಜಿ.ಜಿ.ಬೇವೂರರು ೧೯೮೯ ಅಕ್ಟೋಬರ್ ೨೪ರಂದು ಇಹಲೋಕ ತ್ಯಜಿಸಿದರು. ಅವರ ಸಾಹಸದ ಗಾಥೆಗಳು ಭಾರತದ ಮಹಾದಂಡನಾಯಕರ ಚರಿತ್ರೆಯಲ್ಲಿ ಅಮರವಾಗಿ ಉಳಿದಿವೆ.

©KTBS Not to be republished

**ಕ್ಷೇತ್ರ** : ಬರೆಯುವುದು

**ಸಾಮರ್ಥ್ಯ** : ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರೆವಣಿಗೆಯಲ್ಲಿ ಬಳಸುವುದು.

## ಕೃತಿಕಾರರ ಪರಿಚಯ



**ಡಾ. ಬಸವರಾಜ ಹಡ್ಲಿ**ಯವರು ೦೧-೦೬-೧೯೫೫ ರಂದು **ಬಾಗಲಕೋಟೆ ಜಿಲ್ಲೆಯ ಬೇವೂರಿನಲ್ಲಿ** ಜನಿಸಿದರು. ತಂದೆ ಚನ್ನಪ್ಪ, ತಾಯಿ ಚನ್ನವ್ವ. ಲೇಖಕರು ೧೯೯೨ರಲ್ಲಿ **ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳ** ಕುರಿತ ಮಹಾಪ್ರಬಂಧಕ್ಕೆ **ಡಾಕ್ಟರೇಟ್** ಪದವಿ ಪಡೆದಿದ್ದಾರೆ. ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಕಲಾ ಮಹಾವಿದ್ಯಾಲಯದಲ್ಲಿ ಕಳೆದ ೨೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. **ಬೇವೂರಿನ ಅಪರೂಪದವರು. ಅಕ್ಕನ ಬಳಗ** ಮುಂತಾದವು ಅವರ ಕೃತಿಗಳು. ಪ್ರಸ್ತುತ ಪಾಠವನ್ನು ಅವರ **'ವೀರ ಸೇನಾನಿ ಜನರಲ್ ಜಿ.ಜಿ.ಬೇವೂರ'** ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಅಲಂಕೃತ – ಅಲಂಕಾರ ಮಾಡಿದ, ಸಿಂಗರಿಸಿದ.

ಉತ್ತುಂಗ – ಶ್ರೇಷ್ಠ

ಕಾವಲಿರಿಸು – ರಕ್ಷಿಸು

ಕೃತಿ – ಕೆಲಸ

ಗಾಡಿ – ಚಕ್ಕಡಿ, ಬಂಡಿ.

ಗಾಥೆ – ಕತೆ, ಘಟನೆ.

ಗ್ರಾಮದ ಓಣಿ – ಹಳ್ಳಿಯ ಬೀದಿ.

ಜನ್ಮತಾಳು – ಹುಟ್ಟು, ಜನಿಸು.

ದುರ್ಗಮ – ಹೋಗಲು ಅಸಾಧ್ಯವಾದ.

ಫೀಲ್ಡ್ – ಭೂಭಾಗ.

ಫೀಲ್ಡ್ ಮಾರ್ಷಲ್ – ಭೂಸೇನೆಯಲ್ಲಿ ವಿಶೇಷ ಪರಿಣತಿಯನ್ನು ಪಡೆದವರಿಗೆ ಕೊಡುವ ಅತ್ಯುನ್ನತ ಪದವಿ.

ಮಹಾದಂಡನಾಯಕರು – ಸೇನಾ ವರಿಷ್ಠ, ಸೈನ್ಯದ ಅತಿ ಹಿರಿಯ ಅಧಿಕಾರಿ.

ಮಾರ್ಷಲ್ – ಪರಿಣತ.

ನೇತೃತ್ವ – ಮುಂದಾಳತ್ವ, ಹಿರಿತನ.

ಲೇಸು – ಒಪ್ಪಿತ. ಒಳ್ಳೆಯದು.

ಸಜ್ಜನಿಕೆ – ಒಳ್ಳೆಯತನ.

©KTBS Not to be republished

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಬೇವೂರರು ಯಾವಾಗ ಜನಿಸಿದರು?

೨. ಬೇವೂರರ ತಂದೆ ತಾಯಿಯರ ಹೆಸರೇನು?

೩. ಗೋಪಾಲರಾಯರ ಸ್ವಂತ ಊರು ಯಾವುದು?

೪. ಬೇವೂರರನ್ನು ಬಿಗಿದಪ್ಪಿ ಪ್ರಶಂಸಿಸಿದವರು ಯಾರು?

೫. ಭಾರತ ಸರಕಾರವು ಬೇವೂರರನ್ನು ಎರಡು ವರ್ಷದ ಅವಧಿಗೆ ಯಾವ ಕಾರ್ಯಕ್ಕೆ ನೇಮಿಸಿತು?

## ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಗೋಪಾಲರಾಯರು ಎಲ್ಲಿ ಸೈನಿಕ ಶಿಕ್ಷಣ ಪಡೆದರು?

೨. ಬೇವೂರರ ನೇತೃತ್ವದ ಸೈನಿಕ ತುಕಡಿಯ ಸಾಹಸವನ್ನು ವಿವರಿಸಿರಿ?

೩. ಬೇವೂರರ ಸಜ್ಜನಿಕೆಯನ್ನು ಉದಾಹರಣೆಯೊಂದಿಗೆ ತಿಳಿಸಿರಿ.

೪. ನಿವೃತ್ತಿ ನಂತರವೂ ಬೇವೂರರ ಸೇವೆ ಭಾರತ ಸರಕಾರಕ್ಕೆ ಆವಶ್ಯಕವೆನಿಸಿದ ಸಂದರ್ಭ ಯಾವುದು?

## ಇ. ಬಿಟ್ಟ ಸ್ಥಳಗಳನ್ನು ತುಂಬಿರಿ.

೧. ಗೋಪಾಲರಾಯರ ತಂದೆ ____________ ತಾಯಿ ______________

೨. ಗೋಪಾಲರಾಯರು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ _____________ ಖಡ್ಗ ಮತ್ತು ____________ ಪದಕ ಪಡೆದಿದ್ದರು.

೩. "ಯುವಜನರು ನಾಳೆಯ ____________ ರಾಗಬೇಕು" ಎಂಬುದು ಅವರ ಬಯಕೆಯಾಗಿತ್ತು.

೪. ಡಾರ್ಜಲಿಂಗ್‌ನಲ್ಲಿ ಕಟ್ಟಿಸಿದ _______________ ಭವನಕ್ಕೆ ಜಿ.ಜಿ. ಬೇವೂರರ ಹೆಸರಿಟ್ಟಿದ್ದಾರೆ.

೫. "ನಾನೊಬ್ಬ ____________ ನನಗೇಕೆ ರಕ್ಷಣೆ? ಇದು ನನ್ನ ಊರು. ಇವರೆಲ್ಲ ನನ್ನ ____________" ಎಂದರು.

©KTBS Not to be republished

# ವ್ಯಾಕರಣ ಮಾಹಿತಿ

## ಅ. ಸಮಾನಾರ್ಥಕ ಪದಗಳು

ಒಂದು ವ್ಯಕ್ತಿ, ಪ್ರಾಣಿ, ವಸ್ತು ಇತ್ಯಾದಿಗಳಿಗೆ ಅದೇ ಅರ್ಥವನ್ನು ಸೂಚಿಸುವ ಹಲವಾರು ಇತರ ಪದಗಳು ಇರುತ್ತವೆ. ಹೀಗೆ ಒಂದು ಶಬ್ದಕ್ಕೆ ಸಮಾನವಾದ ಅರ್ಥವನ್ನು ಕೊಡುವ ಮತ್ತೊಂದು ಶಬ್ದಕ್ಕೆ ಸಮಾನಾರ್ಥಕ ಪದ ಎನ್ನುವರು.

ಉದಾ:- ಕಾಯಕ=ಕೆಲಸ, ಉದ್ಯೋಗ, ಕಸಬು, ಊಳಿಗ, ದುಡಿಮೆ.

ತಂಡ=ಪಕ್ಷ, ಬಣ, ಗುಂಪು, ಪಡೆ, ದಳ, ಹಿಂಡು, ಸಮೂಹ.

ಪದ್ಮ=ಕಮಲ, ತಾವರೆ, ಅರವಿಂದ, ವನಜ, ಸರೋಜ.

ಭಾಷೆ=ಮಾತು, ನುಡಿ, ವಚನ, ಆಣೆ, ಪ್ರತಿಜ್ಞೆ, ನಂಬಿಗೆಯ ನುಡಿ, ಬೆಂಬಲದ ವಚನ.

## ಆ. ನಾನಾರ್ಥಕ ಪದಗಳು

ಒಂದು ಶಬ್ದವು ಇತರ ಹಲವಾರು ಅರ್ಥಗಳನ್ನು ಸೂಚಿಸುವಂತಿದ್ದರೆ ಅದನ್ನು ನಾನಾರ್ಥಕ ಪದವೆಂದು ಕರೆಯುವರು.

**ಉದಾ:** ದಂಡ = ೧. ಶಿಕ್ಷೆ, ೨. ಕೋಲು, ೩. ಸೈನ್ಯ

ದಳ = ೧. ಸೈನ್ಯ, ೨. ಎಲೆ, ೩. ಗುಂಪು

ಅಂಗ = ೧. ಭಾಗ, ೨. ದೇಹ

ಮಡಿ = ೧. ಸಾಯಿ, ೨. ಶುದ್ಧವಾದದ್ದು

## ಭಾಷಾಭ್ಯಾಸ

## ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಮಾನಾರ್ಥಕ ಪದ ಎಂದರೇನು?

೨. ನಾನಾರ್ಥಕ ಪದ ಎಂದರೇನು?

೩. ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.

**ಮಾದರಿ :** ಅಡಿ = ತಳ, ಪಾದ, ಅಳತೆ

ಅರಿ, ಕಾಡು, ಮಡಿ, ನುಡಿ. :

©KTBS Not to be republished

## ಆ. ಓದಿಗೆ ಮನ್ನಣೆ

೧.ದೇಶಕ್ಕಾಗಿ ಹೋರಾಡಿದ ಗಣ್ಯರ ಜೀವನ ಚರಿತ್ರೆ ಸಂಗ್ರಹಿಸಿ ಓದಿರಿ.

೨.ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

## ಇ. ಶುಭನುಡಿ

೧.ದೇಶಕ್ಕಾಗಿ ದುಡಿಯೋಣ, ದೇಶಕ್ಕಾಗಿ ಬಾಳೋಣ.

೨.ದೇಶ, ಭಾಷೆ, ಸಂಸ್ಕೃತಿಗಳ ಬಗ್ಗೆ ಸದಾ ಅಭಿಮಾನವಿರಲಿ.

೩.ನಮ್ಮ ದೇಶ ಭಾರತ, ಹೇಳಿರೆಲ್ಲ ಹಿಗ್ಗುತ.

★★★★★

# ೯. ಸಂಗೊಳ್ಳಿ ರಾಯಣ್ಣ

T5J5P5

ಎಚ್.ಎಸ್. ಸತ್ಯನಾರಾಯಣ –

**ಪ್ರವೇಶ :** ಇತಿಹಾಸದಿಂದ ನಾವು ಕಲಿಯಬೇಕಿರುವುದು ಬಹಳಷ್ಟಿದೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ನಾಡಿಗಾಗಿ ಹೋರಾಡಿ, ಮಡಿದ ಅನೇಕ ವೀರರ ಸಾಹಸ, ತ್ಯಾಗ, ಛಲ, ಸಂಕಲ್ಪಶಕ್ತಿ ಮುಂತಾದ ಗುಣಗಳು ನಮಗೆ ದಾರಿದೀಪವಾಗಿವೆ. ಸಾಮಾನ್ಯರಲ್ಲೂ ಪ್ರಕಟವಾಗಬಹುದಾದ ಅಸಾಮಾನ್ಯ ದೇಶಭಕ್ತಿ, ನಿಷ್ಠೆ, ಪರಾಕ್ರಮಗಳು ರಾಜ–ಮಹಾರಾಜರಲ್ಲದವರನ್ನೂ ಸದಾ ಹೆಮ್ಮೆಯಿಂದ ಸ್ಮರಿಸುವಂತೆ ಮಾಡಿರುವುದನ್ನು ನಮ್ಮ ಇತಿಹಾಸದ ಪುಟಗಳು ಸಾರುತ್ತಿವೆ. ನಾಡು–ನುಡಿಯ ರಕ್ಷಣೆಯ ಸಂದರ್ಭ ಎದುರಾದಾಗ ಶ್ರೀಸಾಮಾನ್ಯರು ಯಾವ ಜವಾಬ್ದಾರಿಯನ್ನು ಹೊರಬೇಕೆಂಬುದಕ್ಕೆ ಕನ್ನಡ ನಾಡಿನ ವೀರಾಗ್ರಣಿ ಎನಿಸಿದ ಸಂಗೊಳ್ಳಿ ರಾಯಣ್ಣನಂತಹ ದೇಶಪ್ರೇಮಿ ನಮಗೆ ಸ್ಫೂರ್ತಿಶಕ್ತಿಯನ್ನು ನಿರಂತರವಾಗಿ ತುಂಬುತ್ತಲೇ ಇರುತ್ತಾರೆ. ಹೊಸಕಾಲದ ಸವಾಲುಗಳನ್ನೆದುರಿಸುವ ಮಕ್ಕಳಿಗೆ ರಾಯಣ್ಣನ ಕಥೆ ಒದಗಿಸುವ ಪ್ರೇರಣೆ ಅಪಾರವಾದುದೆಂಬ ಆಶಯ ಇಲ್ಲಿದೆ.

© KTBS Not to be republished



ಕರ್ನಾಟಕ ಜನರಿಗೆ ಕಿತ್ತೂರಿನ ಹೆಸರನ್ನು ಕೇಳಿದಾಕ್ಷಣ ನೆನಪಿಗೆ ಬರುವ ಹೆಸರುಗಳೆಂದರೆ ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಎಂಬುವು. ಇದರ ಜೊತೆಗೆ ಸ್ವಾಮಿಕಾರ್ಯಕ್ಕೆ ಜೀವತೆತ್ತ ವೀರಾಗ್ರಣಿ ರಾಯಣ್ಣನ ಬದುಕಿನ ಚಿತ್ರ ಸ್ಮೃತಿಪಟಲದಲ್ಲಿ ತೇಲಿಬರುತ್ತದೆ. ನಾಡ ಉಳಿವಿಗಾಗಿ ಹೋರಾಡುವುದು ಕೇವಲ ರಾಜರ ಕೆಲಸವಲ್ಲ. ಅದು ಸಾಮಾನ್ಯ ಜನತೆಯ ಆದ್ಯ ಕರ್ತವ್ಯವೂ ಹೌದು ಎಂಬುದನ್ನು ತೋರಿಸಿಕೊಟ್ಟ ಕಲಿ ಸಂಗೊಳ್ಳಿ ರಾಯಣ್ಣ. ಕಿತ್ತೂರು ಸಂಸ್ಥಾನವು ಬ್ರಿಟಿಷರ ವಶವಾದ ನಂತರ ಸ್ವಾತಂತ್ರ್ಯಪ್ರಿಯರೆಲ್ಲ ಸಂಗೊಳ್ಳಿ ರಾಯಣ್ಣನ ಮುಂಚೂಣಿ ನಾಯಕತ್ವದಲ್ಲಿ ಜೊತೆಸೇರಿ, ಹೋರಾಟ ನಡೆಸಿ ಅವರನ್ನು ಹೊಡೆದೋಡಿಸುವ ಸಾಹಸ ಮಾಡಿದರು. ಇದರಿಂದಾಗಿ ಸಂಗೊಳ್ಳಿ ರಾಯಣ್ಣನ ನೆನಪು ಇತಿಹಾಸದ ಪುಟದಲ್ಲಿ ಉಳಿಯುವಂತಾಯ್ತು.

ಸಂಗೊಳ್ಳಿ ರಾಯಣ್ಣನ ಬದುಕಿನ ವಿವರಗಳು ಇತಿಹಾಸದಲ್ಲಿ ದಾಖಲಾಗಿರುವುದಕ್ಕಿಂತ ಲಾವಣಿಯಂತಹ ಜಾನಪದ ಸಾಹಿತ್ಯದಲ್ಲಿ ಸೇರಿಹೋಗಿರುವುದೇ ಹೆಚ್ಚು. ರಾಯಣ್ಣ ಲಾವಣಿಗಳಲ್ಲಿ

ಉಳಿದಿರುವುದು ಅವನ ಜನಪ್ರಿಯತೆಗೆ ಸಾಕ್ಷಿಯನ್ನೊದಗಿಸುತ್ತದೆ. ರಾಯಣ್ಣನ ಊರು ಸಂಗೊಳ್ಳಿ. ಇದು ಬೆಳಗಾವಿ ಜಿಲ್ಲೆಯ ಸಂಪಗಾವಿ ತಾಲ್ಲೂಕಿನ ಒಂದು ಪುಟ್ಟಹಳ್ಳಿ, ಸಂಗೊಳ್ಳಿಯ ಹೊರತಾಗಿ ರಾಯಣ್ಣನನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂಬಷ್ಟು ಎರಡೂ ಹೆಸರುಗಳು ಬೆರೆತುಹೋಗಿವೆ. ರಾಯಣ್ಣ ಸಂಗೊಳ್ಳಿಯಲ್ಲಿ ೧೫ ಆಗಸ್ಟ್ ೧೭೯೮ ರಂದು ಜನಿಸಿದನು. ಆಗಸ್ಟ್ ೧೫ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹಬ್ಬದ ದಿನ. ರಾಯಣ್ಣನ ತಂದೆಯ ಹೆಸರು ಭರಮಪ್ಪ, ತಾಯಿ ಶ್ರೀಮತಿ ಕೆಂಚವ್ವ. ಅಜ್ಜ–ಮುತ್ತಜ್ಜರಿಂದ ವೀರಪರಂಪರೆ ಹೊಂದಿದ್ದ ಮನೆತನ ಇವರದು. ರಾಯಣ್ಣನ ತಾತನಾದ ರಾಗಪ್ಪ ಎಂಬುವವರು ಅಂದಿನ ಕಿತ್ತೂರು ದೊರೆ ವೀರಪ್ಪ ದೇಸಾಯಿಯಿಂದ 'ಸಾವಿರ ಒಂಟೆ ಸರದಾರ' ಎಂಬ ಬಿರುದನ್ನು ಪಡೆದಿದ್ದರು. 'ಚಿಣಗಿ ಕೋವಾಡ' ಯುದ್ಧದಲ್ಲಿ ತೋರಿದ ಅಪ್ರತಿಮ ಶೌರ್ಯದಿಂದ ರಾಯಣ್ಣನ ತಾತ ಈ ಬಿರುದನ್ನು ಪಡೆದಿದ್ದರು. ರಾಯಣ್ಣನಿಗೆ ಸಹಜವಾಗಿಯೇ ಯೋಧನೊಬ್ಬನಿಗಿರಬೇಕಾದ ಲಕ್ಷಣಗಳೆಲ್ಲವೂ ರಕ್ತಗತವಾಗಿ ಬಂದಿದ್ದವು.

ರಾಯಣ್ಣ ಕಿತ್ತೂರು ಸಂಸ್ಥಾನದ ಸಾಮಾನ್ಯ ಪ್ರಜೆಯಾಗಿದ್ದವನು. ಸಂಗೊಳ್ಳಿಗ್ರಾಮದ ತಳವಾರಿಯಾಗಿ ನೇಮಕಗೊಂಡವನು, ಹಲವಾರು, ದೇಶಭಕ್ತರೊಂದಿಗೆ ಬ್ರಿಟಿಷರ ವಿರುದ್ಧ ಅಹೋರಾತ್ರಿ ಹೋರಾಡಿದ್ದರಿಂದ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. ತಮ್ಮ ವಿರುದ್ಧ ಹೋರಾಡಿದನೆಂಬ ಕಾರಣಕ್ಕೆ ಬ್ರಿಟಿಷ್ ಸರ್ಕಾರ ರಾಯಣ್ಣನ ಮನೆತನಕ್ಕೆ ಸೇರಿದ್ದ ಭೂಮಿಯನ್ನು ವಶಪಡಿಸಿಕೊಂಡುಬಿಟ್ಟಿತು. ರಾಯಣ್ಣನಿಗೆ ಊರಿನ ಕುಲಕರ್ಣಿ ಬಾಳಪ್ಪನಿಗೆ ಇದ್ದುದಕ್ಕಿಂತ ಹೆಚ್ಚಿನ ಜಮೀನಿತ್ತು! ಬ್ರಿಟಿಷರ ಕೃತ್ಯದಿಂದ ರಾಯಣ್ಣ ಕ್ರೋಧಗೊಂಡನು. ಅಲ್ಲದೆ, ಕಿತ್ತೂರಿನ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸಬೇಕೆಂಬ ಇವನ ಉದಾತ್ತ ಧ್ಯೇಯವು ಇವನ ದೇಶಾಭಿಮಾನವನ್ನು ಬಲವಾಗಿ ಕೆರಳಿಸಿತು. ಸೈನ್ಯದ ಬಲವಿಲ್ಲದ ಆತ ಮನೋಬಲನ್ನೇ ನಂಬಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಲು ಶೂರಸಾಹಸಿಗಳ ಗುಂಪನ್ನು ಕಟ್ಟಿ ಬಂಡಾಯವೆಬ್ಬಿಸಿದನು. ಅನೇಕ ಯುವಕರು ರಾಯಣ್ಣನ ಬೆಂಬಲಕ್ಕಿದ್ದರು. ಇದಕ್ಕೆ ಮುಖ್ಯ ಕಾರಣ ರಾಯಣ್ಣನಲ್ಲಿದ್ದ ಅಚಲವಾದ ದೇಶಭಕ್ತಿ.

©KTBS Not to be republished

ಸಂಗೊಳ್ಳಿ ರಾಯಣ್ಣನ ಸಾಹಸಗಳು ಹಲವಾರು ಕಿತ್ತೂರಿನ ರಾಣಿ ಚೆನ್ನಮ್ಮನ ದತ್ತುಪುತ್ರನಾದ ಶಿವಲಿಂಗಪ್ಪನನ್ನು ಕಿತ್ತೂರಿನ ಸಿಂಹಾಸನದಲ್ಲಿ ಕುಳ್ಳಿರಿಸಲು ಮಾಡಿದ ಸಾಹಸ ಅತ್ಯಂತ ದೊಡ್ಡದು ಮತ್ತು ಮುಖ್ಯವಾದದ್ದು. ಆಗ ದತ್ತುಮಕ್ಕಳಿಗೆ ಹಕ್ಕಿಲ್ಲವೆಂಬ ಕಾನೂನನ್ನು ಬ್ರಿಟಿಷರು ಜಾರಿಗೊಳಿಸಿದ್ದರು. ಈ ಮೂಲಕ ಕಿತ್ತೂರಿನಲ್ಲಿ ಬ್ರಿಟಿಷ್ ಸರಕಾರದ ಅಸ್ತಿತ್ವವನ್ನು ಧಿಕ್ಕರಿಸುವ ಎದೆಗಾರಿಕೆಯನ್ನು ರಾಯಣ್ಣ ತೋರಿದನು. ಸೈನ್ಯ ಸಹಾಯವಿಲ್ಲದ ರಾಯಣ್ಣ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಗೆರಿಲ್ಲಾಯುದ್ಧ ಅಥವಾ ಕೂಟಯುದ್ಧವನ್ನು ರೂಪಿಸಿ ಅವರನ್ನು ಬೆಚ್ಚಿಬೀಳಿಸಿದ.

ಮೊದಲಿಗೆ, ಖಾನಾಪುರದಲ್ಲಿ ನೆಲಸಿದ್ದ ಮೇಜರ್ ಪಿಕ್ಕರಿಂಗ್‌ನ ಸೈನ್ಯದ ಮೇಲೆ ದಾಳಿ ನಡೆಸಿದನು. ಅಲ್ಲಿನ ಸರ್ಕಾರಿ ಕಛೇರಿಯನ್ನು ಸುಟ್ಟುಹಾಕುವ ಮೂಲಕ ಬ್ರಿಟಿಷ್ ಆಡಳಿತದ ವಿರುದ್ಧ ತನ್ನ ಪ್ರತಿಭಟನೆಯನ್ನು ಈ ಮೂಲಕ ದಾಖಲಿಸಿದ. ಹಗಲು ಹೊತ್ತನ್ನು ಕಾಡಿನಲ್ಲಿ

ಕಳೆದು, ರಾತ್ರಿವೇಳೆ ತನ್ನ ಅನೇಕ ಯೋಧರೊಡನೆ ಬ್ರಿಟಿಷರ ಬೀಡಿನ ಮೇಲೆ ಎರಗುತ್ತಿದ್ದ. ಈತನು ಗೆರಿಲ್ಲಾಯುದ್ಧ ತಂತ್ರದಲ್ಲಿ ಪಳಗಿದ್ದವನು. ಕಾಡಿನ ಮರಗಳ ಮೇಲೋ ಬಂಡೆಗಳ ಕೆಳಗೋ ಸಹಚರರೊಂದಿಗೆ ಅಡಗಿ ಕುಳಿತಿದ್ದು, ಅನಿರೀಕ್ಷಿತವಾಗಿ ಶತ್ರುಗಳ ಮೇಲೆ ಎರಗಿ ಅವರನ್ನು ಕಕ್ಕಾಬಿಕ್ಕಿಯಾಗಿಸಿ ಮಣಿಸುವುದು ಈ ಯುದ್ಧದ ಮುಖ್ಯ ತಂತ್ರ. ರಾಯಣ್ಣನ ನಾಯಕತ್ವವನ್ನು ಒಪ್ಪಿ ಸರಿಸುಮಾರು ಇಡೀ ಕಿತ್ತೂರು ಸಂಸ್ಥಾನದ ಪ್ರಜೆಗಳೆಲ್ಲ ಇವನ ಬೆಂಗಾವಲಿಗರಾಗಿದ್ದರು. ಮೋಸದಿಂದ ಬ್ರಿಟಿಷರ ಪಕ್ಷವಹಿಸುವವರ ವಿಚಾರದಲ್ಲಿ ರಾಯಣ್ಣ ನಿರ್ದಾಕ್ಷಿಣ್ಯವಾಗಿರುತ್ತಿದ್ದ. ಇವನ ಕಾರ್ಯಗಳಿಂದ ಬೆಚ್ಚಿಬಿದ್ದ ಬ್ರಿಟಿಷ್ ಅಧಿಕಾರಿಗಳು ತಮ್ಮ ರಕ್ಷಣೆಗಾಗಿ ಸೈನ್ಯದ ನೆರವನ್ನು ಕೋರಬೇಕಾಯಿತು. ಖಾನಾಪುರದ ದಾಳಿಯ ನಂತರ ರಾಯಣ್ಣ ಸಂಪಗಾವದ ಮೇಲೆ ದಾಳಿ ಮಾಡಿದ. ಅಲ್ಲಿನ ಖಜಾನೆಯನ್ನು ಸೂರೆಮಾಡಿ, ಹಲವು ಹಳ್ಳಿಗಳ ಮೇಲೂ ಎರಗಿ ಧನಸಂಗ್ರಹ ಮಾಡಿ, ಬ್ರಿಟಿಷರ ನಿಗ್ರಹಕ್ಕೆ ಹಗಲಿರುಳೂ ಪ್ರಯತ್ನಿಸಿದ. ಬಲಾಢ್ಯ ಬ್ರಿಟಿಷ್ ಪಡೆಯನ್ನೇ ಚಿಂತೆಗೀಡುಮಾಡುವ ಸಿಂಹಸ್ವಪ್ನವಾಗಿ ಸಂಗೊಳ್ಳಿ ರಾಯಣ್ಣ ಬೆಳೆದಿದ್ದ. ಸರ್ಕಾರಿ ಅಧಿಕಾರಿಗಳು ಇವನನ್ನು ಸೆರೆಹಿಡಿಯಲು ತಿಣುಕಾಡಿದರೂ ಅವರಿಗೆ ಚಳ್ಳೇಹಣ್ಣು ತಿನ್ನಿಸಿ ನುಣುಚಿಕೊಳ್ಳುವುದರಲ್ಲಿ ನಿಪುಣನಾಗಿದ್ದ.

ರಾಯಣ್ಣ ಬ್ರಿಟಿಷರ ವಿರುದ್ಧ ನಿರಂತರವಾಗಿ ತನ್ನದೇ ತಂತ್ರಗಾರಿಕೆಯಿಂದ ಹೋರಾಡುತ್ತಲೇ ಬಂದ. ನಾಲ್ಕು ತಿಂಗಳಕಾಲ ಸತತವಾಗಿ ಪ್ರತಿರೋಧ ತೋರಿದ ರಾಯಣ್ಣನನ್ನು ಯುದ್ಧಮಾಡಿ ಸೆರೆಹಿಡಿಯುವುದು ಅಸಾಧ್ಯವೆಂದು ಮನಗಂಡ ಬ್ರಿಟಿಷ್ ಸರಕಾರ ಕಪಟ ಜಾಲವೊಡ್ಡಿ, ದೇಶದ್ರೋಹಿಗಳ ಸಹಾಯದಿಂದ ಸೆರೆಹಿಡಿದು ವಿಚಾರಣೆಗೊಳಪಡಿಸಿತು. ರಾಯಣ್ಣನನ್ನು ಬಂಧಿಸಿದ ನಂತರ ಆತನ ನಾಲ್ಕುನೂರು ಜನ ಸಹಚರರೂ ಶರಣಾಗತರಾದರು. ರಾಯಣ್ಣನು ತಾನು ನಾಡಿನ ಹಿತಕ್ಕಾಗಿ ಈ ಕಾರ್ಯಗಳನ್ನೆಲ್ಲಾ ಮಾಡಬೇಕಾಯಿತೆಂದು ಒಪ್ಪಿಕೊಂಡನು. ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯವು ಇವನನ್ನು ತಪ್ಪಿತಸ್ಥನೆಂದು ಘೋಷಿಸಿದ್ದರಿಂದ, ಮರಣದಂಡನೆಯನ್ನು ವಿಧಿಸಲಾಯಿತು.

©KTBS Not to be republished

ಮರಣದಂಡನೆಗೊಳಪಟ್ಟ ರಾಯಣ್ಣನನ್ನು ಅವನ ಮುಖ್ಯ ಕಾರ್ಯಕ್ಷೇತ್ರವಾದ ನಂದಗಡದಲ್ಲೇ ಗಲ್ಲಿಗೇರಿಸಿದರೆ ಜನ ಪಾಠ ಕಲಿಯುವರೆಂಬ ಉದ್ದೇಶದಿಂದ ಅಲ್ಲಿಗೆ ಕರೆತಂದು ವಧಾಸ್ಥಾನಕ್ಕೆ ಕರೆದೊಯ್ಯುತ್ತಿದ್ದಾಗ ಒಂದು ವಿಶಿಷ್ಟವಾದ ಸ್ಥಳದಲ್ಲಿ ತನ್ನ ದೇಹವನ್ನು ಸಮಾಧಿ ಮಾಡಬೇಕೆಂದು ರಾಯಣ್ಣನೇ ಸ್ಥಳವನ್ನು ತೋರಿಸಿದ್ದನಂತೆ. ೨೬ ಜನವರಿ ೧೮೩೧ ರಲ್ಲಿ ರಾಯಣ್ಣನ್ನು ಗಲ್ಲಿಗೇರಿಸಿ, ಆತ ಬಯಸಿದಲ್ಲೇ ಸಮಾಧಿ ಮಾಡಲಾಯಿತು. ಅಲ್ಲಿ ಒಂದು ಆಲದಮರ ಬೆಳೆದಿದೆ. ರಾಯಣ್ಣನಿಗೊಂದು ಗುಡಿಯನ್ನೂ ಜನರು ಕಟ್ಟಿದ್ದಾರೆ. ರಾಯಣ್ಣನ ಸಮಾಧಿಯು ಈಗ ಭಕ್ತಿ ಗೌರವಗಳುಳ್ಳ ಜನರ ಪಾಲಿಗೆ ವೀರಗುಡಿಯ ರಾಯಣ್ಣನ ಗದ್ದುಗೆಯಾಗಿದೆ. ರಾಯಣ್ಣನ ನೆನಪು ಹಾಡುವ ಹಾಡುಗಳಲ್ಲಿ, ಲಾವಣಿಗಳಲ್ಲಿ ಹಸಿರಾಗಿ ಉಳಿದಿದೆ. ಅವನ ಧೀರಕ್ರಮಗಳು, ಶೌರ್ಯ ಸಾಧನೆಗಳು, ಚತುರ ಚಲನವಲನಗಳು, ವ್ಯೂಹಗಳು ಇವಕ್ಕೂ ಮಿಗಿಲಾಗಿ ಕಿತ್ತೂರಿನ

ಸ್ವಾತಂತ್ರ್ಯ ಸಾಧನೆಯ ಘನೋದ್ಧಾರಕ್ಕಾಗಿ ಎಡೆಬಿಡದೆ ನಡೆಸಿದ ಪ್ರಯತ್ನಗಳು ಇವುಗಳ ಕಥೆ ಇಂದಿಗೂ ನಾಡಿನ ಜನರ ಕಣ್ಣಲ್ಲಿ ನೀರೂರಿಸಿ, ಎಲ್ಲರಲ್ಲೂ ದೇಶಪ್ರೇಮವನ್ನು ಉಕ್ಕಿಸುತ್ತಲೇ ಇವೆ. ಅಲ್ಲದೆ ಆತನ ಜನ್ಮದಿನ (ಆಗಸ್ಟ್ ೧೫ ಸ್ವಾತಂತ್ರ್ಯೋತ್ಸವ) ಮತ್ತು ಮರಣದಿನ (ಜನವರಿ ೨೬ ಗಣರಾಜ್ಯೋತ್ಸವ) ಗಳೆರಡೂ ನಮ್ಮ ರಾಷ್ಟ್ರೀಯ ಹಬ್ಬಗಳಾಗಿರುವುದೂ ರಾಯಣ್ಣನ ನೆನಪನ್ನು ದೇಶಭಕ್ತಿಯೊಂದಿಗೆ ಸ್ಮರಣೀಯವಾಗಿಸಿದೆ. ಇದೊಂದು ವಿಶೇಷಕರವಾದ ಸಂಗತಿ.

**ಕ್ಷೇತ್ರ** : ಬರೆಯುವುದು

**ಸಾಮರ್ಥ್ಯ** : ಸರಳ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಸೂಕ್ತ ಚಿಹ್ನೆಗಳನ್ನು ಬಳಸಿ ವಾಕ್ಯಗಳನ್ನು ಬರೆಯುವುದು.

## ಕೃತಿಕಾರರ ಪರಿಚಯ



***ಡಾ ಎಚ್.ಎಸ್. ಸತ್ಯನಾರಾಯಣ:*** *{ಜನನ: ೧.೮.೧೯೬೯} ಸಾಹಿತ್ಯ ವಿಮರ್ಶೆಯಲ್ಲಿ ಕೃಷಿಮಾಡುತ್ತಿರುವ ಲೇಖಕ.* ***ಚಿಕ್ಕಮಗಳೂರು*** *ಇವರ ಜನ್ಮಸ್ಥಳ. ತಂದೆ ಶ್ರೀ ಎಚ್.ಕೆ. ಶ್ರೀನಿವಾಸ, ತಾಯಿ ಶ್ರೀಮತಿ ಇಂದಿರಮ್ಮ. ಬಿ.ಎ. ಪದವಿಯ ಐಚ್ಛಿಕ ಕನ್ನಡದಲ್ಲಿ ಮೈಸೂರು ವಿ.ವಿ.ಗೆ ಮೊದಲಿಗರೆನಿಸಿ ಪ್ರೊ.ತೀ.ನಂ.ಶ್ರೀ. ಸ್ಮಾರಕ ಚಿನ್ನದ ಪದಕ ಹಾಗೂ ಹಲವು ನಗದು ಪುರಸ್ಕಾರಗಳನ್ನು ಪಡೆದರು. ಕನ್ನಡ ಎಂ.ಎ.ಪದವಿಯನ್ನು ಮೂರನೇ ರ್‍ಯಾಂಕಿನೊಂದಿಗೆ ಪಡೆದು* ***"ಪೂರ್ಣಚಂದ್ರ ತೇಜಸ್ವಿ ಅವರ ಕಥನ ಸಾಹಿತ್ಯದ ಸಾಂಸ್ಕೃತಿಕ ನೆಲೆಗಳು"*** *ಎಂಬ ಪ್ರೌಢಪ್ರಬಂಧಕ್ಕೆ* ***ಡಾಕ್ಟರೇಟ್*** *ಪದವಿ ಪಡೆದಿದ್ದಾರೆ. ಪತ್ರಿಕೆಗಳಲ್ಲಿ ಅಂಕಣಕಾರರಾಗಿಯೂ ಗಮನಸೆಳೆದಿದ್ದಾರೆ. ಪ್ರಸ್ತುತ ಬೆಂಗಳೂರಿನ ಬಸವನಗುಡಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಿರಿಯ ಶ್ರೇಣಿಯ ಕನ್ನಡ ಉಪನ್ಯಾಸಕರಾಗಿ ಸೇವೆಸಲ್ಲಿಸುತ್ತಿದ್ದಾರೆ.*

©KTBS Not to be republished

## ಪದಗಳ ಅರ್ಥ

ಸ್ಮೃತಿಪಟಲ – ನೆನಪಿನ ಸಂಗ್ರಹ
ಆದ್ಯ – ಮೊದಲ ಕರ್ತವ್ಯ
ಕಲಿ – ವೀರ
ಮುಂಚೂಣಿ – ಮೊದಲನೆಯ ಸಾಲಿನ
ಅಪ್ರತಿಮ – ಹೋಲಿಕೆಯಿಲ್ಲದ, ಸಾಟಿಯಿಲ್ಲದ
ರಕ್ತಗತ – ಹುಟ್ಟಿನೊಡನೆ ಸ್ವಭಾವಕ್ಕೆ ಅಂಟಿಕೊಂಡ
ಅಹೋರಾತ್ರಿ – ರಾತ್ರಿಪೂರ್ತಿ, ಇಡೀರಾತ್ರಿ
ಕ್ರೋಧ – ಕೋಪ, ಸಿಟ್ಟು

ಅಚಲವಾದ – ಸ್ಥಿರವಾದ, ಬದಲಾಗದ
ಎರಗು – ಮೇಲೆ ಬೀಳು
ಕಕ್ಕಾಬಿಕ್ಕಿ – ದಿಕ್ಕುತೋಚದಾಗು
ಸಹಚರರು – ಜೊತೆಗಾರರು
ಖಜಾನೆ – ಹಣಸಂಗ್ರಹಿಸುವ ಪೆಟ್ಟಿಗೆ; ತಿಜೋರಿ
ಸಿಂಹಸ್ವಪ್ನ – ಕನಸಿನಲ್ಲೂ ಹೆದರಿಸುವವನು
ಚಳ್ಳೇಹಣ್ಣು ತಿನ್ನಿಸು – ಮೋಸಗೊಳಿಸು
ನುಣುಚಿಕೋ – ತಪ್ಪಿಸಿಕೋ
ನಿಪುಣ – ಪರಿಣತಿ
ವಧಾಸ್ಥಾನ – ಕೊಲ್ಲುವ ಸ್ಥಳ

## ಅಭ್ಯಾಸ

### ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಸಂಗೊಳ್ಳಿ ರಾಯಣ್ಣ ಯಾವಾಗ, ಎಲ್ಲಿ ಜನಿಸಿದನು?
೨. ಸಂಗೊಳ್ಳಿ ರಾಯಣ್ಣನ ತಂದೆ–ತಾಯಿಗಳು ಯಾರು?
೩. ಸಂಗೊಳ್ಳಿ ರಾಯಣ್ಣನು ಯಾವ ಸಂಸ್ಥಾನದ ಬಿಡುಗಡೆಗಾಗಿ ಹೋರಾಡಿದನು?
೪. ಕಿತ್ತೂರಿನ ರಾಣಿಚೆನ್ನಮ್ಮನ ದತ್ತು ಪುತ್ರನ ಹೆಸರೇನು?
೫. ಸಂಗೊಳ್ಳಿ ರಾಯಣ್ಣನನ್ನು ಯಾವಾಗ ಗಲ್ಲಿಗೇರಿಸಲಾಯಿತು?

©KTBS Not to be republished

### ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಯಾವುದು ಆದ್ಯ ಕರ್ತವ್ಯವೆಂಬುದನ್ನು ಸಂಗೊಳ್ಳಿ ರಾಯಣ್ಣ ತೋರಿಸಿಕೊಟ್ಟಿದ್ದಾನೆ?
೨. 'ಸಾವಿರ ಒಂಟೆ ಸರದಾರ' ಎಂಬ ಬಿರುದು ಯಾರಿಗಿತ್ತು? ಏಕೆ?
೩. ಗೆರಿಲ್ಲಾ ಯುದ್ಧ ಎಂದರೇನು?
೪. ಸಂಗೊಳ್ಳಿ ರಾಯಣ್ಣನ ಅತ್ಯಂತ ದೊಡ್ಡ ಸಾಹಸ ಯಾವುದು?
೫. ಬ್ರಿಟಿಷ್ ಆಡಳಿತ ವಿರುದ್ಧ ತನ್ನ ಪ್ರತಿಭಟನೆಯನ್ನು ರಾಯಣ್ಣ ದಾಖಲಿಸಿದ್ದು ಹೇಗೆ?
೬. ನ್ಯಾಯಾಲಯದಲ್ಲಿ ರಾಯಣ್ಣ ತನ್ನ ಕಾರ್ಯಗಳ ಬಗ್ಗೆ ಯಾವ ಸಮರ್ಥನೆ ನೀಡಿದನು?

### ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.

೧. ಸಂಗೊಳ್ಳಿ ರಾಯಣ್ಣನ ನೆನಪು ನಾಡಿನ ಜನರಲ್ಲಿ ಉಳಿದಿರಲು ಕಾರಣಗಳನ್ನು ವಿವರಿಸಿ.
೨. ಸಂಗೊಳ್ಳಿ ರಾಯಣ್ಣನ ಯುದ್ಧತಂತ್ರಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

## ಈ. ಕೊಟ್ಟಿರುವ ವಾಕ್ಯಗಳ ಸಂದರ್ಭಸಹಿತ ವಿವರಿಸಿ.

೧. ನಾಡ ಉಳಿವಿಗಾಗಿ ಹೋರಾಡುವುದು ಕೇವಲ ರಾಜರ ಕೆಲಸವಲ್ಲ.

೨. ಆಗಸ್ಟ್ ಹದಿನೈದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಹಬ್ಬದ ದಿನ.

೩. ಈತನು ಗೆರಿಲ್ಲ ಯುದ್ಧದಲ್ಲಿ ಪಳಗಿದ್ದವನು.

೪. ಎಲ್ಲರಲ್ಲೂ ದೇಶಪ್ರೇಮವನ್ನು ಉಕ್ಕಿಸುತ್ತಲೇ ಇದೆ.

# ಭಾಷಾಭ್ಯಾಸ

## ಅ. ಸೂಚನೆಗನುಗುಣವಾಗಿ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

೧. ಇವುಗಳ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಸಮಾನತೆ, ವಿರುದ್ಧ, ಅಚಲ, ರಕ್ಷಕ.

೨. ಇವುಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಸ್ಮರಣೆ, ಸ್ಫೂರ್ತಿ, ಕ್ರೋಧ, ಯುದ್ಧ.

೩. ಇವುಗಳ ನಾನಾರ್ಥಕ ಪದಗಳನ್ನು ಬರೆಯಿರಿ.

ಕಲಿ, ಕರಿ, ಕಾಡು, ಮುನಿ.

೪. ಇವುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಕಕ್ಕಾಬಿಕ್ಕಿ, ಸಿಂಹಸ್ವಪ್ನ, ಚಳ್ಳೇಹಣ್ಣು, ಬೆಚ್ಚಿಬೀಳಿಸು.

©KTBS Not to be republished

## ಆ. ಯೋಜನೆ

೧. ಸಂಗೊಳ್ಳಿ ರಾಯಣ್ಣನ ಜೀವನ ವಿವರಗಳನ್ನು ಕುರಿತು ಒಂದು ಪುಟ್ಟ ಪ್ರಬಂಧ ರಚಿಸಿ.

೨. ಕಿತ್ತೂರಿಗೆ ಭೇಟಿ ನೀಡಿ, ಅಲ್ಲಿನ ಐತಿಹಾಸಿಕ ಸ್ಮಾರಕಗಳನ್ನು ಸಂದರ್ಶಿಸಿ.

## ಇ. ಓದಿಗೆ ಮನ್ನಣೆ

೧. ಸಂಗೊಳ್ಳಿ ರಾಯಣ್ಣನು ಕಿತ್ತೂರಿಗಾಗಿ ಹೋರಾಡಿದ ಕಥೆಯನ್ನು ಇತಿಹಾಸ ಪುಸ್ತಕಗಳಿಂದ ಸಂಗ್ರಹಿಸಿ, ಓದಿರಿ.

೨. ಮೈಸೂರು ವಿಶ್ವವಿದ್ಯಾಲಯದ ವಿಷಯ ವಿಶ್ವಕೋಶದಲ್ಲಿ ಸಂಗೊಳ್ಳಿ ರಾಯಣ್ಣನ ಬಗೆಗಿರುವ ಮಾಹಿತಿಯನ್ನು ಗಮನಿಸಿ.

★★★★★

ಪದ್ಯ ಭಾಗ

# ೧೦. ಗಿಡ ಮರ

A5N3Q1

ಸತ್ಯಾನಂದ ಪಾತ್ರೋಟ–

**ಪ್ರವೇಶ :** ನಮ್ಮ ಕೈಯಲ್ಲಿರುವ ಐದು ಬೆರಳುಗಳೂ ಒಂದೇ ರೀತಿಯಿಲ್ಲ. ಪ್ರತಿಯೊಂದು ಬೆರಳನ್ನು ಅದರದೇ ಆದ ಕಾರ್ಯಗಳಿಗೆ ನಾವು ಬಳಸುತ್ತೇವೆ. ಏನನ್ನಾದರೂ ಹಿಡಿಯಬೇಕಾದರೆ ಐದೂ ಬೆರಳುಗಳನ್ನು ಒಟ್ಟಾಗಿ ಬಳಸುತ್ತೇವೆ. ಬೆರಳಿನ ಆಕಾರ, ಸ್ವರೂಪ ನಮ್ಮ ಗಮನಕ್ಕೆ ಬರುವುದಿಲ್ಲ. ಒಂದು ಮರ ಕಾಯನ್ನು, ಹಣ್ಣನ್ನು, ನೆರಳನ್ನು ನೀಡಬಹುದು. ಹಾಗೆಯೇ, ಹಲವು ಹಕ್ಕಿಗಳು ಗೂಡುಕಟ್ಟಲು ಅವಕಾಶ ಮಾಡಬಲ್ಲುದು. ಮನುಷ್ಯರಾದ ನಾವೂ ಸಹಕಾರಿಯಾಗಿ ಬದುಕಿದರೆ ಎಷ್ಟು ಚಂದ ಅಲ್ಲವೆ? ಪ್ರಕೃತಿಯನ್ನು ಅನುಸರಿಸುವುದರಿಂದ ಆಗುವ ಪ್ರಯೋಜನ ಅಪಾರ.



ಬೊಡ್ಡೆ ಕರಿದು ಎಲೆ ಹಸಿರು
ಹೂವು ನಾನಾ ತರತರ
ಎಂಥ ಸೊಗಸು ಏನು ಕಂಪು
ಬೆಳೆದು ನಿಂತ ಗಿಡ ಮರ

ಯಾರೇ ಬಂದು ಏನೇ ಮಾಡಲಿ
ಎಲ್ಲದಕ್ಕೂ ದಿವ್ಯ ಮೌನ
ರೆಂಬೆ ಕೊಂಬೆ ಚಿಗುರುವಲ್ಲಿ
ಕಡಲುಕ್ಕುವ ಚೇತನ

ಮನುಷ್ಯನಲ್ಲಿ ಮಾತು ಉಂಟು
ಮಾತಿನಂತೆ ಇಲ್ಲ ಮನ
ಲಿಂಗ ವರ್ಣ ಜಾತಿ ಧರ್ಮ
ಹಾಳು ಕೊಂಪೆ ಇವನ ಮನ

ಜಾತಿ–ಗೀತಿ, ಲಿಂಗ–ಧರ್ಮ
ಮೀರಿ ಬೆಳೆದ ಗಿಡಮರ
ಅವನು ಇವಳು ಅದು ಇದು
ಎಣಿಸುತಿಲ್ಲ ಒಂದು ದಿನ

ಬೊಡ್ಡೆ ಕರಿದು ಎಲೆ ಹಸಿರು
ಹೂವು ನಾನಾ ತರತರ
ಬಿಸಿಲು ಮಳೆ ಚಳಿಯ ತಡೆದು
ಅರಳುತಿಹವು ಅನುದಿನ.

©KTBS
Not to be republished

**ಕ್ಷೇತ್ರ** : ಆಲಿಸುವುದು

**ಸಾಮರ್ಥ್ಯ** : **ಕವಿತೆ, ಕಥೆ, ನಾಟಕ, ಪ್ರಬಂಧ, ಪ್ರಹಸನ ಇವುಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು.**

**ಆಶಯ :** ಪ್ರಕೃತಿಯಲ್ಲಿ ಹಲವು ಬಣ್ಣ, ಹಲವು ಆಕಾರ, ಹಲವು ಸ್ವರೂಪದ ಗಿಡ ಮರಗಳಿವೆ. ಮನುಷ್ಯನೂ ಪ್ರಕೃತಿಯ ಒಂದು ಭಾಗ. ಮನುಷ್ಯರಲ್ಲಿಯೂ ಹಲವು ಬಗೆಯ ಜನರಿದ್ದಾರೆ. ಬೇರೆ ಬೇರೆ ಧರ್ಮ, ಆಚಾರ ವಿಚಾರಗಳನ್ನು ಅನುಸರಿಸುವವರಿದ್ದಾರೆ. ಆದರೆ ಗಿಡಮರಗಳಲ್ಲಿಲ್ಲದ ಭೇದ–ಭಾವ ಮನುಷ್ಯರಲ್ಲಿದೆ. ಇದು ಅಗತ್ಯವಿಲ್ಲ. ಭೇದ ಭಾವವಿಲ್ಲದೆ ಗಿಡಮರಗಳಂತೆ ಪರರಿಗೆ ಉಪಕಾರಿಗಳಾಗಿ ಬೆಳೆದರೆ ಮನುಷ್ಯನ ಬದುಕು ಸಾರ್ಥಕವಾಗುತ್ತದೆ.

## ಕೃತಿಕಾರರ ಪರಿಚಯ

**ಡಾ. ಸತ್ಯಾನಂದ ಪಾತ್ರೋಟ ಬಾಗಲಕೋಟೆಯಲ್ಲಿ** ಜನಿಸಿದರು. ಕನ್ನಡದಲ್ಲಿ ಎಂ.ಎ., ಪಿಹೆಚ್.ಡಿ.ಪದವಿ ಪಡೆದಿರುವ ಇವರು ಬಾಗಲಕೋಟೆಯ ಎಸ್.ಬಿ.ಪಾಟೀಲ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾರೆ. ಇವರು **ಕರಿನೆಲದ ಕಲೆಗಳು, ಜಾಜಿ ಮಲ್ಲಿಗೆ, ಕಲ್ಲಿಗೂ ಗೊತ್ತಿರುವ ಕಥೆ, ಕರಿಯ ಕಟ್ಟಿದ ಕವನ, ನನ್ನ ಕನಸಿನ ಹುಡುಗಿ, ನದಿಗೊಂದು ಕನಸು** ಮತ್ತು **ಅವಳು** ಎಂಬ ಕವನ ಸಂಕಲನಗಳನ್ನೂ **ನಮಗ ಯಾರು ಇಲ್ಲೋ ಎಪ್ಪಾ ಸಾಕ್ಷಿ, ಮತ್ತೊಬ್ಬ ಏಕಲವ್ಯ** ಎಂಬ ನಾಟಕಗಳನ್ನು **ಒಂದಿಷ್ಟು ಕ್ಷಣಗಳು** ಎಂಬ ಪ್ರಬಂಧ ಸಂಕಲನವನ್ನು ಪ್ರಕಟಿಸಿರುತ್ತಾರೆ. **ಎದೆಯ ಮಾತು** ಎಂಬುದು ಇವರ ಕಾವ್ಯದ ಧ್ವನಿಸುರುಳಿ. ಕರ್ನಾಟಕ ಸರಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಇವರನ್ನು ಪುರಸ್ಕರಿಸಿದೆ. **'ಗಿಡಮರ'** ಎಂಬ ಈ ಕವನವನ್ನು ಅವರ **ಕರಿಯ ಕಟ್ಟಿದ ಕವನ** ಎಂಬ ಕವನಸಂಕಲನದಿಂದ ಆರಿಸಲಾಗಿದೆ.



## ಪದಗಳ ಅರ್ಥ

©KTBS Not to be republished

ಬೊಡ್ಡೆ–ಮರದ ಕಾಂಡದ ಭಾಗ; ಅನುದಿನ–ದಿನನಿತ್ಯ; ಕರಿದು–ಕಪ್ಪಾದ ಬಣ್ಣ; ತರತರ–ವಿಧವಿಧವಾದ; ಕಡಲುಕ್ಕುವ–ಸಮುದ್ರ ಉಕ್ಕಿದಂತೆ; ಮನ–ಮನಸ್ಸು; ಹಾಳುಕೊಂಪೆ–ನಾಶಹೊಂದಿದ ಊರು.

## ಅಭ್ಯಾಸ

**ಅ. ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

೧. ಯಾರೇ ಏನೇ ಮಾಡಿದರೂ ಗಿಡಮರ ಏನು ಮಾಡುತ್ತವೆ?

೨. ಕಡಲುಕ್ಕುವ ಚೇತನ ಎಲ್ಲಿ ಕಾಣಬರುತ್ತದೆ?

೩. ಅದು ಇದು ಎಣಿಸದಿರುವುದು ಯಾವುದು?

೪. ಗಿಡ ಮರಗಳು ಹೇಗೆ ಬೆಳೆದು ಅರಳುತ್ತಿವೆ?

**ಆ. ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಬೆಳೆದು ನಿಂತ ಗಿಡಮರ ಹೇಗಿವೆ?

೨. ಯಾರ ಮಾತಿನಂತೆ ಮನ ಇಲ್ಲ? ಏಕೆ?

೩. ಗಿಡ ಮರಗಳು ಯಾವುದನ್ನು ಮೀರಿ ಬೆಳೆದಿವೆ?

ಇ. ಬಿಟ್ಟ ಸ್ಥಳವನ್ನು ಪದ್ಯದಿಂದ ಆರಿಸಿದ ಸೂಕ್ತ ಪದಗಳಿಂದ ತುಂಬಿರಿ.

| | | | |
|---|---|---|---|
| ಎಂಥ ಸೊಗಸು | ________ | ಬೆಳೆದು ನಿಂತ | ________ |
| ರೆಂಬೆ ಕೊಂಬೆ | ________ | ಕಡಲುಕ್ಕುವ | ________ |
| ಮನುಷ್ಯನಲ್ಲಿ | ________ | ಮಾತಿನಂತೆ | ________ |
| ಜಾತಿ–ಗೀತಿ | ________ | ಮೀರಿ ಬೆಳೆದ | ________ |

ಈ. ಕೆಳಗೆ ನೀಡಿರುವ ಪದಗಳಲ್ಲಿ ಗಿಡ ಮರಗಳಿಗೆ ಮತ್ತು ಮಾನವನಿಗೆ ಸಂಬಂಧಿಸಿರುವ ಪದಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ.

| | | |
|---|---|---|
| ಬೊಡ್ಡೆ | ಮಾತು | ಅವನು |
| ಮನ | ಹಸಿರು | ಧರ್ಮ |
| ಚಿಗುರು | ಜಾತಿ | ಹೂವು |
| ಕೊಂಬೆ | ಅವಳು | ರೆಂಬೆ |

©KTBS Not to be republished

## ಚಟುವಟಿಕೆ

ಅ. ಕೆಳಗೆ ನೀಡಿರುವ ಪದಗಳನ್ನು 'ಅ' ಕಾರಾದಿಯಾಗಿ ಬರೆಯಿರಿ.

ಬೊಡ್ಡೆ, ಕರಿದು, ಎಲೆ, ಹಸಿರು, ಹೂವು, ತರತರ, ಎಂಥ, ಸೊಗಸು, ಏನು, ಕಂಪು, ಬೆಳೆ, ನಿಂತ, ಗಿಡ, ಮರ, ಮಾಡಲಿ, ದಿವ್ಯ, ಮೌನ, ರೆಂಬೆ, ಕೊಂಬೆ, ಚಿಗುರು, ಕಡಲು, ಚೇತನ.

ಆ. ಪ್ರಕೃತಿಯಲ್ಲಿಲ್ಲದ ಭೇದ ಭಾವ ಮನುಷ್ಯನಿಗೆ ಬೇಕೆ? ಈ ಬಗ್ಗೆ ಯೋಚಿಸಿ, ಪುಟ್ಟ ಪ್ರಬಂಧ ಸಿದ್ಧಪಡಿಸಿ.

ಇ. ನಿಮಗೆ ಗೊತ್ತಿರುವ, ಸ್ನೇಹಿತರಿಗೆ ಗೊತ್ತಿರುವ, ಮನೆಯಲ್ಲಿನ ಹಿರಿಯರಿಗೆ ಗೊತ್ತಿರುವ, ಮರಗಳ ಹೆಸರುಗಳನ್ನು ಪುನರಾವರ್ತನೆಯಾಗದಂತೆ ಪ್ರತ್ಯೇಕವಾಗಿ ಪಟ್ಟಿಮಾಡಿ.

## ಭಾಷಾಭ್ಯಾಸ

**ಅ. ಕೆಳಗೆ ನೀಡಿರುವ ವಾಕ್ಯಗಳನ್ನು ಆವರಣದಲ್ಲಿ ನೀಡಿರುವ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ ವಾಕ್ಯ ಪೂರ್ಣಗೊಳಿಸಿ.**

೧. ಬೆಳದಿಂಗಳ ರಾತ್ರಿಯಲ್ಲಿ ಚಂದ್ರನಿರುವ ____________ ನೋಡುವುದೇ ಆನಂದ (ಅಗಸನನ್ನು/ಆಗಸವನ್ನು)

೨. ನಿನಗೆ ಪೆಟ್ಟಾಗಿರುವುದನ್ನು ಕಂಡಾಗ ನನಗೆ ____________ ಬಂದಿತು. (ಆಳು/ಅಳು)

೩. ನನ್ನ ____________ ಬೆಂಗಳೂರು. (ಉರು/ಊರು)

೪. ಸಂಜೆ ಆಟ ಆಡಿ ____________ ಅನಂತರ ಊಟಮಾಡುತ್ತೇನೆ. (ಓದಿದ/ಒದಿದ)

೫. ____________ ಮೇಲೆ ಹಾಲನ್ನು ಇಡಲಾಗಿದೆ. (ಒಲೆಯ/ಓಲೆಯ)

**ಆ. ಕೆಳಗೆ ನೀಡಿರುವ ವಾಕ್ಯಗಳನ್ನು ಆವರಣದಲ್ಲಿ ನೀಡಿರುವ ಅಕ್ಷರಗಳಲ್ಲಿ ಸೂಕ್ತವಾದುದನ್ನು ಆರಿಸಿ ವಾಕ್ಯ ಪೂರ್ಣಗೊಳಿಸಿ.**

೧. ______ ವೇರಿ ______ ಡಗಿನ ಭಾಗಮಂಡಲದ ಬೆಟ್ಟದ ಬಳಿ ______ ರಿದಾಗಿ ಹುಟ್ಟಿ ______ ಳಗೆ ಹರಿಯುತ್ತದೆ. (ಕ/ಕಾ/ಕಿ/ಕೀ/ಕೆ/ಕೊ)

೨. ನದಿಯನ್ನು ______ ಟಿ ಆಚೆಯ ______ ಡ ಸೇರಿದರೆ ______ ಡ್ಡ ಆಲದ ಮರ ಕಾಣುತ್ತ ______ (ದ/ದಾ/ದೆ/ದೊ)

೩. ಕಾವೇರಿ ______ ವಿನಂತೆ ______ ರಳಿ ______ ರಿಯುವ ನದಿ (ಹ/ಹಾ/ಹಿ/ಹೊ)

©KTBS Not to be republished

**ಚೆನ್ನುಡಿ**

**"ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ–ಈ ಪಂಚಮಂತ್ರಗಳು ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ, ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನೂ ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ".**

–ಕುವೆಂಪು (ಜ್ಞಾನಪೀಠ, ಕರ್ನಾಟಕ ರತ್ನ ಮುಂತಾದ ಪ್ರಶಸ್ತಿಗಳಿಂದ ಪುರಸ್ಕೃತರಾದ ರಾಷ್ಟ್ರಕವಿ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ)

# ೧೧. ಸ್ವಾತಂತ್ರ್ಯದ ಹಣತೆ

ಕೆ. ಎಸ್. ನಿಸಾರ್ ಅಹಮ್ಮದ್ –

U9W1U6

**ಪ್ರವೇಶ :** ನಮಗೆ ಬಂದಿರುವ ಸ್ವಾತಂತ್ರ್ಯವನ್ನು ಸದಾ ರಕ್ಷಣೆ ಮಾಡಿಕೊಳ್ಳಬೇಕು. ನಮ್ಮ ದೇಶದ ಅಭಿವೃದ್ಧಿಗಾಗಿ ಸದಾ ದುಡಿಯುತ್ತಿರಬೇಕು. ಧೀರತನದಿಂದ ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು. ನಮ್ಮ ಸಾಧನೆಯ ಕಡೆಗೆ ಗಮನವಿರಬೇಕು. ದೇಶಕ್ಕಾಗಿ ಹೋರಾಡಿದ ಹುತಾತ್ಮರಿಗೆ ಗೌರವವನ್ನು ಸದಾ ಸಲ್ಲಿಸಬೇಕು ಎಂಬುದು ಈ ಪದ್ಯದ ಆಶಯವಾಗಿದೆ.

ಸದಾ ಉರಿಯುತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ದುಡಿಮೆ ತೈಲವೆರೆಯುತಿರಲು ಬಿಡುವಿಲ್ಲದೆ ಜನತೆ
ಎಂತು ಕುಂದಬಹುದು ಎಮ್ಮ ತಾಯ್ನಾಡಿನ ಘನತೆ ॥ ಸದಾ ॥

ಮುಳ್ಳಿನಿಂದ ಅರಿವೆ ಬಿಡಿಸಿದಂತೆ ಬಂತೆ ಮುಕ್ತಿ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರಶಕ್ತಿ
ಪಡೆಯಿತದನು ಜನತೆ, ಬಾಳ ಬೆಸೆಯೆ ನಾಡ ಭಕ್ತಿ ॥ ಸದಾ ॥

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ
ವ್ಯಕ್ತಿ ವ್ಯಕ್ತಿ ಬೆವರ ಹೀರಿ ಮರವಾಗಿದೆ ಮೊಳಕೆ,
ಮೇಲೇರಿದ ಹಾಗೆ ಭದ್ರ ಪಾಯವುಂಟು ಗೃಹಕೆ ॥ ಸದಾ ॥

ಸಾಗಿದಂತೆ ಸಲ್ಲುತ್ತಿರಲಿ ಸಾಧನೆಯೆಡೆ ಗಮನ
ಪ್ರಾಣವನ್ನೆ ಪಗಡೆಯಾಡಿದವರಿಗೆಮ್ಮ ನಮನ,
ತಾಯ ಮುಡಿಗೆ ದಿನವು ಏರುತಿರಲಿ ಹೂವು ದವನ ॥ ಸದಾ ॥



©KTBS Not to be republished

**ಕ್ಷೇತ್ರ** : ಓದುವುದು
**ಸಾಮರ್ಥ್ಯ** : ಪದ್ಯದ ವಿಷಯಗಳನ್ನು ಓದಿ ತಾರ್ಕಿಕವಾಗಿ ತೀರ್ಮಾನಿಸುವುದು.

## ಕೃತಿಕಾರರ ಪರಿಚಯ



**ಕೆ. ಎಸ್. ನಿಸಾರ್ ಅಹಮ್ಮದ್ :** ಕವಿ ಕೊಕ್ಕರೆಹೊಸಹಳ್ಳಿ ಷೇಕ್ ಹೈದರ್ ನಿಸಾರ್ ಅಹಮ್ಮದ್ ಅವರು ೦೫-೦೨-೧೯೩೬ ರಲ್ಲಿ **ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ** ಜನಿಸಿದರು. ತಂದೆ ಷೇಕ್ ಹೈದರ್, ತಾಯಿ ಹಮೀದಾ ಬೇಗಂ. ಭೂಗರ್ಭಶಾಸ್ತ್ರದಲ್ಲಿ ಪದವಿಯನ್ನು ಪಡೆದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಇವರು **ಮನಸು ಗಾಂಧಿಬಜಾರು, ನೆನೆದವರ ಮನದಲ್ಲಿ, ನಿತ್ಯೋತ್ಸವ, ಸುಮೂರ್ತ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**ಗಳನ್ನು ನೀಡಿ ಗೌರವಿಸಲಾಗಿದೆ.

## ಪದಗಳ ಅರ್ಥ

| | | | | | |
|---|---|---|---|---|---|
| ಅರಿವೆ | – | ಬಟ್ಟೆ | ಬೆಸೆ | – | ಒಂದಾಗುವುದು |
| ಗಳಿಕೆ | – | ಸಂಪಾದನೆ | ಮೊಳಕೆ | – | ಕುಡಿ |
| ಗೃಹ | – | ಮನೆ | ಪಗಡೆ | – | ಒಂದು ಬಗೆಯ ಆಟ |
| ಘನತೆ | – | ಶ್ರೇಷ್ಠತೆ | ಪಾಯ | – | ಬುನಾದಿ |
| ತೈಲ | – | ಎಣ್ಣೆ | ಹಣತೆ | – | ದೀಪ |

©KTBS Not to be republished

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸದಾ ಉರಿಯುತ್ತಿರಬೇಕಾದುದು ಯಾವುದು?

೨. ಧೀರಶಕ್ತಿ ಉಳ್ಳವರು ಏನು ಮಾಡಬಲ್ಲರು?

೩. ಮೊಳಕೆ ಉಂಟಾದುದು ಹೇಗೆ?

೪. ನಮ್ಮ ಗಮನ ಯಾವುದರ ಕಡೆಗೆ ಸಲ್ಲಬೇಕು?

### ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಸದಾ ______________________________

______________________________

______________________ ಘನತೆ ॥ ಸದಾ ॥

೨. ಸಾಗಿದಂತೆ ________________________

________________________________

____________________ ದವನ ॥ ಸದಾ ॥

## ವ್ಯಾಕರಣ ಮಾಹಿತಿ

### ಅ. ಲಿಂಗಗಳು

೧. ಶಿವಪುರದಲ್ಲಿ ಒಬ್ಬ **ಶಿವಭಕ್ತ**ನಿದ್ದನು.

೨. ಭಜನೆಯ ಮಂದಿರಕ್ಕೆ ಒಬ್ಬ **ಶರಣೆ** ಬಂದಿದ್ದಳು.

೩. ನದಿಯ ಹತ್ತಿರ ಒಂದು **ಮೊಸಳೆ** ಇತ್ತು.

ಮೇಲಿನ ವಾಕ್ಯಗಳನ್ನು ಓದಿ. ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. **ಶಿವಭಕ್ತ** ಎಂಬ ಪದವು **'ಗಂಡಸು'** ಎಂಬುವುದನ್ನು ಸೂಚಿಸುತ್ತದೆ. **'ಶರಣೆ'** ಎಂಬ ಪದವು **'ಹೆಂಗಸು'** ಎಂಬುದನ್ನು ಸೂಚಿಸುತ್ತದೆ. ಆದರೆ **'ಮೊಸಳೆ'** ಎಂಬ ಪದವು **'ಗಂಡಸು'** ಎಂಬುದನ್ನಾಗಲೀ, **'ಹೆಂಗಸು'** ಎಂಬುದನ್ನಾಗಲೀ ಸೂಚಿಸುತ್ತಿಲ್ಲ.

೧. ಆ ಊರಿನಲ್ಲಿ ಪ್ರಸಿದ್ಧ **ರಾಜ** ಇರುವನು.

೨. **ಪುನೀತ್** ಬಹಳ ಒಳ್ಳೆಯವನು.

ಮೇಲಿನ ವಾಕ್ಯಗಳನ್ನು ಓದಿ ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ, **'ರಾಜ'**. **'ಪುನೀತ್'** ಎಂಬ ಪದಗಳು **'ಗಂಡಸು'** ಎಂಬ ಅರ್ಥದಿಂದ ಬಳಕೆಯಾಗಿವೆ. ಇವು ಪುಲ್ಲಿಂಗಗಳು.

೧. **ಸಿಂಧು** ಬಲು ಅಪರೂಪದವಳು.

೨. ಆಸೆಯು **ರಾಣಿ**ಗಲ್ಲದೆ ಮತ್ತಾರಿಗೆ?

ಮೇಲಿನ ವಾಕ್ಯಗಳನ್ನು ಓದಿ ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ, 'ಸಿಂಧು', 'ರಾಣಿ' ಎಂಬ ಪದಗಳು 'ಹೆಂಗಸು' ಎಂಬ ಅರ್ಥದಿಂದ ಬಳಕೆಯಾಗಿವೆ. ಇವು ಸ್ತ್ರೀಲಿಂಗಗಳು.

೧. ಗಿಳಿಯ ಮೈಬಣ್ಣ ಹಸಿರು.

೨. ಭರತನ ತೋಟದಲ್ಲಿ **ಹಣ್ಣು**ಗಳಿವೆ.

ಮೇಲಿನ ವಾಕ್ಯಗಳನ್ನು ಓದಿ ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ, **'ಗಿಳಿ'**. **'ಹಣ್ಣು'** ಎಂಬ ಪದಗಳು **'ಗಂಡಸು'** ಅಥವಾ **'ಹೆಂಗಸು'** ಎಂಬ ಅರ್ಥದಿಂದ ಬಳಕೆಯಾಗಿಲ್ಲ. ಇವು ನಪುಂಸಕಲಿಂಗಗಳು.

ಒಟ್ಟಾರೆಯಾಗಿ **'ಗಂಡಸು'** ಎಂಬ ಅರ್ಥದಿಂದ ಬಳಸುವ ಪದಗಳು **'ಪುಲ್ಲಿಂಗಗಳು'**.

'ಹೆಂಗಸು' ಎಂಬ ಅರ್ಥದಿಂದ ಬಳಸುವ ಪದಗಳು **'ಸ್ತ್ರೀಲಿಂಗಗಳು'**.

**ಗಂಡಸು ಅಥವಾ ಹೆಂಗಸು** ಎಂಬ ಅರ್ಥದಿಂದ ಬಳಕೆಯಾಗದ ಪದಗಳು **'ನಪುಂಸಕಲಿಂಗಗಳು'**.

©KTBS Not to be republished

## ಭಾಷಾಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಪುಲ್ಲಿಂಗ ಎಂದರೇನು?

೨. ಸ್ತ್ರೀಲಿಂಗ ಎಂದರೇನು?

೩. ನಪುಂಸಕಲಿಂಗ ಎಂದರೇನು?

### ಆ. ಲಿಂಗ ರೂಪ ಪರಿವರ್ತಿಸಿ ಬರೆಯಿರಿ.

೧. ಶರಣ : ______________________

೨. ಇವಳು : ______________________

೩. ಗೌಡತಿ : ______________________

೪. ಅತ್ತೆ : ______________________

೫. ಅವನು : ______________________

©KTBS Not to be republished

### ಇ. ಕೊಟ್ಟಿರುವ ಪದಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕಲಿಂಗಗಳಾಗಿ ಆರಿಸಿ ಬರೆಯಿರಿ.

ಕೋಗಿಲೆ, ಆತ, ಅಣ್ಣ, ಜಿಂಕೆ, ಗಿಳಿ, ತಾತ, ಅರಸಿ, ಗಂಗೆ, ಗೆಳೆಯ, ತಾಯಿ, ಹಣ್ಣು, ರಾಧೆ

### ಈ. ಓದಿಗೆ ಮನ್ನಣೆ

೧. ಕೆ. ಎಸ್. ನಿಸಾರ್ ಅಹಮ್ಮದ್ ಅವರ ಬಗೆಗೆ ಹೆಚ್ಚಿನ ವಿವರವನ್ನು ತಿಳಿಯಿರಿ.
೨. ಕೆ. ಎಸ್. ನಿಸಾರ್ ಅಹಮ್ಮದ್ ಅವರ 'ನಿತ್ಯೋತ್ಸವ' ಕವನವನ್ನು ಸಂಗ್ರಹಿಸಿ, ಹಾಡಿರಿ.

### ಉ. ಶುಭನುಡಿ

೧. ದೇಶಕ್ಕಾಗಿ ದುಡಿ; ದೇಶಕ್ಕಾಗಿ ಮಡಿ.
೨. ಒಗ್ಗಟ್ಟಿನಲ್ಲಿ ಬಲವಿದೆ.

★★★★★

# ೧೨. ವಚನಗಳು

ಬಸವಣ್ಣ, ಅಂಬಿಗರ ಚೌಡಯ್ಯ –
ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ –

M8T1M3

**ಪ್ರವೇಶ :** ಜೀವನದಲ್ಲಿ ದೇವರನ್ನು ಕಾಣಲು ಅಂತರಂಗಶುದ್ಧಿ ಬಹಳ ಮುಖ್ಯ. ಅನ್ಯ ಚಿಂತೆಗಿಂತ ದೇವರನ್ನು ಕಾಣಬೇಕು ಎಂಬ ಚಿಂತೆ ಮುಖ್ಯ. ಜೀವನದಲ್ಲಿ ಸ್ತುತಿ–ನಿಂದೆಗಳು ಬಂದಾಗ ಮನದಲ್ಲಿ ಕೋಪ ಮಾಡಿಕೊಳ್ಳದೆ ಸಮಾಧಾನಿಯಾಗಿರುವುದು ಮುಖ್ಯ. ಮಾನವನು ನಿರಹಂಕಾರಿಯಾಗಿ ನುಡಿಗೆ ತಕ್ಕ ನಡೆಯುಳ್ಳವರಾಗಿ, ದಾನಿಗಳಾಗಿ ಇರುವುದು ಮುಖ್ಯ ಎಂಬುದು ಇಲ್ಲಿನ ಆಶಯವಾಗಿದೆ.

೧

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ; ಇದೇ ಬಹಿರಂಗಶುದ್ಧಿ;
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ.

– ಬಸವಣ್ಣ

©KTBS Not to be republished

೨

ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲಿ ಇಪ್ಪವರನು ಕಂಡೆನು.
ಶಿವನ ಚಿಂತೆಯಲಿದ್ದವರೊಬ್ಬರನು ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣ.

– ಅಂಬಿಗರ ಚೌಡಯ್ಯ

೩

ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

– ಅಕ್ಕಮಹಾದೇವಿ

೪

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ
ದೃಢವಿಲ್ಲದ ಭಕ್ತಿ ಒಡೆದ ಕುಂಭದಲಿ
ಸುಜಲವ ತುಂಬಿದಂತೆ ಮಾರಯ್ಯ ಪ್ರಿಯ ಅಮರೇಶ್ವರ
ಲಿಂಗವ ಮುಟ್ಟದ ಭಕ್ತಿ.

– ಆಯ್ದಕ್ಕಿ ಲಕ್ಕಮ್ಮ

©KTBS Not to be republished

**ಕ್ಷೇತ್ರ** : ಬರೆಯುವುದು
**ಸಾಮರ್ಥ್ಯ** : ಸರಿಯಾದ ಕ್ರಮದಲ್ಲಿ ಸ್ಪಷ್ಟವಾಗಿ ಬರೆಯುವುದು.

## ಕೃತಿಕಾರರ ಪರಿಚಯ



**ಬಸವಣ್ಣ :** ಶಿವಶರಣ ಬಸವಣ್ಣ ಅವರು ಸಾ.ಶ. ಸುಮಾರು ೧೨ ನೆಯ ಶತಮಾನದ ಪ್ರಸಿದ್ಧ ವಚನಕಾರರು ಮತ್ತು ಸಮಾಜ ಸುಧಾರಕರು. ಇವರು **ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ**ಯಲ್ಲಿ ಜನಿಸಿದರು. ಇವರು ಕಳಚುರಿ ವಂಶದ ಬಿಜ್ಜಳನ ಆಸ್ಥಾನದಲ್ಲಿ **ಭಂಡಾರಿಯಾಗಿ,** ರಾಜ್ಯದ **ಮಹಾದಂಡನಾಯಕರಾಗಿ ಸೇವೆಯನ್ನು** ಸಲ್ಲಿಸಿದ್ದಾರೆ. **'ಕೂಡಲ ಸಂಗಮದೇವಾ'** ಅಂಕಿತದಿಂದ ರಚಿಸಿರುವ ಇವರ ಸಾವಿರಾರು ವಚನಗಳು ದೊರೆತಿವೆ.



**ಅಂಬಿಗರ ಚೌಡಯ್ಯ :** ಶಿವಶರಣ ಅಂಬಿಗರ ಚೌಡಯ್ಯ ಅವರು ಸಾ .ಶ. ಸುಮಾರು ೧೨ನೆಯ ಶತಮಾನದ ಪ್ರಸಿದ್ಧ ವಚನಕಾರರು ಮತ್ತು ಸಮಾಜ ಸುಧಾರಕರು. ಇವರು ಗುತ್ತಲರ ಅರಸರ ಆಳ್ವಿಕೆ ಕಾಲದಲ್ಲಿ ಚೌಡದಾನಪುರದ ತುಂಗಭದ್ರಾ ನದಿ ತೀರದಲ್ಲಿ ತನ್ನ ದೋಣಿಯ ಮೂಲಕ ಜನರನ್ನು ಒಂದು ದಡದಿಂದ ಇನ್ನೊಂದು ದಡಕ್ಕೆ ಸಾಗಿಸುವ ಕಾಯಕದಲ್ಲಿ ನಿರತರಾಗಿದ್ದರು. ಸಮಾಜ ಚಿಂತನೆಯ ಮೂಲಕ ಜನತೆಯ ಒಳಿತನ್ನು ಬಯಸಿದ ವಚನಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಒಬ್ಬನಾಗಿದ್ದಾರೆ. ನಮಗೆ ಸದ್ಯಕ್ಕೆ ಸಿಕ್ಕಿರುವ ಅಂಬಿಗರ ಚೌಡಯ್ಯ ಅವರ ವಚನಗಳು ೨೭೮, ಅವುಗಳಲ್ಲಿ ಚೌಡಯ್ಯ ಅವರ ಅಂತರಾಳದ ಅನುಭವ ಸಮಾಜದಲ್ಲಿ ತಾವು ಕಂಡು ಉಂಡ ಅನುಭವಗಳನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಇವರ ಅಂಕಿತ ನಾಮ **'ಅಂಬಿಗರ ಚೌಡಯ್ಯ'** ಎಂಬುದಾಗಿದೆ.



**ಅಕ್ಕಮಹಾದೇವಿ : ಶಿವಶರಣೆ ಅಕ್ಕಮಹಾದೇವಿ** ಅವರು ಸಾ. ಶ. ಸುಮಾರು ೧೨ನೆಯ ಶತಮಾನದಲ್ಲಿ **ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಉಡುತಡಿ ಗ್ರಾಮ**ದಲ್ಲಿ ಜನಿಸಿದರು. ಇವರು ಒಬ್ಬ ಶ್ರೇಷ್ಠ ವಚನಕಾರ್ತಿ ಹಾಗೂ ಕವಯಿತ್ರಿ. ಇವರ **೪೩೪** ವಚನಗಳು ಲಭ್ಯವಾಗಿವೆ.

ಇವರ ಬರೆವಣಿಗೆಯು ಭಾವಗೀತಾತ್ಮಕವಾದುದು. ಜೀವನದ ನೋವುನಲಿವು, ಆಧ್ಯಾತ್ಮಿಕ ನಿಲುವು ಅವರ ಅಭಿವ್ಯಕ್ತಿಯ ವೈಶಿಷ್ಟ್ಯಗಳಾಗಿವೆ. **'ಚೆನ್ನಮಲ್ಲಿಕಾರ್ಜುನ'** ಎಂಬುದು ಇವರ ವಚನಗಳ ಅಂಕಿತವಾಗಿದೆ.

©KTBS Not to be republished



**ಆಯ್ದಕ್ಕಿ ಲಕ್ಕಮ್ಮ :** ಶಿವಶರಣೆ ಆಯ್ದಕ್ಕಿ ಲಕ್ಕಮ್ಮ ಅವರು ಸಾ. ಶ. ಸುಮಾರು ೧೨ ನೆಯ ಶತಮಾನದ ವಚನಕಾರ್ತಿ ಹಾಗೂ ಕಾಯಕಯೋಗಿ. ಬಸವಣ್ಣ ಅವರ ಸಮಕಾಲೀನರು. ಕಾಯಕಯೋಗಿ ಆಯ್ದಕ್ಕಿ ಮಾರಯ್ಯ ಅವರ ಧರ್ಮಪತ್ನಿ. ಇವರು ಮೂಲತಃ **ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಅಮರೇಶ್ವರ** ಎಂಬ ಗ್ರಾಮದವರು. ಬಸವಣ್ಣ ಅವರ ಕೀರ್ತಿಯನ್ನು ಕೇಳಿದ ಇವರು ಕಲ್ಯಾಣಕ್ಕೆ ಬಂದು ನೆಲೆಸುತ್ತಾರೆ. ಮಹಾಮನೆಯ ಅಂಗಳದಲ್ಲಿ ಶುದ್ಧ ಅಕ್ಕಿಯನ್ನು ಆಯ್ದು ಜಂಗಮ ದಾಸೋಹವನ್ನು ನಡೆಸುತ್ತಿದ್ದರು. **'ಮಾರಯ್ಯ ಪ್ರಿಯ ಅಮರೇಶ್ವರಲಿಂಗ'** ಎಂಬುದು ಇವರ ವಚನಗಳ ಅಂಕಿತವಾಗಿದೆ.

## ಪದಗಳ ಅರ್ಥ

ಅರಿವು – ತಿಳಿವಳಿಕೆ, ಜ್ಞಾನ
ಒಲಿಸು – ಮನವೊಪ್ಪಿಸು
ಗರ್ವ – ಸೊಕ್ಕು, ಅಹಂಕಾರ
ದ್ರವ್ಯ – ಐಶ್ವರ್ಯ, ಸಂಪತ್ತು
ಪರಿ – ರೀತಿ, ಕ್ರಮ
ಹಳಿ – ನಿಂದಿಸು, ದೂಷಿಸು
ಹಾನಿ – ಕೇಡು, ನಾಶ, ನಷ್ಟ
ಹುಸಿ – ಸುಳ್ಳು, ಅಸತ್ಯ

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಯಾರನ್ನು ಹಳಿಯಬಾರದು?
೨. ಬಡತನಕ್ಕೆ ಯಾವ ಚಿಂತೆ?
೩. ಲೋಕದಲ್ಲಿ ಸ್ತುತಿನಿಂದೆಗಳು ಬಂದರೆ ಹೇಗಿರಬೇಕು?
೪. ಎಂತಹ ಭಕ್ತಿಯಿಂದ ದ್ರವ್ಯದ ಕೇಡಾಗುತ್ತದೆ?
೫. ಅಕ್ಕಮಹಾದೇವಿ ಅವರ ಅಂಕಿತ ಏನು?

### ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಕಳಬೇಡ, ________________

________________

________________

________________

________ ಸಂಗಮದೇವನೊಲಿಸುವ ಪರಿ.

©KTBS Not to be republished

೨. ಗರ್ವದಿಂದ, ______________________

______________________________

______________________________

______________________________

______________________________

______________________ ಮುಟ್ಟದ ಭಕ್ತಿ.

## ವ್ಯಾಕರಣ ಮಾಹಿತಿ

### ಅ. ಗುಣ ವಿಶೇಷಣ.

ನಾಮಪದದ ವಿಶೇಷ ಗುಣವನ್ನು ತಿಳಿಸುವ ಅಥವಾ ಸೂಚಿಸುವ ಪದವೇ ಗುಣ ವಿಶೇಷಣ.

**ಉದಾ :** ರಿತೇಶನ ಬಳಿ ಕರಿಯ ಮೊಲವಿದೆ.

ಇಲ್ಲಿ 'ಕರಿಯ' ಎಂಬುದು ಮೊಲದ ಬಣ್ಣವನ್ನು ತಿಳಿಸುತ್ತದೆ.

೧. ಕಾಂಚನಾ ಸುಂದರ ಹುಡುಗಿ.

೨. ದರ್ಶಿನಿ ಕೆಂಪು ಲಂಗವನ್ನು ತೊಟ್ಟಿದ್ದಾಳೆ.

೩. ರಾಘುವಿನ ಹತ್ತಿರ ದೊಡ್ಡ ವಿಮಾನವಿದೆ.

©KTBS Not to be republished

ಇಲ್ಲಿ ಅಡಿಗೆರೆ ಎಳೆಯಲಾದ 'ಸುಂದರ', 'ಕೆಂಪು', 'ದೊಡ್ಡ' ಈ ಪದಗಳನ್ನು ಗಮನಿಸಿರಿ. ಬಣ್ಣ, ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಾಗಿವೆ. ಇವುಗಳನ್ನು 'ಗುಣ ವಿಶೇಷಣ'ಗಳೆನ್ನುವರು.

## ಭಾಷಾಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

**ಅ) ಗುಣವಿಶೇಷಣ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿರಿ.**

**ಆ) ಕೊಟ್ಟಿರುವ ವಾಕ್ಯಗಳಲ್ಲಿ ಗುಣವಿಶೇಷಣವನ್ನು ಗುರುತಿಸಿ ಅಡಿ ಗೆರೆ ಹಾಕಿರಿ.**

೧. ಲಾರಿಯು ತುಂಬ ಲಗ್ಗೇಜನ್ನು ಹೊರಬಲ್ಲುದು.

೨. ವಿಮಾನ ನಿಲ್ದಾಣದಲ್ಲಿ ವಿಶೇಷ ಅತಿಥಿಗಳ ಕೊಠಡಿಗಳಿರುತ್ತವೆ.

೩. ವಿಮಾನ ನಿಲ್ದಾಣ ತುಂಬಾ ಸುಂದರವಾಗಿದೆ.

೪. ಹಡಗು ಬಹಳ ದೊಡ್ಡದಾಗಿದೆ.

೫. ಪ್ರಿಯಾಳ ಲಂಗ ಹಚ್ಚ ಹಸುರಾಗಿದೆ.

## ಆ. ಓದಿಗೆ ಮನ್ನಣೆ

೧. ವಿವಿಧ ವಚನಕಾರರ ವಚನಗಳನ್ನು ಸಂಗ್ರಹಿಸಿ ಓದಿರಿ.

೨. ಧ್ವನಿ ಸುರುಳಿಯಲ್ಲಿರುವ ವಚನಗಳನ್ನು ಆಲಿಸಿರಿ.

೩. ಸಾಮೂಹಿಕವಾಗಿ ವಚನಗಳನ್ನು ಹಾಡಿರಿ.

೪. ವಚನಕಾರರ ಜೀವನ ಚರಿತ್ರೆಗಳನ್ನು ಓದಿರಿ.

## ಇ. ಶುಭನುಡಿ

೧. ಬಹಿರಂಗಶುದ್ಧಿಗಿಂತ ಅಂತರಂಗಶುದ್ಧಿ ಬಹಳ ಮುಖ್ಯ.

೨. ದೈವ ಚಿಂತನೆಯಿಂದ ಮನಸ್ಸಿಗೆ ಆನಂದ ದೊರೆಯುತ್ತದೆ.

೩. ಹೊಗಳಿಕೆಗೆ ಹಿಗ್ಗಬಾರದು; ತೆಗಳಿಕೆಗೆ ಕುಗ್ಗಬಾರದು.

೪. ನಡೆನುಡಿಗಳು ಒಂದಾಗಿರಬೇಕು.

©KTBS Not to be republished

★★★★★

# ೧೩. ಕನ್ನಡ ಕನ್ನಡ ಬರ್‍ರಿ ನಮ್ಮ ಸಂಗಡ

Q7Y8T2

**ಚಂದ್ರಶೇಖರ ಪಾಟೀಲ –**

**ಪ್ರವೇಶ :** ಕನ್ನಡ ನಾಡು ನುಡಿಯ ಬಗೆಗೆ ಅಭಿಮಾನವಿರಬೇಕು. ಕನ್ನಡ ನಾಡು ನುಡಿಯ ರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಬೇಕು. ಅದಕ್ಕಾಗಿ ನಾವೆಲ್ಲರೂ ಒಂದಾಗಬೇಕು. ಕನ್ನಡ ನಾಡನ್ನು ಕಟ್ಟುವ ಕಾರ್ಯಕ್ಕೆ ಮುಂದಾಗಬೇಕು. ಕನ್ನಡ ಬಾಳಿಗೆ ಅನ್ನ ಕೊಡುವ ಭಾಷೆಯಾಗಬೇಕು. ಇದಕ್ಕಾಗಿ ಎಲ್ಲರೂ ಬನ್ನಿ ಕೈಜೋಡಿಸೋಣ ಎಂಬುದು ಕವಿಯ ಆಶಯವಾಗಿದೆ.



ಎಲ್ಲೆಲ್ಲೂ ಉಸಿರಬೇಕು
ನಮ್ಮ ನುಡಿ ಕನ್ನಡ
ಸಿರಿನಾಡನು ಕಟ್ಟಲಿಕ್ಕೆ
ಬರ್‍ರಿ ನಮ್ಮ ಸಂಗಡ

ಕೈಯ ತುಂಬ ಕೆಲಸಬೇಕು
ಬೇಕು ಹೊಟ್ಟೆಗನ್ನ
ಅಕ್ಷರಗಳ ಕನ್ನ ಕೊರೆದು
ಬರಲಿ ಅರಿವು – ಚಿನ್ನ

ಮೈಯ ತುಂಬ ಬಟ್ಟೆಬೇಕು
ನೆತ್ತಿಗೊಂದು ಆಸರ
ಭೂಮಿ ತುಂಬ ಬಿತ್ತಬೇಕು
ತನ್ನ ಬೆಳಕು ನೇಸರ

©KTBS Not to be republished

ತಲೆಯ ತುಂಬ ಬೆಂಕಿ ತುಂಬಿ
ಮಿಂಚಬೇಕು ಕಂಗಳು
ಎದೆಯ ತುಂಬಿ ತುಳುಕಬೇಕು
ಪ್ರೀತಿಯ ಬೆಳದಿಂಗಳು

ಇಂಥ ನಾಡು ಕಟ್ಟಬೇಕು
ಬರ್ರಿ ನಮ್ಮ ಸಂಗಡ
ಎಲ್ಲೆಲ್ಲೂ ಮೊಳಗಬೇಕು
ಕನ್ನಡ ಕನ್ನಡ
ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ

©KTBS Not to be republished

**ಕ್ಷೇತ್ರ** : ಆಲಿಸುವುದು.
**ಸಾಮರ್ಥ್ಯ** : ಸಂಭಾಷಣೆ, ಸಂವಾದ ಮತ್ತು ಚರ್ಚೆಗಳನ್ನು ಅರ್ಥ ಮಾಡಿಕೊಳ್ಳುವುದು.

## ಕೃತಿಕಾರರ ಪರಿಚಯ



**ಚಂದ್ರಶೇಖರ ಪಾಟೀಲ : 'ಚಂಪಾ'** ಎಂಬ ಸಂಕ್ಷಿಪ್ತನಾಮದಿಂದ ಪ್ರಸಿದ್ಧರಾದ ಚಂದ್ರಶೇಖರ ಪಾಟೀಲ ಅವರು **ಸಾ. ಶ. ೧೯೩೯ ರಲ್ಲಿ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಹತ್ತಿಮತ್ತೂರಿ**ನಲ್ಲಿ ಜನಿಸಿದರು. ಇವರು ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಇವರು **ಬಾನುಲಿ, ಮಧ್ಯಬಿಂದು, ಗಾಂಧೀಸ್ಮರಣೆ, ಶಾಲ್ಮಲಾ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **ಪಂಪ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ**ಗಳನ್ನು ನೀಡಿ ಗೌರವಿಸಲಾಗಿದೆ.

## ಪದಗಳ ಅರ್ಥ

ಆಸರ – ಆಶ್ರಯ, ನೆಲೆ
ಉಸಿರಬೇಕು – ಹೇಳಬೇಕು
ನೇಸರ – ಸೂರ್ಯ
ಬರ್‍ರಿ – ಬನ್ನಿರಿ
ಸಂಗಡ – ಜೊತೆ
ಹೊಟ್ಟೆಗನ್ನ – ಹಸಿವಿಗೆ ಆಹಾರ

## ಅಭ್ಯಾಸ

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

೧. ಎಲ್ಲೆಲ್ಲೂ ಏನೆಂದು ಉಸಿರಬೇಕು?
೨. ಕೈಯ ತುಂಬ ಏನು ಬೇಕು?
೩. ನೇಸರ ಏನನ್ನು ಬಿತ್ತಬೇಕು?
೪. ಎದೆಯ ತುಂಬ ಯಾವುದು ತುಳುಕಬೇಕು?

©KTBS Not to be republished

**ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

೧. ಎಲ್ಲೆಲ್ಲೂ ____________
____________________
____________________
______________ಸಂಗಡ

೨. ಮೈಯ ________________
______________________
______________________
________________ ನೇಸರ

# ವ್ಯಾಕರಣ ಮಾಹಿತಿ

## ಅ. ಸಂಧಿ ಪರಿಚಯ.

ನಾವು ಮಾತನಾಡುವಾಗ ಕೆಲವು ಶಬ್ದಗಳನ್ನು ಬಿಡಿಬಿಡಿಯಾಗಿ ಹೇಳುವುದಿಲ್ಲ. ಅವನು + ಅಲ್ಲಿ ಎಂಬ ಎರಡು ಶಬ್ದಗಳನ್ನು ಕೂಡಿಸಿ 'ಅವನಲ್ಲಿ' ಎಂದು ಹೇಳುತ್ತೇವೆ. ಅಂದರೆ ಅವುಗಳನ್ನು ಕೂಡಿಸಿಯೇ ಹೇಳುತ್ತೇವೆ.

| | | | | | |
|---|---|---|---|---|---|
| **ಉದಾ :** | ಆಡು | + | ಇಸು | = | ಆಡಿಸು |
| | ಮರ | + | ಅನ್ನು | = | ಮರವನ್ನು |
| | ದೇವರು | + | ಇಗೆ | = | ದೇವರಿಗೆ |
| | ಮಳೆ | + | ಕಾಲ | = | ಮಳೆಗಾಲ |

ಹೀಗೆ ಎರಡು ಅಕ್ಷರಗಳ ಯಾವ ಕಾಲವಿಳಂಬವೂ ಇಲ್ಲದೆ ಪರಸ್ಪರ ಸೇರುವುದಕ್ಕೆ 'ಸಂಧಿ' ಎನ್ನುವರು.

| **ಪದ** | | **ಪದ** | | **ಸಂಧಿರೂಪ** |
|---|---|---|---|---|
| ಅವನ | + | ಅಂಗಡಿ | = | ಅವನಂಗಡಿ |
| ಕುಲ | + | ಅನ್ನು | = | ಕುಲವನ್ನು |
| ಬೆಟ್ಟ | + | ತಾವರೆ | = | ಬೆಟ್ಟದಾವರೆ |
| ಮಳೆ | + | ಕಾಲ | = | ಮಳೆಗಾಲ |

©KTBS Not to be republished

ಹೀಗೆ ಒಂದು ಪದ ಇನ್ನೊಂದು ಪದದೊಡನೆ ಸೇರಿದಾಗ ಪೂರ್ವಪದದ ಅಂತ್ಯದಲ್ಲಿ ಮತ್ತು ಉತ್ತರಪದದ ಆದಿಯಲ್ಲಿ ಮೂರು ಬಗೆಯ ಕಾರ್ಯಗಳು ನಡೆಯಬಹುದು. ಅಕ್ಷರವೊಂದು ಲೋಪವಾಗಬಹುದು, ಇನ್ನೊಂದು ಆಗಮಿಸಬಹುದು, ಒಂದು ಅಕ್ಷರ ಹೋಗಿ ಅದರ ಸ್ಥಾನದಲ್ಲಿ ಬೇರೆಯೇ ಅಕ್ಷರ ಬರಬಹುದು. ಇದನ್ನು 'ಸಂಧಿಕಾರ್ಯ' ಎನ್ನುವರು.

| | | | | |
|---|---|---|---|---|
| ಪೂರ್ವಪದ | + | ಉತ್ತರಪದ | = | ಸಂಧಿಕಾರ್ಯ |
| ಮಾತು | + | ಅನ್ನು | = | ಮಾತನ್ನು |
| (ಉ) | + | (ಅ) | = | ಉ ಲೋಪ |

ಸಂಧಿಯ ವಿವಿಧ ಪ್ರಕಾರಗಳ ಬಗ್ಗೆ ಮುಂದಿನ ಪಾಠದಲ್ಲಿ ತಿಳಿದುಕೊಳ್ಳೋಣ.

## ಭಾಷಾಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಂಧಿ ಎಂದರೇನು? ಒಂದು ಉದಾಹರಣೆ ಕೊಡಿ.

೨. ಸಂಧಿ ಕಾರ್ಯ ಎಂದರೇನು?

೩. ತೆನೆ + ಅನ್ನು. ಇದರಲ್ಲಿ ಪೂರ್ವಪದ, ಉತ್ತರಪದ ಯಾವುದು ತಿಳಿಸಿರಿ. ಇದರಲ್ಲಿ ನಡೆದ ಸಂಧಿಕಾರ್ಯವನ್ನು ಬರೆಯಿರಿ.

೪. ಈ ಪದಗಳನ್ನು ಬಿಡಿಸಿ ಬರೆಯಿರಿ. ಸಂಧಿ ಕಾರ್ಯ ಹೇಳಿರಿ.

ಸಕ್ಕರೆಯಾಯಿತು, ಕೆಟ್ಟವಳೇನೂ, ದುಃಖಿತನಾದನು

### ಆ. ಓದಿಗೆ ಮನ್ನಣೆ

೧. ಕನ್ನಡ ನಾಡಿನ ಅರಣ್ಯ ಸಂಪತ್ತಿನ ಬಗ್ಗೆ ತಿಳಿಯಿರಿ.
೨. ಕನ್ನಡ ನಾಡಿನ ಶ್ರೇಷ್ಠ ವ್ಯಕ್ತಿಗಳ ಬಗ್ಗೆ ತಿಳಿಯಿರಿ.
೩. ಕನ್ನಡ ನಾಡು ಕುರಿತ ಕವನಗಳನ್ನು ಓದಿರಿ.
೪. ಕನ್ನಡ ನಾಡಿನ ಪ್ರಸಿದ್ಧ ಸ್ಥಳಗಳಿಗೆ ಪ್ರವಾಸ ಹೋಗಿರಿ.

©KTBS Not to be republished

### ಇ. ಶುಭನುಡಿ

೧. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು.
೨. ಕನ್ನಡವೇ ಸತ್ಯ; ಕನ್ನಡವೇ ನಿತ್ಯ.
೩. ಎಲ್ಲಾದರೂ ಎಂತಾದರೂ ಇರು ನೀ ಕನ್ನಡಿಗನಾಗಿರು.
೪. ಕನ್ನಡಕ್ಕೆ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುವುದು.

★★★★★

# ೧೪. ಕರಡಿ ಕುಣಿತ

J8V6B6

ದ. ರಾ. ಬೇಂದ್ರೆ –

**ಪ್ರವೇಶ :** ‘ಕರಡಿ ಕುಣಿತ’ ಕವನವು ಬೇಂದ್ರೆ ಅವರ ಸರಳ ಕವನಗಳಲ್ಲಿ ಒಂದು. ಈ ಕವನವನ್ನು ಓದುತ್ತ ಹೋದಂತೆ ಕವನದ ಒಡಲಿನಲ್ಲಿರುವ ಶೋಷಣೆಯ ಸಂಕೀರ್ಣತೆಯು ಅನುಭವವೇದ್ಯವಾಗುವುದು. ಈ ಕವನದ ಅಂತ್ಯದಲ್ಲಿ ಬೇಂದ್ರೆ ಅವರು ಮಾನವನ ಬುದ್ಧಿಯ ಕುಣಿತ ಎಲ್ಲ ಪ್ರಾಣಿಗಳ ಕುಣಿತಕ್ಕಿಂತ ಮಿಗಿಲಾದುದು ಎಂಬ ತತ್ತ್ವವನ್ನು ಸಾರುತ್ತಾರೆ.



ಕಬ್ಬಿಣ ಕೈಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ದಾಂವ ಬಂದಾನ!
ಗುಣುಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ! ||೧||

ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬವಂತನ ಹಿಡಿದು ತಂದಾನ?
‘ಧಣಿಯರ ಮನಿಮುಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು’ ಅಂದಾನ. ||೨||

ತ್ರೇತಾಯುಗದ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕೀನ ಕಂಡಾನ.
ಜಾಂಬು ನದಿ ದಂಡೆಯ ಜಂಬುನೇರಲ ಹಣ್ಣು
ಕೃತಯುಗದ ಕೊನೆಗೀಂವಾ ಉಂಡಾನ. ॥೩॥

ಬಂದಾರೆ ಬರ್ರೆವ್ವ, ಕಂದನ ತರ್ರೆವ್ವ.
ಅಂಜೀಕಿ ಗಿಂಜೀಕಿ ಕೊಂದಾನ.
ರೋಮ ರೋಮಗಳಲ್ಲಿ ಭೀಮರಕ್ಷಿಯ ಬಲ
ಕೊರಳಾಗ ಕಟ್ಟೆರಿ ಒಂದಾನ. ॥೪॥

'ಕುಣಿಯಲೆ ಮಗನೆ ನೀ' ಅನ್ನೊದೊಂದೇ ತಡ
ತನ್ನsssನ ತಾನನ ತಂದಾನ.
ಮುದ್ದುಕೂಸಿನ ಹಾಂಗ ಮುಸುಮುಸು ಮಾಡುತ್ತ
ಕುಣಿದಾನ ಕುಣತ್ನsssವ ಛಂದಾನ. ॥೫॥

ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು,
ನಡೆದಾನ ಪಡೆದಾನ ಬಂಧ್ನಾsssನ.
'ಕುಣಿಸುವವರ ಹೊಟ್ಟೆ ತಣ್ಣಗಾಗಲಿ' ಎಂದು
ಮುಗಿಲಿಗೆ ಕೈಮುಗಿದು ನಿಂದಾನ. ॥೬॥

ಮನಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿ ಹಿಂದ್ನಾsssನ.
ಕರಡಿಯ ಹೆಸರೀಲೆ ಚರಿತಾರ್ಥ ನಡಿಸ್ಯಾನ
ಪರಮಾರ್ಥ ಎಂಬಂತೆ ಬಂದಾನ. ॥೭॥


ಈ ಮನಷಾ ಎಂದಿಂದೊ ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ.
ಕರಡೀ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ
ಮಿಗಿಲಹುದು ಕವಿ ಕಂಡು ನುಡಿದಾನ. ॥೮॥

©KTBS Not to be republished

**ಕ್ಷೇತ್ರ** : ಓದುವುದು.

**ಸಾಮರ್ಥ್ಯ** : ಪದ್ಯವನ್ನು ಓದಿದ ಬಳಿಕ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು.

## ಕೃತಿಕಾರರ ಪರಿಚಯ



**ದ. ರಾ. ಬೇಂದ್ರೆ : 'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು **ಸಾ. ಶ. ೧೮೯೬ ರಲ್ಲಿ ಧಾರವಾಡದ ಸಾಧನಕೇರಿ**ಯಲ್ಲಿ ಜನಿಸಿದರು. ಇವರು ಪ್ರೌಢಶಾಲಾ ಅಧ್ಯಾಪಕರಾಗಿ, ಸೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಧಾರವಾಡದ ಬಾನುಲಿ ಕೇಂದ್ರದ ಸಲಹೆಗಾರರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ನವೋದಯ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಗರಿ, ನಾಕುತಂತಿ, ನಾದಲೀಲೆ, ಮೇಘದೂತ, ಗಂಗಾವತರಣ, ಸಖೀಗೀತ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ **ನಾಕುತಂತಿ** ಕವನ ಸಂಕಲನಕ್ಕೆ **ಭಾರತೀಯ ಜ್ಞಾನಪೀಠ ಪ್ರಶಸ್ತಿ**ಯು ಲಭಿಸಿದೆ. **ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ** ಭಾಜನರಾಗಿದ್ದಾರೆ.

©KTBS Not to be republished

## ಪದಗಳ ಅರ್ಥ

ಕುಣಿಕೋಲು – ಕುಣಿಸುವವನು ಹಿಡಿದುಕೊಳ್ಳುವ ಕೋಲು.

ಕೈಕಡಗ – ಕೈಗೆ ಹಾಕಿಕೊಳ್ಳುವ ಬಳೆ

ಜಾಂಬವಂತ – ಕರಡಿ

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕರಡಿಯನ್ನು ಕುಣಿಸುವವನ ವೇಷಭೂಷಣ ಹೇಗಿತ್ತು?

೨. ಕರಡಿಯು ಕಾಡಿನಲ್ಲಿ ಏನುಂಡು ಬೆಳೆದಿದೆ?

೩. ಕರಡಿಯು ಏನು ಮಾಡಿದರೆ ಧಣಿಯು ದಾನವನ್ನು ಕೊಡುತ್ತಾನೆ?

೪. ಕರಡಿಯು ಕೈಮುಗಿದು ಏನೆಂದು ಹಾರೈಸುತ್ತದೆ?

೫. ಕರಡಿಯ ಕುಣಿತಕ್ಕಿಂತ ಯಾರ ಬುದ್ಧಿಯ ಕುಣಿತ ಮಿಗಿಲಾದುದು?

## ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಕಬ್ಬಿಣ ____________________

____________________

____________________

____________________ ನಿಂದಾನ!

೨. ಈ ಮನಷಾ ____________________

____________________

____________________

____________________ ನುಡಿದಾನ.

©KTBS
Not to be republished

## ವ್ಯಾಕರಣ ಮಾಹಿತಿ

### ಅ. ಕನ್ನಡ ಸಂಧಿಗಳು

**ಲೋಪಸಂಧಿ :**

೧. ಮೇಲೆ + ಇಟ್ಟು = ಮೇಲಿಟ್ಟು

ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. 'ಮೇಲೆ' ಎಂಬ ಪೂರ್ವಪದದ ಕೊನೆಯಲ್ಲಿರುವ ಸ್ವರ 'ಎ' ಎಂಬುದು ಇಲ್ಲಿ ಲೋಪವಾಗಿದೆ.

೨. ಮುಳ್ಳು + ಅನ್ನು = ಮುಳ್ಳನ್ನು

ಇಲ್ಲಿ 'ಮುಳ್ಳು' ಎಂಬ ಪೂರ್ವಪದದ ಕೊನೆಯಲ್ಲಿರುವ ಸ್ವರ 'ಉ' ಎಂಬುದು ಇಲ್ಲಿ ಲೋಪವಾಗಿದೆ. ಹೀಗೆ **ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದ ಕೊನೆಯಲ್ಲಿರುವ ಸ್ವರವು ಲೋಪವಾದರೆ ಅದನ್ನು 'ಲೋಪಸಂಧಿ'** ಎನ್ನುವರು.

ಇದರಂತೆ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ.

| | | | | | | | |
|---|---|---|---|---|---|---|---|
| ಒಸರುತ್ತ | + | ಇದ್ದ | = | ಒಸರುತ್ತಿದ್ದ | : | ಅ ಸ್ವರ ಲೋಪವಾಗಿದೆ. |
| ಹುಡುಗರು | + | ಎಲ್ಲರು | = | ಹುಡುಗರೆಲ್ಲರು | : | ಉ ಸ್ವರ ಲೋಪವಾಗಿದೆ. |
| ಮೇಲೆ | + | ಏರು | = | ಮೇಲೇರು | : | ಎ ಸ್ವರ ಲೋಪವಾಗಿದೆ. |

**ಆಗಮಸಂಧಿ :**

೧. ಹೊಲ + ಅನ್ನು = ಹೊಲವನ್ನು

ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. ಹೊಲವನ್ನು ಎಂಬ ಪದದಲ್ಲಿ 'ವ' ಎಂಬ ಅಕ್ಷರವು ಬಂದು ಸೇರಿಕೊಂಡಿದೆ.

೨. ಹೊಳೆ + ಅಲ್ಲಿ = ಹೊಳೆಯಲ್ಲಿ

ಇಲ್ಲಿ 'ಹೊಳೆಯಲ್ಲಿ' ಎಂಬ ಪದದಲ್ಲಿ 'ಯ' ಎಂಬ ಅಕ್ಷರವು ಬಂದು ಸೇರಿಕೊಂಡಿದೆ.

ಹೀಗೆ **ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಒಂದು ಅಕ್ಷರ ಆಗಮವಾದರೆ ಅದನ್ನು ಆಗಮಸಂಧಿ** ಎನ್ನುವರು.

©KTBS Not to be republished

ಈ ರೀತಿಯಾದ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ :

| | | | | | |
|---|---|---|---|---|---|
| ಗಡಿಬಿಡಿ | + | ಇಂದ | = | ಗಡಿಬಿಡಿಯಿಂದ | : ಯ ಆಗಮವಾಗಿದೆ. |
| ಆರಂಭ | + | ಆಗು | = | ಆರಂಭವಾಗು | : ವ ಆಗಮವಾಗಿದೆ. |

**ಆದೇಶಸಂಧಿ :**

೧. ಕೋಪ + ಕೊಂಡು = ಕೋಪಗೊಂಡು

ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. ಕೋಪಗೊಂಡು ಎಂಬ ಪದದಲ್ಲಿ ಕ (ಕೊ) ಅಕ್ಷರದ ಬದಲಿಗೆ ಗ (ಗೊ) ಅಕ್ಷರ ಬಂದಿದೆ.

೨. ಮೈ + ತೊಳೆ = ಮೈದೊಳೆ

ಇಲ್ಲಿ ಮೈದೊಳೆ ಎಂಬ ಪದದಲ್ಲಿ 'ತ' (ತೊ) ಅಕ್ಷರದ ಬದಲಿಗೆ 'ದ' (ದೊ) ಅಕ್ಷರ ಬಂದಿದೆ.

ಹೀಗೆ **ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರ ಬಂದರೆ ಅದನ್ನು ಆದೇಶಸಂಧಿ** ಎನ್ನುವರು. ಇಲ್ಲಿ ಉತ್ತರ ಪದದ ಮೊದಲನೆಯ ಅಕ್ಷರವು ಬದಲಾಗುತ್ತದೆ. ಸಾಮಾನ್ಯವಾಗಿ ಕ,ತ,ಪ ಗಳಿಗೆ ಕ್ರಮವಾಗಿ ಗ,ದ,ಬ ಗಳು ಆದೇಶವಾಗಿ ಬರುತ್ತವೆ.

ಈ ರೀತಿಯಾದ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ :

| | | | | | | |
|---|---|---|---|---|---|---|
| ಕುಡು | + | ಕೋಲು | = | ಕುಡುಗೋಲು | : | 'ಕ' ದ ಬದಲು 'ಗ' ಆಗಿದೆ. |
| ಬೆಟ್ಟ | + | ತಾವರೆ | = | ಬೆಟ್ಟದಾವರೆ | : | 'ತ' ದ ಬದಲು 'ದ' ಆಗಿದೆ. |
| ಕಣ್ | + | ಪನಿ | = | ಕಂಬನಿ | : | 'ಪ' ದ ಬದಲು 'ಬ' ಆಗಿದೆ. |

©KTBS Not to be republished

ಕನ್ನಡ ಪದಗಳು ಪರಸ್ಪರ ಸೇರಿ ಸಂಧಿಕಾರ್ಯ ನಡೆದಿದೆ. ಆದ್ದರಿಂದ ಇವುಗಳನ್ನು 'ಕನ್ನಡ ಸಂಧಿ' ಎಂದು ಕರೆಯುತ್ತೇವೆ.

ಇದುವರೆಗೆ ನಾವು ಮೂರು ರೀತಿಯ ಸಂಧಿಕಾರ್ಯಗಳನ್ನು ಗಮನಿಸಿದ್ದೇವೆ.

**ಕನ್ನಡ ಸಂಧಿಗಳು**

೧ ಲೋಪಸಂಧಿ

೨ ಆಗಮಸಂಧಿ

೩ ಆದೇಶಸಂಧಿ

## ಭಾಷಾಭ್ಯಾಸ

### ಅ. ಪದಗಳನ್ನು ಕೂಡಿಸಿ ಬರೆಯಿರಿ.

೧. ಮೇಲೆ + ಇಟ್ಟುಕೊಂಡು  ೨. ಶುಭ್ರ + ಆಯಿತು  ೩. ಬಂಡೆ + ಅನ್ನು

### ಆ. ಪದಗಳನ್ನು ಬಿಡಿಸಿ ಸಂಧಿಯ ಹೆಸರು ತಿಳಿಸಿರಿ.

ಸವಿಗನ್ನಡ, ಮರವನ್ನು, ನಾವೆಲ್ಲಾ, ದಾರಿಯಲ್ಲಿ, ಒಂದೊಂದು.

### ಇ. ಓದಿಗೆ ಮನ್ನಣೆ

೧. ವಿವಿಧ ಪ್ರಾಣಿಗಳನ್ನು ಆಡಿಸುವವರ ಜೀವನದ ಬಗೆಗೆ ಮಾಹಿತಿ ಸಂಗ್ರಹಿಸಿ.

೨. ಪ್ರಾಣಿಗಳ ಬಗೆಗಿನ ಹಾಡುಗಳನ್ನು ಸಂಗ್ರಹಿಸಿ ಹಾಡಿರಿ.

### ಈ. ಶುಭನುಡಿ

೧. ಪ್ರಾಣಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ.

೨. ಪ್ರಾಣಿಗಳನ್ನು ಹಿಂಸಿಸಬಾರದು.

©KTBS
Not to be republished

★★★★★

# ೧೫. ಬೇವು ಬೆಲ್ಲದೊಳಿಡಲೇನು ಫಲ

F8E1W1

**ಪುರಂದರದಾಸರು –**

**ಪ್ರವೇಶ :** ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ. ಯಾವುದೇ ಕೆಲಸ ನಿರ್ವಹಿಸಿದರೂ ಅದರಿಂದ ಫಲಾಫಲವನ್ನು ಅಪೇಕ್ಷಿಸಬಾರದು. ನಿರ್ಮಲ ಭಕ್ತಿ ಇಲ್ಲದಿದ್ದರೆ ಮಾಡಿದ ಕೆಲಸ ಕೂಡ ನಿಷ್ಫಲವಾಗುತ್ತದೆ ಎಂಬುದನ್ನು ಪುರಂದರದಾಸರು ಸರಳ ಉದಾಹರಣೆಗಳ ಮೂಲಕ ಇಲ್ಲಿ ನಿರೂಪಿಸಿದ್ದಾರೆ.

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ ॥

ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ ॥

©KTBS
Not to be republished

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತ ತನುವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ ॥

ಹೀನ ಗುಣಗಳ ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ ॥

**ಕ್ಷೇತ್ರ** : ಓದುವುದು.

**ಸಾಮರ್ಥ್ಯ** : ಪದ್ಯದ ವಿಷಯಗಳನ್ನು ಓದಿ ತಾರ್ಕಿಕವಾಗಿ ತೀರ್ಮಾನಿಸುವುದು.

## ಕೃತಿಕಾರರ ಪರಿಚಯ



**ಪುರಂದರದಾಸರು** : ಹರಿದಾಸ ಸಾಹಿತ್ಯದ **ಅಶ್ವಿನಿದೇವತೆಗಳಲ್ಲಿ ಒಬ್ಬರು.** ಈಗಿನ **ಮಹಾರಾಷ್ಟ್ರದ ಪುರಂದರಗಡದಲ್ಲಿ ಸಾ.ಶ. ಸುಮಾರು ೧೪೮೦** ರಲ್ಲಿ ಜನಿಸಿದರು. ತಂದೆ ವರದಪ್ಪನಾಯಕ, ತಾಯಿ ಸರಸ್ವತಿ. ಪೂರ್ವದ ಹೆಸರು ಶ್ರೀನಿವಾಸನಾಯಕ. ಆಭರಣ ವ್ಯಾಪಾರಿಯಾಗಿದ್ದ ಇವರು ಜೀವನದಲ್ಲಿ ನಡೆದ ಘಟನೆಯಿಂದಾಗಿ ವೈರಾಗ್ಯ ತಾಳಿದರು. ಹರಿಭಕ್ತರಾಗಿ ನೂರಾರು ಕೀರ್ತನೆಗಳನ್ನು ರಚಿಸಿದರು. **'ದಾಸರೆಂದರೆ ಪುರಂದರದಾಸರಯ್ಯ'** ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಕೆಗೆ ಪಾತ್ರರಾದರು. ಪುರಂದರದಾಸರು ಕರ್ನಾಟಕ ಸಂಗೀತದ ಪಿಳ್ಳಾರಿ ಗೀತೆಗಳನ್ನು ರಚಿಸಿ **'ಕರ್ನಾಟಕ ಸಂಗೀತದ ಪಿತಾಮಹ'** ಎನಿಸಿಕೊಂಡರು. ಇವರ ಅಂಕಿತ **'ಪುರಂದರವಿಠಲ.'**

©KTBS Not to be republished

## ಪದಗಳ ಅರ್ಥ

ಕುಟಿಲ – ಮೋಸ, ವಂಚನೆ

ಕುಪಿತ – ಸಿಟ್ಟಿನಿಂದ ಕೂಡಿದ

ಸಟೆ – ಸುಳ್ಳು

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕೀರ್ತನಕಾರರು 'ಹಾವಿಗೆ ಹಾಲೆರೆದೇನು ಫಲ' ಎಂದು ಏಕೆ ಹೇಳಿದ್ದಾರೆ?

೨. ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಏನನ್ನು ಬಿಡಬೇಕು?

೩. 'ಜಪದ ಫಲ' ನಮಗೆ ಸಿಗಬೇಕಾದರೆ ನಾವು ಹೇಗಿರಬೇಕು?

೪. ಪುರಂದರದಾಸರ ಅಂಕಿತ ಯಾವುದು?

## ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಕುಟಿಲವ ______________________

______________________

______________________

______________________ ಫಲ ॥

೨. ಹೀನ ______________________

______________________

______________________

______________________ ಫಲ ॥

## ವ್ಯಾಕರಣ ಮಾಹಿತಿ

### ಅ. ಪ್ರಕೃತಿಭಾವ.

ಕೆಲವು ಸಲ ಸ್ವರಕ್ಕೆ ಸ್ವರವು ಪರವಾದಾಗ ಯಾವುದೇ ರೀತಿಯ ಸಂಧಿ ಕಾರ್ಯವು ನಡೆಯುವುದಿಲ್ಲ. ಇದನ್ನು ಪ್ರಕೃತಿಭಾವ ಎನ್ನುತ್ತೇವೆ.

ಉದಾ: ಅಣ್ಣಾ + ಓಡಿ ಬಾ = ಅಣ್ಣಾ ಓಡಿ ಬಾ.

ಇಲ್ಲಿ 'ಅಣ್ಣಾ' ಮತ್ತು 'ಓಡಿ ಬಾ' ಎಂಬ ಎರಡು ಪದಗಳ ನಡುವೆ ಸಂಧಿಕಾರ್ಯ ನಡೆಯದೆ ಆ ಪದಗಳು ಹಾಗೆಯೇ ಉಳಿದುಕೊಂಡಿವೆ.

ಇದೇ ರೀತಿ ಕೆಲವು ಉದಾಹರಣೆಗಳನ್ನು ಗಮನಿಸಿರಿ.

ಕೃಷ್ಣ + ಎಲ್ಲಿದ್ದೀಯಾ = ಕೃಷ್ಣ ಎಲ್ಲಿದ್ದೀಯಾ?

ಅಕ್ಕಾ + ಎಲ್ಲಿರುವೆ = ಅಕ್ಕಾ ಎಲ್ಲಿರುವೆ?

ಆ + ಅಂಗಡಿ = ಆ ಅಂಗಡಿ

ಈ + ಮನೆ = ಈ ಮನೆ

©KTBS Not to be republished

## ಆ. ವಿರುದ್ಧಾರ್ಥಕ ಪದಗಳು.

ದಿನನಿತ್ಯ ಮಾತನಾಡುವಾಗ, ಬರೆಯುವಾಗ ಬಳಸುವ ಪದಗಳಲ್ಲಿ ವಿರುದ್ಧವಾದ ಅರ್ಥವಿರುವ ಕೆಲವು ಪದಗಳನ್ನು ಇಲ್ಲಿ ಕೊಡಲಾಗಿದೆ.

| ಪದ | | ವಿರುದ್ಧಾರ್ಥಕ ಪದ |
|---|---|---|
| ಅನುಭವ | x | ಅನನುಭವ |
| ಆದಿ | x | ಅನಾದಿ |
| ಉತ್ತಮ | x | ಅಧಮ |
| ಉನ್ನತಿ | x | ಅವನತಿ |
| ಗರ್ವಿ | x | ನಿಗರ್ವಿ |

## ಭಾಷಾಭ್ಯಾಸ

©KTBS Not to be republished

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

(ಶುದ್ಧ, ಅನುಕೂಲ, ಆರೋಗ್ಯ, ಸಫಲ)

**ಮಾದರಿ:** ಅವರಿಗೆ ತಂತ್ರಜ್ಞಾನದಲ್ಲಿ ಅನುಭವವಿದೆ

ಅವರು ತಂತ್ರಜ್ಞಾನದಲ್ಲಿ ಅನನುಭವಿಗಳು

೨. ಪ್ರಕೃತಿ ಭಾವ ಎಂದರೇನು?

೩. ಪ್ರಕೃತಿ ಭಾವಗಳನ್ನು ಹಾಗೂ ಸಂಧಿ ಪದಗಳನ್ನು ವಿಂಗಡಿಸಿ ಬರೆಯಿರಿ.

| | |
|---|---|
| ಓಹೋ, ನಿಧಿ ಸಿಕ್ಕಿತು! | ಅಣ್ಣಾ, ಅಲ್ಲಿ ನೋಡು. |
| ಅಡಿಗಲ್ಲು | ಆ ಅರಸು |
| ಹಳ್ಳಿಯಲ್ಲಿ | ಈ ಮನೆ |

## ಆ. ಓದಿಗೆ ಮನ್ನಣೆ

೧. ಪುರಂದರದಾಸರ ಜೀವನ ಚರಿತ್ರೆಯನ್ನು ಓದಿರಿ.

೨. ಪುರಂದರದಾಸರ ಇತರ ಕೀರ್ತನೆಗಳನ್ನು ಓದಿ, ಅರ್ಥೈಸಿಕೊಳ್ಳಿ.

೩. ದಾಸರ ಕೀರ್ತನೆಗಳನ್ನು ಹಾಗೂ ಅವರ ಜೀವನ ಚರಿತ್ರೆಗಳನ್ನು ಓದಿರಿ.

## ಇ. ಶುಭನುಡಿ

೧. ಸದ್ಗುಣಗಳು ಸ್ವರ್ಗಕ್ಕೆ ಹಾದಿ.

೨. ಕೋಪದಿಂದ ಕೊಯ್ದ ಮೂಗು ಮತ್ತೆ ಬಂದೀತೇ?

೩. ಆಚಾರವೇ ಸ್ವರ್ಗ ಅನಾಚಾರವೇ ನರಕ.

★★★★★

©KTBS
Not to be republished

# ೧೬. ಮಗುವಿನ ಮೊರೆ

ಕಾವ್ಯಾನಂದ (ಸಿದ್ಧಯ್ಯ ಪುರಾಣಿಕ) –

Y8A3V5

**ಪ್ರವೇಶ :** ನಮ್ಮ ಬಾಳು 'ಆರಕ್ಕೆ ಏರಲಿಲ್ಲ ಮೂರಕ್ಕೆ ಇಳಿಯಲಿಲ್ಲ' ಎನ್ನುವಂತೆ ಆಗಬಾರದು. ಹುಟ್ಟಿದ ಮೇಲೆ ವ್ಯರ್ಥವಾಗಿ ಬದುಕದೆ ಏನಾದರೂ ಸಾಧಿಸಬೇಕು. ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಸದಾ ಇರಬೇಕು. ನಮ್ಮ ಇರುವಿಕೆಗೆ ಒಂದು ಗುರಿ ಇರಬೇಕು. ಆ ಗುರಿಯ ಕಡೆಗೆ ನಮ್ಮ ಪಯಣ ಸಾಗಬೇಕು. ನಮ್ಮ ಬದುಕಿಗೆ ಒಂದು ಅರ್ಥ ಬರಬೇಕು ಎಂಬುದೇ ಈ ಪದ್ಯದ ಆಶಯವಾಗಿದೆ.

ಉರಿಯಲಿಲ್ಲ ಆರಲಿಲ್ಲ
ಬಾಳ ಹಣತೆ ಹೇ ಪ್ರಭೋ!
ಬತ್ತಲಿಲ್ಲ ತುಂಬಲಿಲ್ಲ
ಬಾಳ ಒರತೆ ಹೇ ವಿಭೋ !
ಅರಳಲಿಲ್ಲ ಉರುಳಲಿಲ್ಲ
ಬಾಳ ಹೂವು ಹೇ ಪ್ರಭೋ !
ಮುಳುಗಲಿಲ್ಲ ತೇಲಲಿಲ್ಲ
ಬಾಳ ನಾವೆ ಹೇ ವಿಭೋ !
ಏಳಲೇಕೆ ಬೀಳಲೇಕೆ
ಬಾಳಲೇಕೆ ಈ ತೆರ ?
ಗೊಳಮೊಟ್ಟೆಯಿಟ್ಟು ಬಂತು
ಬಾಳ ಮರಿಗೆ ಬೇಸರ !
ಇರವಿಗೊಂದು ಗುರಿಯ ತೋರು
ಇದನೆ ಬೇಡಿಕೊಳ್ಳುವೆ !
ಬದುಕಿಗೊಂದು ಅರ್ಥ ತೋರು
ಅದನೆ ಹಾಡಿಕೊಳ್ಳುವೆ !



©KTBS Not to be republished

**ಕ್ಷೇತ್ರ** : ಆಲಿಸುವುದು.

**ಸಾಮರ್ಥ್ಯ** : ಆಲಿಸಿದ ವಿಷಯವನ್ನು ಗ್ರಹಿಸಿ, ಹಾಗಾದರೆ, ಹಾಗಾಗದಿದ್ದರೆ? ಪ್ರಶ್ನೆಗಳಿಗೆ ಉತ್ತರಿಸುವುದು.

## ಕೃತಿಕಾರರ ಪರಿಚಯ



**ಸಿದ್ಧಯ್ಯ ಪುರಾಣಿಕ** ಅವರು **ಕ್ರಿ. ಶ. ೧೯೧೮ ರಲ್ಲಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ದ್ಯಾಂಪುರ ಗ್ರಾಮದ**ಲ್ಲಿ ಜನಿಸಿದರು. ಇವರ ತಂದೆ ಪಂಡಿತ ಕಲ್ಲಿನಾಥ ಶಾಸ್ತ್ರಿ ಪುರಾಣಿಕ, ತಾಯಿ ದಾನಮ್ಮ ಪುರಾಣಿಕ. ಇವರು ಬಾಲ್ಯದಲ್ಲಿಯೇ ಸಾಹಿತ್ಯ ಮತ್ತು ಸಾಂಸ್ಕೃತಿಕ ವಾತಾವರಣವಿದ್ದ ಮನೆಯಲ್ಲಿ ಬೆಳೆದದ್ದರಿಂದ ಸಹಜವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮವಾದ ಸೇವೆಯನ್ನು ಸಲ್ಲಿಸಲು ಸಾಧ್ಯವಾಯಿತು. **'ವಚನೋದ್ಯಾನದ ಅನುಭಾವಿ'** ಬಿರುದಾಂಕಿತರು. **'ಕಾವ್ಯಾನಂದ'** ಕಾವ್ಯನಾಮಾಂಕಿತರು. ಐ. ಎ. ಎಸ್. ಸ್ಥಾನಾಲಂಕೃತರು. ಇವರು **ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು, ವಚನೋದ್ಯಾನ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹಾಗೂ ಗುಲ್ಬರ್ಗಾದಲ್ಲಿ ನಡೆದ **೫೮** ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವು ಸಂದಿದೆ.

©KTBS Not to be republished

## ಪದಗಳ ಅರ್ಥ

ಒರತೆ – ನೀರು ಜಿನುಗುವ ತಗ್ಗು.
ತೆರ – ರೀತಿ
ನಾವೆ – ದೋಣಿ, ನೀರಿನ ಮೇಲೆ ಪ್ರಯಾಣ ಮಾಡಲು ಬಳಸುವ ಸಾಧನ
ವಿಭು – ದೇವರು, ಪರಮಾತ್ಮ, ಒಡೆಯ.
ಹಣತೆ – ದೀಪ

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಯಾವುದು ಉರಿಯಲಿಲ್ಲ ಆರಲಿಲ್ಲ?

೨. ಯಾವುದು ಮುಳುಗಲಿಲ್ಲ ತೇಲಲಿಲ್ಲ?

೩. ಯಾವುದನ್ನು ನಾವು ದೇವರಲ್ಲಿ ಬೇಡಿಕೊಳ್ಳಬೇಕು?

೪. ನಾವು ಏನೆಂದು ಹಾಡಿಕೊಳ್ಳಬೇಕು?

೫. ಸಿದ್ಧಯ್ಯ ಪುರಾಣಿಕ ಅವರ ಕಾವ್ಯನಾಮ ಯಾವುದು?

## ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ಉರಿಯಲಿಲ್ಲ ______________

______________________

______________________

____________ ಹೇ ವಿಭೋ !

೨. ಇರವಿಗೊಂದು ______________

______________________

______________________

____________ ಹಾಡಿಕೊಳ್ಳುವೆ !

©KTBS Not to be republished

# ವ್ಯಾಕರಣ ಮಾಹಿತಿ

## ಅ. ಕ್ರಿಯಾಪದ

ಕರ್ತೃವಿನ ಕ್ರಿಯೆಯನ್ನು ಹೇಳುವ ಪದವೇ ಕ್ರಿಯಾಪದ. ಇದು ಕರ್ತೃವು ಮಾಡುವ ಕೆಲಸವನ್ನು ತಿಳಿಸುವುದರಿಂದ ವಾಕ್ಯದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

**ಉದಾ :** ರಾಮನು ನದಿಯಲ್ಲಿ ಈಜಿದನು.

ಇಲ್ಲಿ 'ಈಜು' ಪದವು ಕ್ರಿಯೆಯನ್ನು ಸೂಚಿಸುತ್ತದೆ.

## ಆ. ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕ್ರಿಯಾಪದಗಳನ್ನು ಓದಿ ತಿಳಿಯಿರಿ.

೧. ರೈತನು ಗದ್ದೆಯಲ್ಲಿ ದುಡಿಯುವನು.

೨. ರೈತನು ಭತ್ತವನ್ನು ಚೀಲದಲ್ಲಿ ತುಂಬುವನು.

೩. ಎತ್ತುಗಳು ಗದ್ದೆಯಲ್ಲಿ ನೇಗಿಲನ್ನು ಎಳೆಯುವುವು.

## ಭಾಷಾಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕ್ರಿಯಾಪದ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿರಿ.

೨. ತಿನ್ನು, ಓದು, ಆಡು– ಈ ಪದಗಳನ್ನು ಮಾದರಿಯಂತೆ ಬರೆಯಿರಿ.

ಮಾದರಿ : ಕುಣಿ – ಕುಣಿಯುತ್ತಾನೆ – ಕುಣಿದನು.

### ಆ. ಓದಿಗೆ ಮನ್ನಣೆ

೧. ಈ ಪದ್ಯವನ್ನು ಸಾಮೂಹಿಕವಾಗಿ ಹಾಡಿರಿ.

೨. ಈ ಪದ್ಯವನ್ನು ಅಭಿನಯದೊಂದಿಗೆ ರಾಗಬದ್ಧವಾಗಿ ಹಾಡಿರಿ.

### ಇ. ಶುಭನುಡಿ

೧. ಕಾಯಕವೇ ಕೈಲಾಸ.

೨. ದುಡಿಮೆಯೇ ಜೀವನದ ಬಹುಮುಖ್ಯ ಗುರಿ.

©KTBS Not to be republished

★★★★★

# ೧೭. ಮೂಡಲ ಮನೆ

V8C8J8

**ಚಂದ್ರಶೇಖರ ಕಂಬಾರ –**

**ಪ್ರವೇಶ :** ನಾವು ವಿವಿಧ ಜಾತಿಗಳಿಂದ ವಿವಿಧ ಮತಗಳಿಂದ ಬಂದಿರಬಹುದು. ಆದರೆ ಒಂದೇ ದೇಶದಲ್ಲಿ ಬಾಳಿ ಬದುಕುತ್ತೇವೆ. ಹಬ್ಬ ಹರಿದಿನಗಳನ್ನು ಆಚರಿಸುತ್ತಾ ಮೇಲು-ಕೀಳುಗಳನ್ನು ಮರೆಯುತ್ತಾ ಭಾರತಮಾತೆಯೆಂಬ ಒಂದೇ ತಾಯಿ ಮರದ ವಿಶಾಲ ಬಾಹುಗಳಡಿಯಲ್ಲಿ ಜೀವಿಸಬೇಕಾದ ಸತ್ಯವನ್ನು, ಅಗತ್ಯವನ್ನು ಪ್ರಸ್ತುತ ಕವನದಲ್ಲಿ ಕಂಡುಕೊಳ್ಳುತ್ತೇವೆ.



ನಮ್ಮೂರ ಅಗಸ್ಯಾಗ ಆಲದ ಮರ ಬೆಳೆದು
ಹಾದಿ ಬೀದೆಲ್ಲಾ ತಂಪು ನೆರಳ।
ನೆತ್ತಿಗೂದಲ ಹರವಿ ತಪವ ಮಾಡೋನ್ಯಾರ।
ಜಡಿಮುನಿಯ ಜಡಿಯ ಹಾಂಗ ಬಿಳಲ॥
ರೆಂಬಿ ಕೊಂಬಿಯ ಮ್ಯಾಲ ಗೂಡ ಕಟ್ಟಿದಾವ
ರೆಕ್ಕೆ ಬಲಿತ ಹಕ್ಕಿ
ಗೂಡಿನಾಗ । ಮಲಗ್ಯಾವ ಮರಿಹಕ್ಕಿ ॥
ದೂರ ದೇಶದ ವಲಸಿಗ ಹಕ್ಕಿಗು
ಐತಿ ಜಾಗ ಒಳಗ ।
ಬನ್ನಿರಿ । ನೀವು ನಮ್ಮ ಒಳಗ ॥


ಹಳೆಯ ಬಾವಿಯ ತಳದ ನೀರಿನಾಗ
ಹಸರು ಚಿಗರತಾವ ।

ಬೇರಿಗೆ ಮೊಳಕೆ ಒಡಿಯತಾವ ॥
ಭೂತ ಬೇತಾಳ ಜೋತ ಬಾವಲಿ
ಮ್ಯಾಲ ಕೂಗತಾವ ।
ಮರದಾಗ ॥ ಕರಗ ಕುಣಿಯತಾವ ॥
ಮರದ ಎಲೆ ನೆರಳು ಮನೆಯ ಗೋಡೆ ಮ್ಯಾಲ
ಆಡತಾವ ಆಟ
ಮೂಡ್ಯಾವ । ತೊಗಲ ಗೊಂಬಿಯಾಟ
ಕರುಳ ಬಳ್ಳಿಯ ಕತೆಯ ಹೇಳತಾವ
ನೋಡ್ರಿ ಶಾಂತ ಚಿತ್ತ ।
ನಾವೂನು ಅದರ ಭಾಗ ಮಾತ್ರ ॥

**ಕ್ಷೇತ್ರ** : ಮಾತನಾಡುವುದು.
**ಸಾಮರ್ಥ್ಯ** : ಸನ್ನಿವೇಶಕ್ಕೆ ತಕ್ಕಂತೆ ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಯನ್ನು ಬಳಸುವುದು.

©KTBS Not to be republished

## ಕೃತಿಕಾರರ ಪರಿಚಯ



**ಡಾ. ಚಂದ್ರಶೇಖರ ಕಂಬಾರರು** ದಿನಾಂಕ **೦೨-೦೧-೧೯೩೭ರಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರಿ** ಗ್ರಾಮದಲ್ಲಿ ಜನಿಸಿದರು. ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ. ಕಂಬಾರರು **೨೪ ನಾಟಕಗಳು, ೧೦ ಕವನ ಸಂಕಲನಗಳು, ೫ ಕಾದಂಬರಿಗಳು ಮತ್ತು ಹಲವು ಕೃತಿಗಳನ್ನು** ರಚಿಸಿದ್ದಾರೆ. **'ಚಕೋರಿ'** ಅವರ ಮಹಾಕಾವ್ಯ. **ಸಂಗ್ಯಾಬಾಳ್ಯಾ, ಜೋಕುಮಾರಸ್ವಾಮಿ, ಸಿರಿಸಂಪಿಗೆ, ಶಿವರಾತ್ರಿ** ಮುಂತಾದವು ನಾಟಕಗಳು, **ಕರಿಮಾಯಿ, ಸಿಂಗಾರವ್ವ ಮತ್ತು ಅರಮನೆ, ಶಿಖರಸೂರ್ಯ** ಮುಂತಾದವು ಕಾದಂಬರಿಗಳು.

ಶ್ರೀಯುತರು ೨೦೧೦ರ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದ್ದಾರೆ. **ಕೇಂದ್ರ ಸರ್ಕಾರದ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ** ಮುಂತಾದ ಹಲವಾರು ಪ್ರಶಸ್ತಿಗಳು ಶ್ರೀಯುತರಿಗೆ ಲಭಿಸಿವೆ. ಪ್ರಸ್ತುತ **'ಮೂಡಲಮನೆ'** ಕವನವನ್ನು ಅವರ **'ಎಲ್ಲಿದೆ ಶಿವಾಪುರ'** ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಅಗಸಿ – ಊರಿನ ಪ್ರವೇಶದ್ವಾರ, ಊರ ಹೆಬ್ಬಾಗಿಲು.

ಐತಿ – ಇದೆ, ಇರುವುದು.

ಕರಗ – ಒಂದು ಉತ್ಸವದ ಹೆಸರು. ತಲೆಯ ಮೇಲೆ ಕಲಶ ಹೊತ್ತುಕೊಂಡ ಕುಣಿಯುವ ಒಂದು ನೃತ್ಯ.

ಕರುಳಬಳ್ಳಿ – ಸಂಬಂಧವನ್ನು ಕುರಿತು ಹೇಳುವಾಗ ಬಳಸುವ ಪದ.

ಗೂಡಿನ್ಯಾಗ – ಗೂಡಿನಲ್ಲಿ, ಗೂಡಿನೊಳಗೆ.

ಜಡಿ – ಜಡೆ, ಉದ್ದವಾದ ಕೂದಲ ರಾಶಿ, ಜಟೆ,

ಜಡಿಮುನಿ – ವಿಶೇಷವಾಗಿ ಜಡೆಯನ್ನು ಬೆಳೆಸಿದ ಸನ್ಯಾಸಿ.

ಜೋತ ಬಾವಲಿ – ರಾತ್ರಿಯ ಹೊತ್ತು ಸಂಚರಿಸುವ, ಮರದ ರೆಂಬೆಗಳಲ್ಲಿ ನೇತಾಡುವ, ಹಾರುವ ಒಂದು ಪ್ರಾಣಿ.

ತಪ – ತಪಸ್ಸು, ಧ್ಯಾನ.

ತಳ – ಕೆಳಭಾಗ, ಸಮತಟ್ಟಾದ ಪ್ರದೇಶ,

ತೊಗಲುಗೊಂಬೆಯಾಟ – ಚರ್ಮ ಬಳಸಿ ಸಿದ್ಧಪಡಿಸಿದ ಗೊಂಬೆಗಳನ್ನು ಬಳಸಿ ಆಡುವ ಆಟ.

ನಾವೂನು – ನಾವೂ ಸಹ, ನಾವೆಲ್ಲರೂ

ನೆತ್ತಿ – ತಲೆಯ ಮಧ್ಯಭಾಗ.

ಮ್ಯಾಲ – ಮೇಲೆ,

ಮೊಳಕೆ ಒಡಿ – ಮೊಳಕೆ ಬರುವುದು, ಚಿಗುರುವುದು

ಬಲಿತ – ಬೆಳೆದ, ಶಕ್ತಿಯುತವಾದ, ಬಲಿಷ್ಠ

ಬಳಗ – ಗುಂಪು, ಬಂಧುಗಳ ಸಮೂಹ.

ಬಿಳಲ – ಬಿಳಲು. ಮರದ ಕೊಂಬೆಗಳಿಂದ ನೇತಾಡುವ ಬಿಳಲು.

©KTBS Not to be republished

| | | |
|---|---|---|
| ಭಾಗ | – | ಅಂಶ, ಒಂದು ಪಾಲು. |
| ಭೂತ ಬೇತಾಳ | – | ದೆವ್ವ, ಪಿಶಾಚಿ |
| ವಲಸಿಗ | – | ಒಂದು ಪ್ರದೇಶದಿಂದ ಮತ್ತೊಂದು ಕಡೆಗೆ ಹೋಗಿ ನೆಲೆಸುವುದು. |
| ಶಾಂತಚಿತ್ತ | – | ಶಾಂತಮನಸ್ಸು, ತೃಪ್ತ ಮನಸ್ಸು |
| ಹರವು | – | ಹರಡು ವಿಸ್ತರಿಸು ಕೆದರು. |
| ಹಸರ | – | ಹಸಿರು, |

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಆಲದ ಮರ ಎಲ್ಲಿ ಬೆಳೆದು ನಿಂತಿದೆ?

೨. ರೆಂಬೆ ಕೊಂಬೆಯ ಮೇಲೆ ಯಾರು ಗೂಡು ಕಟ್ಟಿದ್ದಾರೆ?

೩. ಬನ್ನಿರಿ, ನೀವು ನಮ್ಮ ಬಳಗ ಎಂದು ಕವಿ ಯಾರಿಗೆ ಹೇಳುತ್ತಿದ್ದಾರೆ?

೪. ಮರದಲ್ಲಿ ಯಾರೆಲ್ಲಾ ಸೇರಿ ಕರಗ ಕುಣಿಯುತ್ತಾರೆ?

೫. ಮರದ ಎಲೆಗಳ ನೆರಳಾಟ ಎಲ್ಲಿ ನಡೆಯುತ್ತಿದೆ?

೬. ಕವಿ ಇಲ್ಲಿ ದೇಶವನ್ನು ಯಾವುದಕ್ಕೆ ಹೋಲಿಸಿದ್ದಾರೆ?

©KTBS Not to be republished

### ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

೧. ನಮ್ಮೂರ ______________________

______________________________

______________________________

__________________ ಹಾಂಗ ಬಿಳಲ॥

೨. ಮೂಡ್ಯಾವ । ______________________

______________________

______________________

______________ ಭಾಗ ಮಾತ್ರ ॥

## ವ್ಯಾಕರಣ ಮಾಹಿತಿ

### ಅ. ಕಾಲಗಳು

ನಡೆದ, ನಡೆಯುತ್ತಿರುವ, ಮತ್ತು ನಡೆಯುವ ಕ್ರಿಯೆಗಳನ್ನು ಸೂಚಿಸುವುದೇ ಕಾಲಗಳು.

ಇವುಗಳಲ್ಲಿ ಮೂರು ವಿಧ : ೧) ಭೂತಕಾಲ

೨) ವರ್ತಮಾನಕಾಲ

೩) ಭವಿಷ್ಯತ್‌ಕಾಲ

©KTBS Not to be republished

**೧) ಭೂತಕಾಲ (ನಡೆದ)**

ಮಹೇಂದ್ರನು ಮನೆಗೆಲಸವನ್ನು ಮಾಡಿದನು.

ರಾಣಿ ಮಾರುಕಟ್ಟೆಗೆ ಹೋದಳು.

ಗುರುಗಳು ಪಾಠವನ್ನು ಹೇಳಿದರು.

**೨) ವರ್ತಮಾನಕಾಲ (ನಡೆಯುತ್ತಿರುವ)**

ರಾಜು ತೋಟದಲ್ಲಿ ಕೆಲಸ ಮಾಡುತ್ತಾನೆ.

ಲಕ್ಷ್ಮಿ ಶಾಲೆಗೆ ಹೋಗುತ್ತಾಳೆ.

ಅವರು ಜಮೀನಿನಲ್ಲಿ ದುಡಿಯುತ್ತಾರೆ.

೩) ಭವಿಷ್ಯತ್‌ಕಾಲ (ನಡೆಯುವ)

ಪ್ರಸಾದ್ ಶಿಕ್ಷಕ ಆಗುವನು.

ಶಾಲಿನಿ ನಟಿ ಆಗುವಳು.

ವೈದ್ಯರು ನಮ್ಮ ಮನೆಗೆ ಬರುವರು.

**ಕೆಳಗಿನ ಕೋಷ್ಟಕವನ್ನು ಗಮನಿಸಿ ಓದಿರಿ.**

**ಕಾಲಗಳು**

| ಭೂತಕಾಲ | ವರ್ತಮಾನಕಾಲ | ಭವಿಷ್ಯತ್‌ಕಾಲ |
|---|---|---|
| ಆಡಿದೆನು | ಆಡುತ್ತೇನೆ | ಆಡುವೆನು |
| ನೋಡಿದೆನು | ನೋಡುತ್ತೇನೆ | ನೋಡುವೆನು |
| ಬೇಡಿದಳು | ಬೇಡುತ್ತಾಳೆ | ಬೇಡುವಳು |
| ಓಡಿದನು | ಓಡುತ್ತಾನೆ | ಓಡುವನು |
| ನಡೆಯಿತು | ನಡೆಯುತ್ತದೆ | ನಡೆಯುವುದು |

©KTBS Not to be republished

## ಭಾಷಾಭ್ಯಾಸ

**ಅ. ಈ ವಾಕ್ಯಗಳಲ್ಲಿ ಅಡಿ ಗೆರೆ ಎಳೆದ ಶಬ್ದ ಯಾವ ಕಾಲವನ್ನು ಸೂಚಿಸುತ್ತದೆ ಬರೆಯಿರಿ.**

೧. ಅರ್ಚನ ಗೆಳತಿಯ ಮನೆಗೆ ಹೋಗುವಳು [ ]

೨. ಚಂದನ ಚೆಂಡಾಟ ಆಡುತ್ತಾನೆ [ ]

೩. ಧನುಶ್ರೀ ಗೀತೆ ಹಾಡಿದಳು [ ]

**ಆ. ಮಾದರಿಯಂತೆ ಸರಿಯಾದ ಶಬ್ದ ಬರೆಯಿರಿ.**

**ಮಾದರಿ:** ರಾಜ್ಯವನ್ನು ಆಳುವವಳು [ ರಾಣಿ ]

೧. ಹಣ, ವಸ್ತುಗಳನ್ನು ಉಚಿತವಾಗಿ ನೀಡುವವ [ ]

೨. ಸೇನೆಯನ್ನು ಮುನ್ನಡೆಸುವವ [ ]

೩. ಕಾಯಿಲೆಯಿಂದ ಹಾಸಿಗೆಯಲ್ಲಿ ಮಲಗಿದವ [ ]

## ಇ. ಓದಿಗೆ ಮನ್ನಣೆ

೧. ಚಂದ್ರಶೇಖರ ಕಂಬಾರರ 'ಕಿಟ್ಟಿ ಕತೆ' ನಾಟಕವನ್ನು ಸಂಪಾದಿಸಿ ಓದಿರಿ.

೨. ದೇಶದ ಬಗ್ಗೆ ದಿನಕರ ದೇಸಾಯಿಯವರ ಚೌಪದಿಗಳನ್ನು ಓದಿಸಿ.

೩. ವಿವಿಧ ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಗುಂಪಿನಲ್ಲಿ ಹಾಡಿರಿ.

## ಈ. ಶುಭನುಡಿ

೧. ಜೀವನ ಬಲು ಚಿಕ್ಕದು. ಅದನ್ನು ಆದಷ್ಟು ಚೊಕ್ಕವಾಗಿ ಕಳೆಯೋಣ.

೨. ನಿನ್ನ ದೇಶಕ್ಕಾಗಿ ನೀನು ಯಾವ ತ್ಯಾಗಕ್ಕಾದರೂ ಸಿದ್ಧನಾಗು.

★★★★★

©KTBS Not to be republished

# ೧೮. ಭುವನೇಶ್ವರಿ

Z2A9R7

**ಬಿ.ವಿ. ಸತ್ಯನಾರಾಯಣರಾವ್ –**

**ಪ್ರವೇಶ :** ಕನ್ನಡ ನಾಡು ಮತ್ತು ನುಡಿಯ ಬಗ್ಗೆ ಎಳೆಯರಲ್ಲಿ ಪ್ರೀತಿ ಮತ್ತು ಅಭಿಮಾನವನ್ನು ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮ್ಮ ನಾಡಿನ ಇತಿಹಾಸ, ಆಳಿದ ಪರಾಕ್ರಮಿಗಳು, ನಾಡನ್ನು ಕಟ್ಟಲು ಶ್ರಮಿಸಿದ ನೇತಾರರು, ಇಲ್ಲಿನ ಶಿಲ್ಪಕಲೆ, ಸಂಸ್ಕೃತಿ ಮುಂತಾದ ಪರಂಪರೆಯನ್ನು, ಅದರ ಶ್ರೀಮಂತಿಕೆಯನ್ನು ಮಕ್ಕಳಿಗೆ ಅರ್ಥಮಾಡಿಸುವ ಮೂಲಕ, ಅವರೆಲ್ಲರಲ್ಲೂ ನಾವು ಎಂತಹ ಪರಂಪರೆಯ ವಾರಸುದಾರರಾಗಿದ್ದೇವೆಂಬ ಬಗ್ಗೆ ಹೆಮ್ಮೆ ಮೂಡಿಸುವ ಆಶಯವನ್ನು ಪ್ರಸ್ತುತ ಪದ್ಯವು ಒಳಗೊಂಡಿದೆ



ಭುವನೇಶ್ವರಿ ಪದ ಪೂಜಿಸಿ ಹೇಳುವೆ ಸಿರಿಗನ್ನಡ ವರ ಚರಿತೆಯನು ।
ಕನ್ನಡ ನಾಡಿನ ಹೆಮ್ಮೆಯ ಮಕ್ಕಳೆ ಕೇಳಿರಿ ನಾಡಿನ ಸೊಬಗನ್ನು ॥೧॥

ಗೆದ್ದು ಪಲ್ಲವರ ಕದಂಬಮಯೂರ ಮೆರೆದನು ವರಬನವಾಸಿಯಲಿ ।
ತದನಂತರ ಚಾಲುಕ್ಯರ ಆಳ್ವಿಕೆ ವೀರತಾಣ ಬಾದಾಮಿಯಲಿ ॥೨॥

ನಾಡಿನ ಹೆಮ್ಮೆಯು ಗಂಗ ಮನೆತನ ರಾಷ್ಟ್ರಕೂಟ ಹೊಯ್ಸಳ ಹಿರಿಮೆ ।
ವಿಜಯನಗರಸಿರಿ ಕೆಳದಿಯ ವೈಭವ ಕನ್ನಡಮಾತೆಯ ನಿಜಗರಿಮೆ ॥೩॥

ಹೊಯ್ಸಳ ಪತನದ ನಂತರ ಬೆಳೆಯಿತು ವಿಜಯನಗರವತಿ ಶೀಘ್ರದಲಿ ।
ಲೋಕವೆ ಬೆರಗಾಗುವ ಸಿರಿಸಂಪದ ಮೆರೆಯಿತು ಈ ಸಾಮ್ರಾಜ್ಯದಲಿ ॥೪॥

ಯುದ್ಧದಿ ಆಂಗ್ಲರನೆದುರಿಸಿ ಗೆದ್ದಳು ಚನ್ನಮ್ಮನು ಕಿತ್ತೂರಿನಲಿ ।
ದ್ರೋಹಕೆ ಸೆರೆಯಾಗುತ ದಿನವನು ದೂಡಿದಳವಳು ಜೈಲಿನಲಿ ॥೫॥

ರಾಜರ ಅಂತಃಕಲಹದಿ ಬಿಳಿಯರು ಭಾರತವನ್ನೇ ನುಂಗಿದರು ।
ಮೈಸೂರಿನ ಹುಲಿ ಟೀಪುವ ಸೋಲಿಸಿ ರಂಗಪಟ್ಟಣವನಮರಿದರು ॥೬॥

ಸ್ವತಂತ್ರ ಭಾರತ ಚಳುವಳಿ ದೇಶದಿ ಬೆಳೆಯಿತು ಗಾಂಧೀ ತತ್ವದಲಿ ।
ಸ್ವದೇಶಿ ಚಳುವಳಿ ಅಸಹಕಾರಗಳು ಮೊಳೆತವು ಹಿರಿಯರ ಮಾರ್ಗದಲಿ ॥೭॥

ನಲವತ್ತೇಳರ ಆಗಸ್ಟಿನಲಿ ಹದಿನಾಲ್ಕರ ನಡುರಾತ್ರಿಯಲಿ ।
ಹಾರಿತು ಸ್ವತಂತ್ರ ಭಾರತಬಾವುಟ ಹೆಮ್ಮೆಯ ಭಾರತ ದೇಶದಲಿ ॥೮॥

ಐವತ್ತಾರರ ನವೆಂಬರೊಂದು–ವಿಶಾಲ ಮೈಸೂರಿನ ಉದಯ ।
ಭಾವನೆ ತುಂಬಲು ಎಪ್ಪತ್ಮೂರರಲಿ ಕರ್ನಾಟಕವಾಗಿಹ ಪರಿಯ ॥೯॥

ಹಿಂದೂ ಮುಸ್ಲಿಂ ಕ್ರೈಸ್ತ ಜೈನ ಬಸವೇಶ್ವರರ ಸಿರಿಪಂಥವಿದೆ ।
ಕೊಂಕಣಿ ಉರ್ದು ತುಳುವಿನ ಸಂಸ್ಕೃತಿ ಕನ್ನಡತನಜಲ ಚಿಮ್ಮುತಿದೆ ॥೧೦॥

"ಕನ್ನಡಗೆಲ್ಲಲಿ ಕನ್ನಡಬಾಳಲಿ" ನಮ್ಮೀ ಕನ್ನಡ ನೆಲದಲ್ಲಿ ।
"ಕನ್ನಡ ಕಲಿಯಿರಿ ಕನ್ನಡ ಪೋಷಿಸಿ" ನಮ್ಮಯ ಕನ್ನಡನಾಡಿನಲಿ ॥೧೧॥

**ಕ್ಷೇತ್ರ** : ಮಾತನಾಡಿ ಚರ್ಚಿಸುವುದು.

**ಸಾಮರ್ಥ್ಯ** : ಪದ್ಯದ ವಿವರ – ಘಟನೆಗಳನ್ನು ವಿವರಿಸುವುದು.

©KTBS Not to be republished

## ಕೃತಿಕಾರರ ಪರಿಚಯ



**ಸತ್ಯವಿಠಲ** ಅಂಕಿತದಿಂದ ಪ್ರಸಿದ್ಧರಾಗಿರುವ **ಬಿ. ವಿ. ಸತ್ಯನಾರಾಯಣರಾವ್** ಅವರು **(೧೯೪೪) ತುಮಕೂರು ಜಿಲ್ಲೆ ಶಿರಾ ತಾಲೂಕಿನ ಬುಕ್ಕಾಪಟ್ಟಣ**ದವರು. ಮೆಕಾನಿಕಲ್ ಇಂಜಿನಿಯರಿಂಗ್ ಪದವೀಧರರಾದ ಇವರು ಪ್ರಕೃತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಉಪಪ್ರಧಾನ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವರು. **ಗೀತ, ಸ್ತೋತ್ರ, ಕಾವ್ಯ, ಲಾವಣಿ, ಗದ್ಯ** ಹೀಗೆ ವಿವಿಧ ಪ್ರಕಾರಗಳಲ್ಲಿ **ಅರವತ್ತು ಕೃತಿ**ಗಳನ್ನು ರಚಿಸಿದ್ದಾರೆ. **ಹನ್ನೊಂದು ಭಾಮಿನಿ ಕಾವ್ಯಗಳನ್ನೂ ಬಸವ ಭಾರತಿ** ಸುದೀರ್ಘ ಲಾವಣಿ ಕಾವ್ಯವನ್ನೂ **ಸಂಪೂರ್ಣ ದೇವೀ ಮಹಾತ್ಮೆ, ಬಸವೇಶ್ವರ ಲೀಲಾ ವೈಭವಂ, ಲಂಕೇಶ್ವರ ಸೋಮನಾಥ ಚಾರಿತ್ರ** ಮುಂತಾದ ಕಾವ್ಯಗಳನ್ನೂ ರಚಿಸಿದ್ದಾರೆ. ಕನ್ನಡ - ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯವುಳ್ಳವರು. **ಬಾಹುಬಲಿಚರಿತಂ, ಗಾಯತ್ರೀರಾಮಾಯಣ, ಸಿರಿಗನ್ನಡ ವೈಜಂತಿ, ಕನ್ನಡನಾಡಚರಿತ್ರೆ, ತತ್ವಭಾರತಿ, ಭಾವಗೀತಗಳು, ಶ್ರೀಶಿವಕುಮಾರಸ್ವಾಮಿಗುರುಚರಿತಂ, ಗುರುದತ್ತಚರಿತಂ** ಇವರ ಪ್ರಮುಖ ಕೃತಿಗಳು ನೃತ್ಯರೂಪಕ ಹಾಗೂ ನಾಮಾವಳಿಗಳನ್ನು ರಚಿಸಿದ್ದಾರೆ.

## ಪದಗಳ ಅರ್ಥ

ಪದ – ಪಾದ, ಕಾಲುಗಳು

ಚರಿತೆ – ಇತಿಹಾಸ

ಸೊಬಗು – ಚೆಲುವು, ಅಂದ

ಮೆರೆ – ಖ್ಯಾತಿಹೊಂದು

ವೀರತಾಣ – ವೀರರ ಸ್ಥಳ

ಹಿರಿಮೆ – ಹೆಚ್ಚುಗಾರಿಕೆ,

ಸಿರಿ – ಶ್ರೀ, ಸಂಪತ್ತು, ಚೆಲುವು

ವೈಭವ – ಐಶ್ವರ್ಯ, ಡೌಲು

ಗರಿಮೆ – ಹಿರಿಮೆ

ಪತನ – ಅವನತಿ, ನಾಶ

©KTBS Not to be republished

| | | |
|---|---|---|
| ಶೀಘ್ರದಲಿ | – | ಬೇಗನೆ, ಅಲ್ಪಸಮಯದಲ್ಲೇ |
| ಬೆರಗಾಗು | – | ವಿಸ್ಮಯಪಡು |
| ಸಿರಿ ಸಂಪದ | – | ಸಂಪತ್ತು |
| ದ್ರೋಹ | – | ಕೇಡನ್ನೆಣಿಸು, ವಿಶ್ವಾಸಘಾತ |
| ಸೆರೆ | – | ಬಂಧನ |
| ಅಂತಃಕಲಹ | – | ಒಳಜಗಳ |
| ಅಮರಿದರು | – | ಆಕ್ರಮಿಸು |
| ಚಳುವಳಿ | – | ಹೋರಾಟ |
| ತತ್ತ್ವ | – | ಸಿದ್ಧಾಂತ, ಸಾರಸತ್ವ |
| ಅಸಹಕಾರ | – | ಸಹಕರಿಸದಿರುವುದು |
| ಮೊಳೆತವು | – | ಚಿಗುರಿದವು |
| ವಿಶಾಲ | – | ವಿಸ್ತಾರವಾದ |
| ಉದಯ | – | ಮೂಡು, ಹುಟ್ಟು |
| ಪರಿ | – | ರೀತಿ |
| ಪಂಥ | – | ಮಾರ್ಗ, ಸಂಪ್ರದಾಯ |
| ಚಿಮ್ಮು | – | ತಳಿ, ನೆಗೆ, ಬೀಸು |
| ಪೋಷಿಸು | – | ಕಾಪಾಡು, ಮೊರೆ |

©KTBS Not to be republished

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಪಲ್ಲವರನ್ನು ಗೆದ್ದು ಮೆರೆದವರು ಯಾರು?

೨. ಬಾದಾಮಿಯಲ್ಲಿ ಆಳ್ವಿಕೆ ನಡೆಸಿದವರಾರು?

೩. ಯಾರ ಪತನದ ನಂತರ ವಿಜಯನಗರ ಬೆಳೆಯಿತು?

೪. ಯುದ್ಧದಲ್ಲಿ ಆಂಗ್ಲರನ್ನು ಎದುರಿಸಿ ಗೆದ್ದವರು ಯಾರು?

೫. ಭಾರತ ಸ್ವಾತಂತ್ರ್ಯದ ಚಳವಳಿ ಯಾರ ತತ್ವದಲ್ಲಿ ಬೆಳೆಯಿತು?

೬. ವಿಶಾಲ ಮೈಸೂರಿನ ಉದಯವಾದುದು ಯಾವಾಗ?

೭. ನಮ್ಮ ನಾಡಿನಲ್ಲಿ ಯಾವುದು ಗೆಲ್ಲಬೇಕು? ಯಾವುದು ಬಾಳಬೇಕು?

**ಆ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

೧. ಹೊಯ್ಸಳ ಪತನದ ______________________

______________________ ಸಾಮ್ರಾಜ್ಯದಲಿ

೨. ಯುದ್ಧದಿ ______________________

______________________ ಜೈಲಿನಲಿ

೩. ಹಿಂದೂ ಮುಸ್ಲಿಂ ______________________

______________________ ಜಲ ಚಿಮ್ಮುತಿದೆ

೪. "ಕನ್ನಡ ಗೆಲ್ಲಲಿ ______________________

______________________ ನಮ್ಮಯ ಕನ್ನಡ ನಾಡಿನಲಿ

©KTBS Not to be republished

## ವ್ಯಾಕರಣ ಮಾಹಿತಿ

ಹಿಂದಿನ ಅಧ್ಯಾಯಗಳಲ್ಲಿ ಕ್ರಿಯಾಪದದ ರೂಪಗಳನ್ನು ಪರಿಚಯಿಸಿಕೊಂಡಿದ್ದೇವಲ್ಲವೆ? ಕ್ರಿಯಾಪದದ ಮೂಲ ರೂಪವನ್ನು 'ಕ್ರಿಯಾಪ್ರಕೃತಿ' ಅಥವಾ 'ಧಾತು' ಎಂದು ಕರೆಯುತ್ತೇವೆ. ಉದಾಹರಣೆಗೆ : ತಿನ್ನುತ್ತಾನೆ, ತಿನ್ನುತ್ತಾಳೆ, ತಿನ್ನುತ್ತದೆ, ತಿನ್ನುವರು, ತಿನ್ನಲಿ, ತಿಂದರು, ತಿಂದಿತು ಮುಂತಾದ ಕ್ರಿಯಾಪದಗಳ ಮೂಲರೂಪವು 'ತಿನ್ನು' ಎಂಬುದಾಗಿದೆ.

ಇದೇ ರೀತಿಯಲ್ಲಿ ನಾವು ಭೂತಕಾಲ, ವರ್ತಮಾನಕಾಲ ಹಾಗೂ ಭವಿಷ್ಯತ್ ಕಾಲಗಳನ್ನು ಪರಿಚಯಿಸಿಕೊಂಡಿದ್ದೇವೆ. ಈ ಮೇಲಿನ 'ತಿನ್ನು' ಎಂಬ ಧಾತುವು ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ಕ್ರಿಯಾಪದ ರೂಪ ಪಡೆದಿರುವುದನ್ನು ಈ ಕೆಳಗಿನ ಪಟ್ಟಿಯಿಂದ ಅರ್ಥಮಾಡಿಕೊಳ್ಳಿರಿ.

## 'ತಿನ್ನು' ಧಾತು

| | ವರ್ತಮಾನಕಾಲ | | ಭೂತಕಾಲ | | ಭವಿಷ್ಯತ್‌ಕಾಲ | |
|---|---|---|---|---|---|---|
| | ಏಕವಚನ | ಬಹುವಚನ | ಏಕವಚನ | ಬಹುವಚನ | ಏಕವಚನ | ಬಹುವಚನ |
| ಪ್ರಥಮ ಪುರುಷ | ಅವನು–ತಿನ್ನುತ್ತಾನೆ | ತಿನ್ನುತ್ತಾರೆ | ತಿಂದನು | ತಿಂದರು | ತಿನ್ನುವನು | ತಿನ್ನುವರು |
| | ಅವಳು–ತಿನ್ನುತ್ತಾಳೆ | ತಿನ್ನುತ್ತಾರೆ | ತಿಂದಳು | ತಿಂದರು | ತಿನ್ನುವಳು | ತಿನ್ನುವರು |
| | ಅದು–ತಿನ್ನುತ್ತದೆ | ತಿನ್ನುತ್ತವೆ | ತಿಂದಿತು | ತಿಂದವು | ತಿನ್ನುವುದು | ತಿನ್ನುವುವು |
| ಮಧ್ಯಮ ಪುರುಷ | ನೀನು–ತಿನ್ನುತ್ತೀಯೆ | ತಿನ್ನುತ್ತೀರಿ | ತಿಂದೆ | ತಿಂದಿರಿ | ತಿನ್ನುವೆ | ತಿನ್ನುವಿರಿ |
| ಉತ್ತಮ ಪುರುಷ | ನಾನು–ತಿನ್ನುತ್ತೇನೆ | ತಿನ್ನುತ್ತೇವೆ | ತಿಂದೆನು | ತಿಂದೆವು | ತಿನ್ನುವೆನು | ತಿನ್ನುವೆವು |

ಈ ಮೇಲಿನ ಪಟ್ಟಿಯಲ್ಲಿ 'ತಿನ್ನು' ಎಂಬ ಧಾತುವು ವರ್ತಮಾನಕಾಲ, ಭೂತಕಾಲ ಮತ್ತು ಭವಿಷ್ಯತ್ಕಾಲಗಳಲ್ಲಿ, ಏಕವಚನ, ಬಹುವಚನ, ಪ್ರಥಮ ಪುರುಷ, ಮಧ್ಯಮ ಪುರುಷ, ಉತ್ತಮ ಪುರುಷಗಳಲ್ಲಿ ಬಳಕೆಯಾಗಿರುವುದನ್ನು ಗಮನಿಸಿದಿರಿ. ಇದೇ ರೀತಿಯಲ್ಲಿ ಇತರ ಧಾತುಗಳನ್ನು ಬಳಸಿ, ಪ್ರಯೋಗ ಮಾಡುವುದನ್ನು ಅಭ್ಯಾಸ ಮಾಡಿರಿ.

© KTBS Not to be republished

## ಭಾಷಾಭ್ಯಾಸ

### ಅ. ಕೊಟ್ಟಿರುವ ಪದಗಳನ್ನು ಸೂಚನೆಯಂತೆ ಬದಲಾಯಿಸಿ.

೧. ಆಡಿದಳು – ಇದನ್ನು ವರ್ತಮಾನಕಾಲಕ್ಕೆ ಬದಲಿಸಿ.

೨. ನೋಡವರು – ಇದನ್ನು ಏಕವಚನಕ್ಕೆ ಬದಲಿಸಿ.

೩. ತಿಂದಿತು – ಇದರ ಮೂಲರೂಪ ಬರೆಯಿರಿ.

೪. ಬರುವುದು – ಇದನ್ನು ಭೂತಕಾಲಕ್ಕೆ ಬದಲಾಯಿಸಿ.

### ಆ. ಇವುಗಳ 'ಧಾತು' ರೂಪ ಬರೆಯಿರಿ.

**ಮಾದರಿ :** ಬಂದರು – ಬರು

೧. ಕುಣಿವಳು – ________

೨. ಕುಡಿಯಿತು – ________

೩. ಬರೆವಳು – ________

೪. ಬಂದನು – ________

೫. ಹೋಗುವವರು – ________

## ಇ. ಓದಿಗೆ ಮನ್ನಣೆ

೧. ಕನ್ನಡ ನಾಡು–ನುಡಿಯನ್ನು ವರ್ಣಿಸುವ ಕನ್ನಡ ಗೀತೆಗಳನ್ನು ಸಂಗ್ರಹಿಸಿ, ಕೇಳಿರಿ.

೨. ಕನ್ನಡಕ್ಕೆ ಸಂಬಂಧಿಸಿದ ಹಾಡುಗಳನ್ನು ಗುಂಪಾಗಿ ಹಾಡಿರಿ.

೩. ಕನ್ನಡಕ್ಕೆ ಹಿರಿಯರು ಸಲ್ಲಿಸಿದ ಸೇವೆಯನ್ನು ಪುಸ್ತಕಗಳಿಂದ ಓದಿ ತಿಳಿಯಿರಿ.

## ಈ. ಶುಭನುಡಿ

೧. ತಾಯಿ–ತನ್ನೂರುಗಳು ಸ್ವರ್ಗಕ್ಕಿಂತಲೂ ಮಿಗಿಲು.

೨. ನಮ್ಮ ನಾಡು–ನುಡಿಗೆ ಗೌರವ ಸಲ್ಲಿಸಬೇಕಾದ್ದು ನಮ್ಮ ಪ್ರಥಮ ಕರ್ತವ್ಯ.

೩. ಕನ್ನಡ ನಾಡಿನಲ್ಲಿ ಕನ್ನಡವೇ ರಾಜ–ರಾಣಿ ಎಲ್ಲವೂ.

©KTBS Not to be republished

★★★★★

## ಪೂರಕ ಪಾಠಗಳು

# ೧. ಪ್ರಾಮಾಣಿಕತೆ

**ಸಮಿತಿ ರಚನೆ –**



ರಾಜಮ್ಮ ದೂರದ ಹೊಳೇಪುರಕ್ಕೆ ಹೋಗಬೇಕಿತ್ತು. ಆಕೆಯಲ್ಲಿ ಸಾಕಷ್ಟು ಹಣವಿರಲಿಲ್ಲ. ಆಕೆ ಬಸ್ ನಿಲ್ದಾಣಕ್ಕೆ ಬಂದು ಹೊಳೇಪುರಕ್ಕೆ ಹೋಗುವ ಬಸ್ಸು ಹತ್ತಿದಳು. ಕಿಟಕಿಯ ಹತ್ತಿರ ಕುಳಿತು ಯೋಚಿಸತೊಡಗಿದಳು. ಇರುವ ಹಣದಲ್ಲಿ ಹೋಗಬಹುದಾದ ದೂರವನ್ನು ಪ್ರಯಾಣಿಸಿ, ಉಳಿದ ದೂರವನ್ನು ನಡೆದುಕೊಂಡೇ ಹೋಗಲು ನಿರ್ಧರಿಸಿದಳು.

ಪಕ್ಕದಲ್ಲಿ ಕುಳಿತಿದ್ದವರು ಅವರಾಗಿಯೇ ಮಾತಿಗೆ ಹೊರಟರು :

'ಎಲ್ಲಿಗೆ ಹೊರಟಿದ್ದೀರಿ?'

ರಾಜಮ್ಮ ಹೇಳಿದಳು : ಹೊಳೇಪುರಕ್ಕೆ.

ಸಹ ಪ್ರಯಾಣಿಕಳು : ಮತ್ತ್ಯಾಕೆ ನೀವು ಅರಸೀಪುರಕ್ಕೆ ಟಿಕೆಟ್ ಕೊಂಡಿರಿ?

ರಾಜಮ್ಮ ಹೇಳಿದಳು : ನನ್ನಲ್ಲಿ ಹಣ ಇದ್ದದ್ದೇ ಅಷ್ಟು.

ಸಹ ಪ್ರಯಾಣಿಕಳು : ಮುಂದೆ?

ರಾಜಮ್ಮ ಹೇಳಿದಳು : ಮುಂದೆ, ನಡೆದೇ ಹೋಗ್ತೇನೆ.

ಸಹ ಪ್ರಯಾಣಿಕಳು : ಅಯ್ಯೋ! ಈಗಿನ ಕಾಲದಲ್ಲೂ ನಿಮ್ಮಂಥವರು ಇದ್ದಾರಲ್ಲ! ಇಲ್ಲಿ ನೋಡ್ರಿ, ಸುಮ್ನೆ ನಿದ್ದೆ ಬಂದವರಂತೆ ಮಲಗಿಬಿಡಿ. ಹೊಳೇಪುರ ಬಂದಾಗ ಇಳಿದು ಹೋಗಿಬಿಡಿ.

ರಾಜಮ್ಮ ಹೇಳಿದಳು : ಇಲ್ಲ. ನಾನು ಅಂಥವಳಲ್ಲ. ನಡೆದುಕೊಂಡೇ ಹೋಗುತ್ತೇನೆ.

ಸಹ ಪ್ರಯಾಣಿಕಳು : ನಿಮ್ಮಿಷ್ಟ.

ರಾಜಮ್ಮ ಹೇಳಿದಳು : ಮನಸ್ಸಿನಲ್ಲೇ ಅಂದುಕೊಂಡಳು, ಇಂಥವರಿಂದಲೇ ಕಾಲಕೆಟ್ಟಿದ್ದು.

ರಾಜಮ್ಮನ ಮನಸ್ಸನ್ನು ಅರ್ಥಮಾಡಿಕೊಳ್ಳುವ ಶಕ್ತಿ ಆ ಸಹ ಪ್ರಯಾಣಿಕಳಿಗೆ ಇರಲಿಲ್ಲ. 'ಅಂಥವರಿಗೆ ಇನ್ನಾದರೂ ಬುದ್ಧಿ ಬರಲಿ' ಎಂದು ಮನಸಾರೆ ಪ್ರಾರ್ಥಿಸುತ್ತ ರಾಜಮ್ಮ ಅರಸೀಪುರದಲ್ಲಿ ಬಸ್ಸಿನಿಂದಿಳಿದು ನಡೆದೇ ಬಿಟ್ಟಳು.

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ರಾಜಮ್ಮ ಎಲ್ಲಿಗೆ ಹೋಗಬೇಕಿತ್ತು?

೨. ರಾಜಮ್ಮ ಬಸ್ಸಿನಲ್ಲಿ ಕುಳಿತು ಏನೆಂದು ಯೋಚಿಸತೊಡಗಿದಳು? ಏಕೆ?

೩. ರಾಜಮ್ಮನ ಪ್ರಾಮಾಣಿಕತೆಗೆ ಸಹ ಪ್ರಯಾಣಿಕಳು ಯಾವ ಸಲಹೆ ಕೊಟ್ಟಳು?

೪. 'ಅಂಥವರಿಗೆ ಇನ್ನಾದರೂ ಬುದ್ಧಿ ಬರಲಿ' ಎಂದು ರಾಜಮ್ಮ ಏಕೆ ಪ್ರಾರ್ಥಿಸಿದಳು?

★★★★★

©KTBS Not to be republished

# ೨. ಮೆಚ್ಚಿನ ಗೊಂಬೆ

**ಸಮಿತಿ ರಚನೆ –**

ಅಮ್ಮ ನಂಗೆ ಪುಟ್ಟದೊಂದು ಗೊಂಬೆ ತಂದ್ಕೊಡೆ
ಗೊಂಬೆ ಜೊತೆ ಆಡುವೆ, ಆಡಿ ಪಾಡಿ ನಲಿಯುವೆ



©KTBS Not to be republished

ಗೊಂಬೆಯೆಂದರೆ ಮಕ್ಕಳಿಗೆ ಬಲು ಪ್ರೀತಿ. ಚಿಕ್ಕಮಕ್ಕಳಿಗೆ ಪ್ರಮುಖ ಆಸ್ತಿ. ದೊಡ್ಡವರೂ ಸಹ ಗೊಂಬೆಗಳನ್ನು ಆಡಿಸಿ ನಲಿಯುತ್ತಾರೆ. ಹಠ ಮಾಡಿ ಅಳುತ್ತಿದ್ದ ಮಕ್ಕಳಿಗೆ ಗೊಂಬೆ ಕೊಟ್ಟರೆ ಸಾಕು ಗಪ್‌ಚುಪ್. ಗೊಂಬೆಗಳು ಮಕ್ಕಳ ಕೈಯಲ್ಲಿ ಮಕ್ಕಳಾಗಿ ಬಿಡುತ್ತವೆ.

ಗೊಂಬೆ ಕಂಡರೆ ಸಾಕು, ಮಕ್ಕಳ ಮುಖದಲ್ಲಿ ನಗು. ಚಿಕ್ಕ ಮಕ್ಕಳು ಎತ್ತಿ, ಬಿಸಾಡಿ, ನೂಕಿ, ಎಳೆದು, ಜಗ್ಗಿ ನಲಿಯುತ್ತಾರೆ. ಸ್ವಲ್ಪ, ಸ್ವಲ್ಪ ದೊಡ್ಡವರಾದಂತೆ ಗೊಂಬೆಗಳನ್ನು ಮುದ್ದಿಸುತ್ತಾರೆ. ತಾಯಿ ತಮ್ಮನ್ನೆಲ್ಲ ಹೇಗೆ ಪೋಷಣೆ ಮಾಡುತ್ತಾಳೋ ಹಾಗೆಯೇ ಮಕ್ಕಳು ಗೊಂಬೆಗಳನ್ನು ನೋಡಿಕೊಳ್ಳುತ್ತಾರೆ. ಅವುಗಳಿಗೆ ತಿಂಡಿ ತಿನ್ನಿಸುವುದು, ಸ್ನಾನ ಮಾಡಿಸುವುದು, ಮಲಗಿಸಿ ಲಾಲಿ ಹಾಡುವುದು, ಬಟ್ಟೆ ತೊಡಿಸುವುದು, ಶೃಂಗಾರ ಮಾಡುವುದು–ಹೀಗೆ ಎಲ್ಲವನ್ನೂ ಪ್ರೀತಿಯಿಂದ ಮಾಡುತ್ತಾರೆ.

ಮಕ್ಕಳ ಕೈಯಲ್ಲಿ ಗೊಂಬೆಗಳಿಗೆ ಜೀವ ಬರುತ್ತದೆ. ಯಾರಾದರೂ ತಮ್ಮ ಗೊಂಬೆಗಳಿಗೆ ಕೀಟಲೆ ಮಾಡಿದರೆ ಮಕ್ಕಳು ಸುಮ್ಮನಿರುವುದಿಲ್ಲ. ಗೊಂಬೆಗೆ ನೋವಾಯಿತೆಂದು ಎತ್ತಿ ಮುದ್ದಾಡಿ ಸಮಾಧಾನ ಮಾಡುತ್ತಾರೆ. ಕೈಜಾರಿದ ಗೊಂಬೆ ಕೆಳಕ್ಕೆ ಬಿದ್ದರಂತೂ ಮಕ್ಕಳು ಅತ್ತೇ ಬಿಡುತ್ತಾರೆ! ಅದನ್ನು ಎತ್ತಿಕೊಂಡು ಹಾಡು ಹೇಳಿ ಸಮಾಧಾನ ಮಾಡುತ್ತಾರೆ.

ಅಳಬೇಡ ಅಳಬೇಡ ಗೊಂಬವ್ವ ನೀನು
ಜರತಾರಿ ಲಂಗ ಕೊಡಿಸುವೆನು ನಾನು

ಗೊಂಬೆಗಳನ್ನು ವಿವಿಧ ವಸ್ತುಗಳಿಂದ ತಯಾರಿಸುತ್ತಾರೆ. ಮರ, ಮಣ್ಣು, ಪ್ಲಾಸ್ಟಿಕ್, ರಬ್ಬರ್, ಪಿಂಗಾಣಿ, ಬಟ್ಟೆ, ಹತ್ತಿ, ಬಿದಿರು, ಕಾಗದಗಳಿಂದ ಗೊಂಬೆಗಳು ಸಿದ್ಧವಾಗುತ್ತವೆ. ಇತ್ತೀಚೆಗೆ ಗೊಂಬೆಗಳು ವಿವಿಧ ರೂಪಗಳನ್ನು ಪಡೆದಿವೆ. ಮನುಷ್ಯ, ಪ್ರಾಣಿ, ಪಕ್ಷಿ, ಕೀಟ ಎಲ್ಲ ರೂಪಗಳಲ್ಲೂ ಜನ್ಮತಾಳಿವೆ. ವಿವಿಧ ವಸ್ತುಗಳಲ್ಲೂ ಗೊಂಬೆಯ ರೂಪ! ಗೊಂಬೆಯ ಪೆನ್ಸಿಲ್ ಗೊಂಬೆಯ ಪೆನ್ನು, ಗೊಂಬೆಯ ತಿಂಡಿತಿನಿಸುಗಳು ಹೀಗೆ ಎಲ್ಲದರಲ್ಲೂ ಗೊಂಬೆಗಳು ಕಾಣಸಿಗುತ್ತವೆ.



©KTBS Not to be republished

ಜಾತ್ರೆ ಉತ್ಸವಗಳಲ್ಲಿ ಗೊಂಬೆಗಳದ್ದೇ ಆಕರ್ಷಣೆ. ವೈವಿಧ್ಯಮಯ ಗೊಂಬೆಗಳು ಅಂಗಡಿಗಳಲ್ಲಿ ಕೈ ಬೀಸಿ ಕರೆಯುತ್ತವೆ. ಉತ್ಸವಗಳಲ್ಲಿ ಕುಣಿಯುವ ಗೊಂಬೆಗಳನ್ನು ನೋಡುವುದು ಎಲ್ಲಿಲ್ಲದ ಆನಂದ! ಅವುಗಳನ್ನು ನೋಡಿದರೆ ಹರ್ಷ–ನಗು ಒಟ್ಟಿಗೇ ಬರುತ್ತವೆ. ಜೋಕರ್ ಗೊಂಬೆಗಳಂತೂ ತಾನೂ ನಗುತ್ತ ಎಲ್ಲರನ್ನೂ ನಗಿಸುತ್ತವೆ.

ನಮ್ಮ ನಾಡಹಬ್ಬ ದಸರಾದಲ್ಲಿ ಮನೆ–ಮನೆಗಳಲ್ಲೂ ಗೊಂಬೆಗಳನ್ನು ಅಲಂಕರಿಸುತ್ತಾರೆ. ಅಲಂಕರಿಸಿದ ನೂರಾರು ಗೊಂಬೆಗಳನ್ನು ಒಟ್ಟಿಗೆ ನೋಡುವುದೇ ಒಂದು ಹಬ್ಬ! ಅವುಗಳ ಶೃಂಗಾರ, ಜೋಡಣೆ ಅಲಂಕಾರ ಬಲು ಸುಂದರ, ಸ್ಪ್ರಿಂಗ್ ಗೊಂಬೆಗಳು, ಕೀ ಗೊಂಬೆಗಳು, ಕೀಲು ಗೊಂಬೆಗಳು, ಯಂತ್ರ ಗೊಂಬೆಗಳು, ಸಣ್ಣ ದೊಡ್ಡ ವಿವಿಧ ರಂಗಿನ ಗೊಂಬೆಗಳು, ವಿವಿಧ ಆಟಗಳ ಮೂಲಕ ಸಂತೋಷಕೊಡುತ್ತವೆ. ನಿಜವಾಗಿ ಜೀವವಿದ್ದವುಗಳಂತೆ ವರ್ತಿಸುತ್ತವೆ.

ಎಲ್ಲರ ಮನೆಗಳಲ್ಲೂ ಗೊಂಬೆಗಳು ಸ್ಥಾನ ಪಡೆದಿವೆ. ಗೊಂಬೆಗಳು ಮನುಷ್ಯನಿಗೆ ಅನೇಕ ರೀತಿಯಲ್ಲಿ ಜೀವನ ಪಾಠವನ್ನೂ ಹೇಳುತ್ತವೆ! ಗೊಂಬೆಗಳು ಯಾರ ಹೊಗಳಿಕೆಗೂ ತೆಗಳಿಕೆಗೂ ಜಗ್ಗುವುದಿಲ್ಲ.

ಆಡಿಸಿ ನೋಡು ಬೀಳಿಸಿ ನೋಡು ಉರುಳಿಹೋಗದು
ಏನೇ ಬರಲಿ ಯಾರಿಗೂ ಸೋತು ತಲೆಯಬಾಗದು

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಗೊಂಬೆಗಳನ್ನು ಯಾವ ಯಾವ ವಸ್ತುಗಳಿಂದ ತಯಾರಿಸುತ್ತಾರೆ?

೨. ಗೊಂಬೆಗೆ ನೋವಾದರೆ ಮಕ್ಕಳು ಏನು ಮಾಡುತ್ತಾರೆ?

೩. ಅಳುವ ಗೊಂಬೆಗೆ ಮಕ್ಕಳು ಏನೆಂದು ಹಾಡಿ ಸಮಾಧಾನ ಮಾಡುತ್ತಾರೆ?

೪. ಯಾವ ಹಬ್ಬದಂದು ಮನೆಗಳಲ್ಲಿ ಗೊಂಬೆಗಳನ್ನು ಅಲಂಕರಿಸುತ್ತಾರೆ?

೫. ಗೊಂಬೆಗಳು ಯಾವ ಯಾವ ರೂಪಗಳಲ್ಲಿ ಜನ್ಮತಾಳಿವೆ?

©KTBS Not to be republished

★★★★★

# ೩. ಕಾಮನ ಬಿಲ್ಲು

– ನಿಂಗಣ್ಣ ಕುಂಟಿ



ರವಿಯದೊ ಹೊರಟನು ಪಡುವಣಕೆ
ತಾಯಿಯ ಮನೆಯನು ಸೇರಲಿಕೆ

ಸಂಜೆಯ ಹೊತ್ತಿನ ಹೂಬಿಸಿಲು
ಕಣ್ಣಿಗೆ ಹಿಗ್ಗಿನ ಅಂದದ ಹೊನಲು

ಬಿಳಿತೆರೆ ಮೋಡದ ಅಂಚಿನಲಿ
ಹನಿಮಳೆ ಬೀಳುವ ಹೊತ್ತಿನಲಿ

ತುಂತುರು ಹನಿಗಳು ಬೀಳುತ್ತಿವೆ.
ಕಾಮನ ಬಿಲ್ಲನು ಮೂಡಿಸಿವೆ

ಕಾಮನ ಬಿಲ್ಲನು ನೋಡಲ್ಲಿ
ಮಣಿದಿಹ ಬಿಲ್ಲದು ಮುಗಿಲಲ್ಲಿ

ಕಿತ್ತಳೆ ಕೇಸರಿ ಹಳದಿ ಕೆಂಪು
ನೀಲಿ ಕಂದು ನೇರಿಳೆ ತಂಪು

ನೆಲಕೂ ಮುಗಿಲಿಗೂ ಮುಟ್ಟಿಹುದು
ಕಣ್ಣಿಗೆ ಹಬ್ಬವ ತಂದಿಹುದು

ಸೂರ್ಯನು ಮುಳುಗಿದ ಕತ್ತಲು ಬಂದಿತು
ಮೋಡವು ಚದುರಿತು ಮಳೆಯೂ ನಿಂತಿತು

ಮರೆಯಲಿ ಓಡಿತು ಕಾಮನ ಬಿಲ್ಲು
ಕಾಣದಾಯಿತು ಮಾಯದ ಬಿಲ್ಲು

©KTBS Not to be republished

## ಕೃತಿಕಾರರ ಪರಿಚಯ



**ನಿಂಗಪ್ಪ ಹನುಮಪ್ಪ ಕುಂಟಿ** (ನಿಂಗಣ್ಣ ಕುಂಟಿ ಇಟಗಿ) ಇವರು **೧೯೪೩ರಲ್ಲಿ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಇಟಗಿ** ಗ್ರಾಮದಲ್ಲಿ ಜನಿಸಿದರು. ಇವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಹಾಗೂ ಮಕ್ಕಳ ಸಾಹಿತಿಗಳಾಗಿ ಕನ್ನಡ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡಿರುವ ಇವರು ಅನೇಕ ಶಿಶುಪ್ರಾಸಗಳನ್ನು ರಚಿಸಿದ್ದಾರೆ. ಇವರ **'ಚಂದಪ್ಪನ ಶಾಲೆ'** ಕವನ ಸಂಕಲನ ಪ್ರಕಟಗೊಂಡಿದೆ. ಶ್ರೀಯುತರಿಗೆ ಮಕ್ಕಳ ಸಾಹಿತ್ಯ ರಚನೆಗಾಗಿ ಹಲವು ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

## ಅಭ್ಯಾಸ

©KTBS Not to be republished

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ರವಿಯು ಯಾವ ದಿಕ್ಕಿಗೆ ಹೊರಟನು?

೨. ಕಾಮನ ಬಿಲ್ಲು ಎಲ್ಲಿಂದ ಎಲ್ಲಿಯವರೆಗೆ ಆವರಿಸಿದೆ?

೩. ಕಾಮನ ಬಿಲ್ಲಿನಲ್ಲಿರುವ ಬಣ್ಣಗಳನ್ನು ಹೆಸರಿಸಿ.

೪. ಕಾಮನ ಬಿಲ್ಲು ಯಾವಾಗ ಮರೆಯಾಯಿತು?

೫. ಕಾಮನ ಬಿಲ್ಲು ಯಾವಾಗ ಮೂಡುತ್ತದೆ?

★★★★★

# ೪. ನನ್ನ ರಟ್ಟೆಯ ಬಲ

– ಬುದ್ದಣ್ಣ ಹಿಂಗಮಿರೆ

ನನಗೆ ಹಂಬಲವೊಂದೆ
ದುಡಿದೆ ದುಡಿವುದೆ ಸತತ
ಲೆಕ್ಕಿಸದೆ ದುಃಖವನು
ಎಲುಬು, ಕಬ್ಬಿಣದಂತೆ ಗಟ್ಟಿಗೊಳಲಿ

ಈ ಹಗಲು ಇನ್ನಷ್ಟು ಉದ್ದವಾಗಲಿ,
ಮಣ್ಣಿನಲಿ, ಕಣ್ಣಿನಲಿ
ಗದ್ದೆಯಲಿ, ಗೆಡ್ಡೆಯಲಿ
ಸುರಿಸುವೆನು ಬೆವರು ಹೊಳೆ
ನಾ ದುಡಿವ ನಾಡ ನೆಲ ಹಿರಿದಾಗಲಿ!
ನನ್ನ ಹೆಮ್ಮೆಗೆ ಸದಾ ಗರಿಯೊಡೆಯುತಿರಲಿ,

ನೆಲಕೆ ಗೆಯ್ಯುವ ಕರ್ಮ
ನನ್ನ ಜೀವನ ಧರ್ಮ
ಅಖಂಡ ಕಾಯಕ ತಪಸು
ಮಣ್ಣ ಕಣ ಕಣ ನನ್ನ ಸಿರಿಯಾಗಲಿ

ದುಡಿವುದೊಂದೇ ನಿರಂತರ ಛಲವಾಗಲಿ
ನನ್ನ ಪ್ರಾಮಾಣಿಕತೆಗೆ
ಈ ನೆಲ–ಜಲ–ಬಾನು
ತಕ್ಕಂತೆ ಫಲ ನೀಡಲಿ
ನನ್ನ ರಟ್ಟೆಯ ಬಲವು ಹಿಗ್ಗುತಿರಲಿ!

©KTBS
Not to be republished

## ಕೃತಿಕಾರರ ಪರಿಚಯ



**ಡಾ. ಬುದ್ದಣ್ಣ ಹಿಂಗಮಿರೆ :** ಬುದ್ದಣ್ಣ ಹಿಂಗಮಿರೆ ಅವರು **೧೯೩೩ ರಲ್ಲಿ ಬೆಳಗಾವಿ ಜಿಲ್ಲೆಯ ರಾಜಾಪೂರದ ಆರಗದಲ್ಲಿ** ಜನಿಸಿದರು. ಇವರು ಅಧ್ಯಾಪಕರಾಗಿ, ರಶಿಯನ್ ಭಾಷೆಯ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು **ಉದಯರಾಗ, ಗುಬ್ಬಿಯ ಹಾಡು. ಹುಲ್ಲುಗೆಜ್ಜೆ, ಶಬ್ದ ರಕ್ತ ಮತ್ತು ಮಾಂಸ, ಹದ್ದುಗಳ ಹಾಡು** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಸಾಹಿತ್ಯ ಅಕಾಡೆಮಿ** ಗೌರವ ಪ್ರಶಸ್ತಿಗಳು ಲಭಿಸಿವೆ.

## ಅಭ್ಯಾಸ

©KTBS Not to be republished

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ರೈತನ ಹಂಬಲ ಯಾವುದು?

೨. ರೈತನ ನಿರಂತರ ಛಲ ಯಾವುದು?

೩. ರೈತನು ಯಾವುದಕ್ಕೆ ತಕ್ಕಫಲ ನೀಡಲೆಂದು ಆಶಿಸುತ್ತಾನೆ?

೪. ನಾಡನೆಲ ಏನಾಗಲೆಂದು ರೈತ ಹಂಬಲಿಸುತ್ತಾನೆ?

೫. ರೈತನು ಯಾವುದು ಸಿರಿಯಾಗಲಿ ಎನ್ನುತ್ತಾನೆ?

★★★★★

# ೫. ಹಿನ್ನುಡಿ

– ದಿನಕರ ದೇಸಾಯಿ

ನನ್ನ ಭಾವದ ಕವನ,
ನನ್ನ ಗಾನದ ತನನ,
ನನ್ನದೆಂಬುವ ಜಂಬ ಸಾಕು ದೇವಾ.
ನಿನ್ನ ಕೃಪೆಯಿಂದಲೇ
ಬನ್ನಿ ಗಿಡ ಹೂ ಬಿಡಲು,
ನಿನ್ನ ಸೇವೆಗೆ ನೀನೆ ತಂದೆ ಹೂವ !


ಹಕ್ಕಿಗಳ ಇಂಚರವು,
ಚುಕ್ಕಿ ಮಿಂಚುವ ತೆರವು,
ಉಕ್ಕಿ ಮೊರೆಯುವ ತೆರೆಯು ನಿನ್ನ ಕವನ.
ನನ್ನದೆಂಬುವ ಗೀತ
ನಿನ್ನದೇ ಸಂಗೀತ,
ಎಲ್ಲೆಲ್ಲಿಯೂ ನಿನ್ನ ಭಾವ–ಪವನ.



ನನ್ನ ಕನ್ನಡ ನುಡಿಗೆ
ನಿನ್ನ ಹಿನ್ನುಡಿಯಿರಲು,
ನನ್ನದೆಂಬುದು ತಾನೆ ಕನ್ನಡಿಯ ಬಿಂಬ;
ಪೊಡವಿಯಲಿ ನಾಲ್ದೆಸೆಗೆ
ನೀನೆ ಹಾಡುತಲಿರಲು,
ನಿನ್ನ ಭಾವವೆ ನನ್ನ ನುಡಿ–ಗುಡಿಯ ಕಂಬ !

©KTBS Not to be republished

## ಕೃತಿಕಾರರ ಪರಿಚಯ



**ದಿನಕರ ದೇಸಾಯಿ (1909 – 1982) :** ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರು. **"ಚುಟುಕ ಬ್ರಹ್ಮ"**ನೆಂದೇ ಖ್ಯಾತರು. **ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಅಲಗೇರಿ** ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ದಿನಕರರು ತನ್ನ ಪ್ರಾಥಮಿಕ, ಪ್ರೌಢಶಿಕ್ಷಣಗಳನ್ನು ಹಳ್ಳಿಯಲ್ಲೇ ಪೂರೈಸಿ ಮೆಟ್ರಿಕ್ ಓದಲು ಧಾರವಾಡಕ್ಕೆ ಹೋದಾಗ **ಬಿಎಂಶ್ರೀ** ಅವರ "ಇಂಗ್ಲಿಷ್ ಗೀತಗಳು" ಕವನಸಂಕಲನವನ್ನು ಓದಿ ಬೆರಗಾದರು. ನಂತರ ಕಾವ್ಯಕ್ಷೇತ್ರಕ್ಕೆ ಪ್ರವೇಶಿಸಿದ ದಿನಕರರು ತಮ್ಮ ಜೀವಿತದಲ್ಲಿ ಬರೆದ ಕವಿತೆಗಳು ನೂರಾರು, ಚುಟುಕಗಳು ಸಾವಿರಾರು. ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದರು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಸಂಸದರಾಗಿಯೂ ಚುನಾಯಿತರಾಗಿ ರಾಜಕಾರಣದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದರು.

**ನನಗೇಕೆ ಷಷ್ಠ್ಯಬ್ದಿ, ಸಾಕು ಬರವಣಿಗೆ**
**ಕವಿಗೆ ಬೇಕಾಗಿಲ್ಲ ಯಾವ ಮೆರವಣಿಗೆ**
**ಮೂಲೆಯಲಿ ಕೂತು ಬರೆದರೆ ಒಂದು ಪದ್ಯ**
**ತಾಯ್ನುಡಿಗೆ ಅರ್ಪಿಸಿದ ಹಾಗೆ ನೈವೇದ್ಯ**

– ಎಂಬ ಚುಟುಕದಲ್ಲಿ ಅವರ ಬದುಕಿನ ಧ್ಯೇಯ–ಧರ್ಮಗಳು ಸ್ಪಷ್ಟವಾಗುತ್ತವೆ.

©KTBS Not to be republished

## ಅಭ್ಯಾಸ

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಯಾವ ಜಂಬ ತನಗೆ ಬೇಡ ಎಂದು ಕವಿ ಹೇಳುತ್ತಾರೆ?

೨. "ನಿನ್ನ ಸೇವೆಗೆ ನೀನೆ ತಂದೆ ಹೂವ" – ಈ ಸಾಲಿನ ಅರ್ಥವನ್ನು ವಿವರಿಸಿ.

೩. ಪ್ರಕೃತಿಯ ಯಾವ್ಯಾವ ಸಂಗತಿಗಳು ದೇವರ ಸಂಗೀತವಾಗಿವೆ?

೪. ಯಾವುದು ಕನ್ನಡಿಯ ಬಿಂಬ?

೫. "ಹಿನ್ನುಡಿ" ಕವಿತೆಯ ಒಟ್ಟು ಭಾವವೇನು ಎಂಬುದನ್ನು ವಿವರಿಸಿ.

★★★★★